UNIVERSAL
LIBRARY
OU_198699
UNIVERSAL
LIBRARY

ಕರ್ನಾಟಕ ಸತ್ಪುರುಷ ಮಂಡಲ, ಭಾಗ ೩.

# ಶ್ರೀಮಾಣಿಕಪ್ರಭುಗಳ ಚರಿತ್ರ.

—ಲೇಖಕ—

ರಾಮಚಂದ್ರ ತ್ರ್ಯಂಬಕ ಕಸ್ತೂರ,

ಆ[illegible].

—ಪ್ರಕಾಶಕ—

ಯಲ್ಲಪ್ಪ ಗುರುಸಿದ್ಧಪ್ಪ [illegible],

[illegible].

1922

ಕಿಂ ೮ ಆಣೆ.

“ಆನಂದವನ ಆಗಡಿಯ ಶ್ರೀ
ಶೇಷಾಚಲ ಪ್ರಿಂಟಿಂಗ ಪ್ರೆಸ್ಸಿ”
ನಲ್ಲಿ ಬಿ. ಪ್. ಕಾಳೆ, ಇವರಿಂದ
ಮುದ್ರಿಸಲ್ಪಟ್ಟಿತು.

# ಪ್ರಸ್ತಾವನೆ.

ಶ್ರೀ ಪ್ರಭುಗಳ ಪ್ರಾಸಾದಿಕ ಚರಿತ್ರವು ಇಂದಿಗೆ ಶ್ರೀ ಗುರು ಕೃಪೆಯಿಂದ ಸಂಪೂರ್ಣವಾಯಿತು. ನಮ್ಮ ಕರ್ನಾಟಕ ಸತ್ಪುರುಷರಲ್ಲಿ ಹಲವು ವಿಧದಿಂದ ಲೋಕಕಲ್ಯಾಣವನ್ನು ಸಾಧಿಸಿ ಹಿಂದೂ-ಮುಸಲ್ಮಾನರಲ್ಲಿ ಸ್ನೇಹಭಾವವನ್ನು ಬೆಳೆಯಿಸಿದವರಲ್ಲಿ ಮುಂದರಿದವರೆಂದರೆ ಇವರೇ ಮೊದಲನೆಯವರೆಂದು ಹೇಳಲಾಗುವದು. ಸಮಾಜಗಳಲ್ಲಿ ಐಕ್ಯವನ್ನು ಹುಟ್ಟಿಸುವದು, ಪರಸ್ಪರರಲ್ಲಿ ಸೋದರ ಭಾವವನ್ನು ಹುಟ್ಟಿಸುವದು ನಮ್ಮ ಪ್ರಭುಗಳ ಪ್ರೀತಿಯ ಕೆಲಸಗಳಾಗಿದ್ದವು. ಅವರ ಈದಿವ್ಯ ಚರಿತ್ರೆಯು ಹಲವು ಸದ್ಬೋಧಗಳನ್ನೊಳಕೊಂಡದ್ದರಿಂದ ಇದು ಸಮಾಜಕ್ಕೆ ಕಲ್ಯಾಣಕಾರಕವಾದೀತೆಂದು ನಮ್ಮ ನಂಬಿಗೆಯಿದೆ. ಅವರು "ಜಶಾಸತಸೆ" ಎಂಬ ಮರಾಠೀ ಗಾದೆಯಂತೆ ನಡೆದುಕೊಂಡದ್ದರಿಂದ ಅವರ ಆಚರಣೆಯು ಸಮಾಜ ಸುಧಾರಣೆಗೆ ಬಹು ಮಟ್ಟಿಗೆ ಕಾರಣವಾದೀತೆಂದು ಹೇಳಲಾಗುವದು. ಸುಜ್ಞರಾದ ನಮ್ಮ ವಾಚಕರು ಈ ಪವಿತ್ರ ಚರಿತ್ರೆಯನ್ನು ಶಾಂತಮನಸ್ಸಿನಿಂದ ಪಠಣ ಮಾಡಿ ಪ್ರಭುಗಳ ಉದಾತ್ತ ವಿಚಾರಗಳ ರಹಸ್ಯವನ್ನು ಕಂಡುಕೊಂಡು ತಮ್ಮ ವೃತ್ತಿಯನ್ನು ಸರಿ ಪಡಿಸಿಕೊಳ್ಳುವರೆಂದು ಇಚ್ಛಿಸುವೆವು. "ದೇಹತ್ಯಾಗಿತಾ ಕೀರ್ತೀ ಮಾಗೇ ಉರಾವೀ|| ಎಂಬ ರಾಮದಾಸರ ಉಕ್ತಿಯಂತೆ ಕೀರ್ತಿಯನ್ನಿಟ್ಟು ಹೋದ ಸತ್ಪುರುಷರ ಚರಿತ್ರೆಗಳು ನಮಗೆ ತಾರಕವಾಗುತ್ತವೆಂದುತಿಳಿಯುವದೇ ನಮ್ಮ ಪ್ರಗತಿಗೆ ಕಾರಣವಾಗಿರುವದರಿಂದ ನಮ್ಮ ಪ್ರಿಯ ಕನ್ನಡ ಬಂಧುಗಳಿಗೆ ಶ್ರೀ ಸದ್ಗುರುವು ಈ ಬಗೆಯ ಸದ್ಬುದ್ಧಿಯನ್ನು ದಯಪಾಲಿಸಲಿ!!

# ವಿಷಯಾನುಕ್ರಮಣಿಕೆ


| ಪ್ರಕರಣ | ವಿಷಯ | ಪುಟ |
|---|---|---|
| ೧ | ಉಪೋದ್ಘಾತ | ೧ |
| ೨ | ಜನ್ಮ ಬಾಲ್ಯಾದಿಗಳು | ೩ |
| ೩ | ಕವಡಿಯ ಭಿಕ್ಷೆಗೆ ಪುತ್ರಪ್ರದಾನ | ೮ |
| ೪ | ಪಿತೃವಿಯೋಗ | ೧೧ |
| ೫ | ಸರ್ವಂ ವಿಷ್ಣುಮಯಂ ಜಗತ್ | ೧೫ |
| ೬ | ಶರಣಾಗತರ ತಾರಣ | ೧೮ |
| ೭ | ಮೃತಬಾಲಕನ ಸಂಜೀವನ | ೨೧ |
| ೮ | ಯದೃಚ್ಛಾಲಾಭ ಸಂತುಷ್ಟ | ೨೫ |
| ೯ | ಶಠಂಪ್ರತಿಶಾಠ್ಯಂ | ೩೩ |
| ೧೦ | ಪಿಶಾಚ ವಿಮೋಚನ | [illegible] |
| ೧೧ | ಗಾದೀಪೂಜೆಯ ಮಹತ್ವ | [illegible] |
| ೧೨ | ಸನ್ಮಾರ್ಗ ದರ್ಶನ | ೫೨ |
| ೧೩ | ಮಾಣಿಕಪುರ ನಿರ್ಮಾಣ | [illegible] |
| ೧೪ | ಭಕ್ತವಿಷಬಾಧಾ ನಿವಾರಣ | ೬೧ |
| ೧೫ | ವಂಧ್ಯಾಪುತ್ರಪ್ರದಾನ | ೬೯ |
| ೧೬ | ನಿಷ್ಠೆಯ ಪರೀಕ್ಷೆ | [illegible] |
| ೧೭ | ಪಾತ್ರಾಪಾತ್ರ ಪರೀಕ್ಷಣ | ೭೪ |
| ೧೮ | ಗರ್ವನಿರಸನ | ೮೩ |
| ೧೯ | ನಿರ್ಯಾಣ | ೮೮ |

ಕರ್ನಾಟಕ ಸತ್ಪುರುಷ ಮಂಡಲ.

# ಶ್ರೀ ಮಾಣಿಕ ಪ್ರಭು.

## ೧ನೆಯ ಪ್ರಕರಣ.

### ಉಪೋದ್ಘಾತ.

ಶ್ರೀ ತ್ರಿಮೂರ್ತಿ ಸ್ವರೂಪರಾದ ದತ್ತಾತ್ರೇಯರು ಕಲಿಯುಗದಲ್ಲಿ ಶ್ರೀಪಾದಶ್ರೀವಲ್ಲಭ, ಶ್ರೀನರಸಿಂಹಸರಸ್ವತಿ ಎಂಬ ಹೆಸರುಗಳಿಂದ ಅವತಾರಗಳನ್ನು ತಾಳಿದ್ದು ಲೋಕಪ್ರಸಿದ್ಧವಷ್ಟೆ; ಶ್ರೀಗುರು ಚರಿತ್ರನೆಂಬ ಒಂದು ಪ್ರಾಸಾದಿಕ ದೊಡ್ಡ ಹೊತ್ತಿಗೆಯು ಮಹಾರಾಷ್ಟ್ರ ಭಾಷೆಯಲ್ಲಿದ್ದು ಮೇಲೆ ಉಲ್ಲೇಖಿಸಿದ ಅವತಾರಗಳನ್ನು ಬಹು ಗಂಭೀರವಾಗಿ ವರ್ಣಿಸುತ್ತದೆಂಬದನ್ನು ಶ್ರೀಗುರುಚರಿತ್ರವನ್ನು ಪಾರಾಯಣ ರೂಪದಿಂದ ಪಠಣ ಮಾಡುವವರಿಗೆ ಒಡೆದು ಹೇಳುವ ಕಾರಣವಿಲ್ಲ. ಹೀಗೆ ದತ್ತಾತ್ರೇಯರು ಬಹು ದಿವಸಗಳ ಪೂರ್ವದಲ್ಲಿ ಅವತಾರಗಳನ್ನು ತಾಳಿ ಲೋಕಪಾವನ ಮಾಡಿದಂತೆ ಈಚೀಚೆಗೆ ಪ್ರಭು ನಾಮಧೇಯದಿಂದ ಮೂರು ಅವತಾರಗಳನ್ನು ಧರಿಸಿ ಜಡಜೀವಿಗಳ ಉದ್ಧಾರಕ್ಕಾಗಿ ಜ್ಞಾನ, ಉಪಾಸನಾ, ಭಕ್ತಿಮಾರ್ಗಗಳನ್ನು ಸ್ಥಾಪಿಸಿ ಅಕ್ಷಯ್ಯ ಕೀರ್ತಿಯನ್ನು ಸಂಪಾದಿಸಿರುವರು.

ಈ ಪ್ರಭುನಾಮಕ ಅವತಾರಗಳು ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ಜಾತಿಗಳಲ್ಲಿ ಆಗಿರುತ್ತವೆ. ಮಹಾತ್ಮರ ಅವತಾರಕ್ಕೆ ಜಾತಿ-ಕುಲಗಳ ನಿಯಮವಿಲ್ಲವಷ್ಟೇ; ಅವರು ಕಾಲ ಪರಿಸ್ಥಿತಿಗನುಸರಿಸಿ ತಮ್ಮ ಅವತಾರದ ಕಾರ್ಯಗಳನ್ನು ಸಂಕಲ್ಪಿಸಿಕೊಳ್ಳುವರು. ಮೊದಲನೆಯ ಅವತಾರವು ಮೊಗಲಾಯಿಯಲ್ಲಿ "ಬಕಪ್ರಭು" ಎಂಬ ನಾಮಧೇಯದಿಂದಾಯಿತು. ಬಕಪ್ರಭುಗಳು ಲಿಂಗವಂತ ಬಣಜಿಗರ ಕುಲದಲ್ಲಿ ಉತ್ಪನ್ನರಾಗಿದ್ದರು. ಅವರು ತಮ್ಮ ಅವತಾರವನ್ನು ಸಮಾಪ್ತಗೊಳಿಸಿ ಸುಮಾರು [illegible] ವರುಷಗಳಾದವು. [illegible] ಕಲಿಯುಗದಲ್ಲಿ ಇವರಿಗೆ ನೂರವತ್ತು [illegible] ವರುಷಗಳು ಕಳೆಯುತ್ತಿದ್ದವು. ಎರಡನೆಯ ಅವ

ತಾರವು 'ಆಲಮಪ್ರಭು' ಎಂಬ ಹೆಸರಿನಿಂದ ಮುಸಲ್ಮಾನ ಕುಲದಲ್ಲಾಯಿತು. ಪ್ರಭುಗಳು ನಾಮಮಾತ್ರಕ್ಕೆ ಮುಸಲ್ಮಾನ ಕುಲದಲ್ಲಿ ಹುಟ್ಟಿದ್ದರೂ ದತ್ತಸಾಂಪ್ರದಾಯವು ಅವರಲ್ಲಿ ಪ್ರಕಟವಾಗಿ ಸಮಸ್ತ ಹಿಂದುಗಳು ಅವರನ್ನು ಭಜಿಸಿದರು. ಅವರ ಸಮಾಧಿಯಾಗಿ ಇಂದಿಗೆ ಸುಮಾರು ನೂರು ವರುಷಗಳಾಗಿರಬಹುದು.

ಮೂರನೇ ಅವತಾರವೇ ನಮ್ಮ ಚರಿತ್ರನಾಯಕರದು. ಇವರು ಕಲ್ಯಾಣಪಲ್ಲಿ ಬ್ರಾಹ್ಮಣ ಕುಲೋತ್ಪನ್ನರಾಗಿ "ಶ್ರೀಮಾಣಿಕಪ್ರಭು"ಗಳೆಂಬ ಹೆಸರಿನಿಂದ ಪ್ರಸಿದ್ಧರಾದರು. ಇವರ ಸಮಾಧಿಯು ೫೮ ವರುಷಗಳ ಕೆಳಗಾಗಿರುತ್ತದೆ. ಹೀಗೆ ದತ್ತಾವಧೂತರು ಪ್ರಭುನಾಮದಿಂದ ಮೂರು ಸಾರೆ ಮೃತ್ಯುಲೋಕದಲ್ಲಿ ಸಂಚರಿಸಿ ಜಗತ್ತಿಗೆ ಸದ್ಧರ್ಮಗಳನ್ನು ತೋರಿಸಿಕೊಟ್ಟಿರುತ್ತಾರೆ. ಆದರೆ ಮೊದಲಿನ ಅವತಾರಗಳಿಗೂ ಈ ಮೂರು ಅವತಾರಗಳಿಗೂ ಬಹಳ ಅಭ್ಯಂತರವಿರುತ್ತದೆ. ಎಲ್ಲ ಅವತಾರಗಳೂ ಒಬ್ಬ ದತ್ತಾತ್ರಯರ ಅಂಶ ಸಂಭೂತಗಳಾಗಿದ್ದು ಅವುಗಳಲ್ಲಿ ಹೀಗೇಕೆ ಅಭ್ಯಂತರಗಳೆಂದು ವಾಚಕರು ಪ್ರಶ್ನ ಮಾಡಬಹುದು? ಅದಕ್ಕೆ ಸಮಾಧಾನವಿಷ್ಟೇ; ಜನತೆಯ ಅಧಿಕಾರಾನುರೂಪವಾಗಿ ಅವತಾರಿಕರು ವರ್ತಿಸಬೇಕಾಗುತ್ತದೆ. ಹೀಗೆ ವರ್ತಿಸುವಾಗ ಅವರು ತಮ್ಮ ಮೂಲಸ್ವರೂಪವನ್ನು ಆಚ್ಛಾದಿಸಿಕೊಳ್ಳಬೇಕಾಗುತ್ತದೆ. ಇದರ ಮೇಲಿಂದಲೇ ಅಂದರೆ ಅವರಿಂದ ದೊರೆತ ಲೋಕಶಿಕ್ಷಣದ ಮೇಲಿಂದ ಪ್ರಬಲಾವತಾರ ಗುಪ್ತಾವತಾರಗಳೆಂಬ ತಾರತಮ್ಯವನ್ನು ನಾವು ಮಾಡಿಕೊಳ್ಳಬೇಕಾಗುತ್ತದೆ. ಈ ಯುಗದಲ್ಲಿ ಈಶ್ವರನ ಅವತಾರಗಳು ಇಂದಿನ ವರೆಗೆ ಅಸಂಖ್ಯವಾಗಿ ಆಗಿದ್ದರೂ ಶ್ರೀಮಚ್ಛಂಕರಾಚಾರ್ಯರ ಅವತಾರವೇ ಒಡೆದು ಕಾಣಲಿಕ್ಕೆ ಕಾರಣವೇನು? ಅದರಂತೆ ಶ್ರೀದತ್ತಾಂಶದ ಅವತಾರಗಳಲ್ಲಿ ಶ್ರೀಪಾದ ಶ್ರೀವಲ್ಲಭ, ಶ್ರೀನರಸಿಂಹಸರಸ್ವತೀ ಅವತಾರಗಳೇ ಪ್ರಾಮುಖ್ಯವಾಗಿ ಗಣಿಸಲ್ಪಡುವವು. ಆದರೆ ಈ ವಿಶೇಷಾವತಾರಗಳಿಗಿಂತ ಗುಪ್ತಾವತಾರಗಳು ಕಡಿಮೆಯ ತರಗತಿಯವೆಂದು ಯಾರೂ ಭಾವಿಸಲಾಗದು. ಈಶ್ವರನ ಎಲ್ಲ ಅವತಾರಗಳು ಪರಮ ಶ್ರೇಷ್ಠವೇ ಆಗಿರುತ್ತವೆ. ಅವುಗಳಿಂದಾಗಬೇಕಾಗಿರುವ ಕಾರ್ಯಕ್ಷೇತ್ರದಲ್ಲಿ ಮಾತ್ರ ಹೆಚ್ಚು-ಕಡಿಮೆಯಿರುತ್ತವೆ. ಮಹತ್ಕಾರ್ಯ ಮಾಡಿದ ಅವತಾರಗಳೂ, ಅಲ್ಪ ಕಾರ್ಯ ಮಾಡಿದ ಅವತಾರಗಳೂ ನಮಗೆ ಸರಿಯಾಗಿಯೇ ಪೂಜ್ಯವಿರುತ್ತವೆ.

ಪರಮೇಶ್ವರನ ಅವತಾರಗಳಾಗಲಿಕ್ಕೆ ಪ್ರಾಮುಖ್ಯವಾಗಿ ಎರಡು ಕಾರಣಗಳಿರುವವು. ಒಂದನೆಯದು ಧರ್ಮಕ್ಕೆ ಸಂಬಂಧಿಸಿದ್ದು; ಎರಡನೆಯದು ಭಕ್ತರಿಗೆ

ಸಂಬಂಧಿಸಿದ್ದು; ಧರ್ಮಗ್ಲಾನಿಯಾದಾಗ ಶ್ರೀಕೃಷ್ಣ ಪರಮಾತ್ಮನ ಅಭಿವಚನದಂತೆ ಆಗುವ ಅವತಾರಗಳೇ ಧರ್ಮಕ್ಕೆ ಸಂಬಂಧಿಸಲ್ಪಡುತ್ತವೆ. ಆಗ ಆ ಅವತಾರಗಳ ವ್ಯಾಪ್ತಿಯಾದರೂ ಬಹು ದೊಡ್ಡ ಪ್ರಮಾಣದಿಂದಾಗುತ್ತದೆ. ಇನ್ನು ಭಕ್ತರಿಗೆ ಸಂಬಂಧಿಸಿದ ಅವತಾರಗಳು ಕೇವಲ ಭಕ್ತರಿಗೋಸ್ಕರವಾಗಿಯೇ ಆಗುತ್ತವೆ. ಯಾವ ಮಹಾತ್ಮನಾದ ಭಗವದ್ಭಕ್ತನು ಸಗುಣೋಪಾಸನೆಯಲ್ಲಿ ಪ್ರೇಮ ತಾಳಿ, ದೇವಾ, ನಿನ್ನ ಸೇವೆಯನ್ನು ಕೊಡು; ಎಂದು ತದೇಕಧ್ಯಾನ ಮಗ್ನನಾಗುವನೋ ಅಂಥ ಭಕ್ತನ ಸಲುವಾಗಿ ಪರಮಾತ್ಮನು ಸಗುಣರೂಪವ ತಾಳಬೇಕಾಗುತ್ತದೆ. ಈ ಸಗುಣ ರೂಪವೇ ಭಕ್ತರಿಗೆ ಸಂಬಂಧಿಸಿದ ಅವತಾರವು. ಈ ಅವತಾರದಲ್ಲಿ ಭಕ್ತೋದ್ಧಾರದ ಹೊರತು ಪರಮಾತ್ಮನಿಗೆ ಅನ್ಯ ಕೆಲಸಗಳಿರುವದಿಲ್ಲ. ಆದ್ದರಿಂದ ಈ ಅವತಾರಗಳ ಕಾರ್ಯಕ್ಷೇತ್ರವು ಸಂಕುಚಿತವಾಗುತ್ತದೆ. ಆಗ ಢಿಯ ನಮ್ಮ ಶ್ರೀ ಶೇಗಾಂವ ಸದ್ಗುರುಗಳವರು, ಗೋಂದಾವಲಿಯ ಶ್ರೀಬ್ರಹ್ಮಚೈತನ್ಯ ಮಹಾರಾಜರು, ಶ್ರೀಅಕ್ಕಲಕೋಟಿಕರ ಸ್ವಾಮಿಗಳು, ಶ್ರೀಮತ್ಪರಮಹಂಸ ಟೇಂಬೆ ಮಹಾರಾಜರು, ಪ್ರಸ್ತುತದ ನಮ್ಮ ಚರಿತ್ರನಾಯಕರಾದ ಶ್ರೀಮಾಣಿಕ ಪ್ರಭುಗಳು ಇವರೆಲ್ಲರು ಭಕ್ತರಿಗೋಸ್ಕರ ಸಗುಣರೂಪ ಧರಿಸಿದ ಅವತಾರಿಕರಾಗಿರುತ್ತಾರೆ. ಕೇವಲ ಭಕ್ತರ ಕಲ್ಯಾಣಕ್ಕಾಗಿಯೇ ಇದ ಅವತಾರಗಳ ಮಹತ್ವವು ಭಕ್ತರಿಗೆ ಅತಿಶಯವಾಗಿರುತ್ತದೆ. ಇಂಥ ಸಗುಣ ಮೂರ್ತಿಗಳ ಲೀಲಾಶ್ರವಣವು ಭಕ್ತರಿಗೆ ತಾರಕವಾಗಿರುತ್ತದೆಂದು ಹೇಳಲಾಗುವದು. ಇಂಥ ತಾರಕವಾದ ಸಚ್ಚರಿತ್ರದ ಶ್ರವಣವು ಭಾವಿಕರಾದ ನಮ್ಮ ವಾಚಕರಿಗೆ ಒದಗಲೆಂದು ಶ್ರೀಮಾಣಿಕ ಪ್ರಭುಗಳ ಲೀಲಾಸಾರವನ್ನು ಬರೆಯಲುಪಕ್ರಮಿಸುವೆವು.

---

## ೨ ನೆಯ ಪ್ರಕರಣ.

### ಜನ್ಮ-ಬಾಲ್ಯಾದಿಗಳು.

ನೈಜಾಮ ರಾಜ್ಯದಲ್ಲಿ ಕಲಬುರ್ಗೆಯೆಂಬ ಇತಿಹಾಸ ಪ್ರಸಿದ್ಧವಾದ ಸ್ಥಳವಿರುವದು. ಅದು ಒಂದು ಕಾಲದಲ್ಲಿ ಮುಸಲ್ಮಾನ ಅರಸರ ರಾಜಧಾನಿಯಾಗಿದ್ದ ಸಂಗತಿಯನ್ನು ಇತಿಹಾಸವು ಬೈಲಿಗಿಡುತ್ತದೆ. ಇಂಥ ಐತಿಹಾಸಿಕ ಪಟ್ಟಣದಿಂದ ೨೪ ಮೈಲುಗಳ ಮೇಲೆ ಕಲ್ಯಾಣವೆಂಬ ಗ್ರಾಮವಿರುವದು. ಇದಾದರೂ ನಮ್ಮ ಚರಿ

ತ್ರನಾಯಕರ ಕಾಲದಲ್ಲಿ ರಾಜಕೀಯ ಸ್ಥಳವಾಗಿದ್ದು, ಮುಸಲ್ಮಾನ ದೊಡ್ಡ ದೊಡ್ಡ ಅಧಿಕಾರಸ್ಥರಿಂದ ಅಲಂಕೃತವಾಗಿತ್ತು; ಈ ಕಲ್ಯಾಣ ಗ್ರಾಮನೇ ಶ್ರೀಮಾಣಿಕ ಪ್ರಭುಗಳ ಜನ್ಮಭೂಮಿಯು.

ಮಾಣಿಕ ಪ್ರಭುಗಳವರ ತಂದೆಯು ಬಹು ಸಜ್ಜನನೂ, ಭಗವದ್ಭಕ್ತನೂ ಆಗಿದ್ದನು. ಈತನು ನಿಜಾಮು ಸರಕಾರದ ದರ್ಬಾರದಲ್ಲಿ ಉತ್ತಮ ಕೆಲಸವನ್ನು ಮಾಡಿದ್ದರಿಂದ ರಾಜಾಶ್ರಯವನ್ನು ಪಡೆದು, ಶ್ರೀಮಂತನಾಗಿದ್ದನು. ಈತನ ಧರ್ಮಪತ್ನಿಯು ಅತ್ಯಂತ ಪತಿನಿಷ್ಠಳಿದ್ದದರಿಂದ ಇವರಿಬ್ಬರ ದಾಂಪತ್ಯ ಪ್ರೇಮವು ವರ್ಣನೆಯನ್ನು ಮೀರಿತ್ತು. ಇವರಿಬ್ಬರು ಪತಿ-ಪತ್ನಿಯರು ತಮ್ಮ ಶ್ರೀಮಂತಿಕೆಯ ಬಿನಾಪೆಮ್ಮೆಯಲ್ಲಿ ಕಾಲಹರಣ ಮಾಡದೆ ಬಡ-ಬಗ್ಗರ ವಿಚಾರಣೆಯನ್ನು ಮಾಡುತ್ತ ಈಶ್ವರನ ಭಜನೆಯಲ್ಲಿ ಕಾಲಕ್ರಮಣ ಮಾಡುತ್ತಿದ್ದರು. ಅವರಿಗೆ ಯಾವ ಬಗೆಯ ಕೊರತೆಯೂ ಇರಲಿಲ್ಲ. ಆದರೆ ಸಂತತಿಯ ಕೊರತೆಯು ಮಾತ್ರ ಅವರನ್ನು ಹಗಲಿರಳೂ ಬಾಧಿಸುತ್ತಿತ್ತು. ಹೀಗಿರಲು ಪರಮಾತ್ಮನ ಕೃಪೆಯಿಂದ ಆಕೆಯು ಗರ್ಭವತಿಯಾದಳು. ಆಗ ಆ ದಂಪತಿಗಳಿಗಾದ ಆನಂದವನ್ನು ಬಣ್ಣಿಸಲಳವಲ್ಲ. ಮನಮುಟ್ಟಿ ಸಂತಾನವನ್ನು ಬಯಸುತ್ತಿದ್ದ ಸಂಸಾರಿಕರಿಗೆ ಅದರ ಲಕ್ಷಣವು ಕಂಡಾಗ ಆಗುವ ಆನಂದವನ್ನು ಆ ನುಭವಿಕರೇಬಲ್ಲರು. ಆ ಸತಿಯು ಹರುಷ ನಿರ್ಭರಳಾಗಿ ನವಮಾಸಗಳನ್ನು ಕಳೆದಳು. ಈ ಅವಧಿಯಲ್ಲಿ ಪುಂಸವನಾದಿ ಗರ್ಭಸಂಸ್ಕಾರಗಳು ಶಾಸ್ತ್ರೋಕ್ತವಾಗಿ ಜರುಗಿದವು. ಹತ್ತನೆಯ ತಿಂಗಳು ಪ್ರಾಪ್ತವಾಯಿತು. ಆಗಆಸಾಧ್ವಿಯು ಸಲಕ್ಷಣ ಗಂಡುಮಗ ವನ್ನು ಹೆತ್ತಳು. ಅವರ ಪರಿವಾರವೆಲ್ಲ ಆನಂದಸಮುದ್ರದಲ್ಲಿ ಮುಳುಗಿತು.

ಸಂಸಾರಿಕರ ವಿಷಯಾನಂದವು ಕ್ಷಣಿಕವೆಂಬುದು ಸುಳ್ಳಲ್ಲ; ಮಗುವು ದೊಡ್ಡದಾಗಹತ್ತಿದಂತೆ ಆದಂಪತಿಗಳ ಆನಂದವು ಹೆಚ್ಚುತ್ತ ಹೋಗುವದು ಸ್ವಾಭಾವಿಕವಾಗಿತ್ತು. ಆದರೆ ಇದಕ್ಕೆ ವಿರುದ್ಧವಾದ ಸ್ಥಿತಿಯು ಅವರಲ್ಲಿ ಕಂಡುಬರಹತ್ತಿತು. ಯಾಕಂದರೆ ಹುಟ್ಟಿದಮಗುವು ತನ್ನ ನಗೆಮುಖದಿಂದ ಮಾತಾ-ಪಿತೃಗಳನ್ನು ಆನಂದಪಡಿಸಲಿಲ್ಲ. ಮನೆಯಲ್ಲಿ ಹರಿದಾಡಿ ಇಲ್ಲದ ವಿಧವಿಧದ ಬಾಲಲೀಲೆಗಳನ್ನು ತೋರಿಸಿ ಪೋಷಕರ ಕಣ್ಣುಗಳಿಗೆ ಧನ್ಯತೆಯನ್ನುಂಟು ಮಾಡಲಿಲ್ಲ. ಹೀಗೆ ಮೂಕನಂತೆ ಅಪೇಕ್ಷೆ ಮೃಣ್ಮಯ ಸಿರಿಗಿನ ಮೂರ್ತಿಯಂತೆ ಕಂಡು ಬರುವ ಆ ಮಗುವನ್ನು ನೋಡಿ, ತಾಯಿತಂದೆಗಳಿಗೆ ವ್ಯಸನವುಂಟಾದದ್ದು ಸ್ವಾಭಾವಿಕವೇ ಸರಿ. ವಸ್ತುತಃ ಆ ಮಗುವಿನ ಅಧಿಕಾರವು ಬಲು ದೊಡ್ಡದಿತ್ತು. ಅದು ಸಾಮಾನ್ಯ ಮಾನವ ಕೋಟಿಯನ್ನು ಮೀರಿದ್ದೆಂದು ಹೇಳಬಹುದು. ಆದರೆ ಮಾಯಾಪಾಶಾವೃತರಿಗೆ ಇಂಥ ವೈ

ರಾಗ್ಯ ಭಾಂಡಾರದ ಪರಿಚಯವು ಹ್ಯಾಗಾಗಬೇಕು? ಅವರು ತಮ್ಮ ವೈರಾಗ್ಯಶೀಲ ಮಗನು ತಮಗೆ ನಿರುಪಯೋಗಿಯಾದನೆಂದು ಅಳುವದು ಸಹಜವು. ಅದರಂತೆ ನಮ್ಮ ದಂಪತಿಗಳ ಸ್ಥಿತಿಯೂ ಆಯಿತು. ಹೀಗೆ ಕೆಲವು ಕಾಲವು ಕಳೆದ ಬಳಿಕ ಮಗುವು ದೊಡ್ಡದಾಗಿ ಉಪನಯನಕ್ಕೆ ಯೋಗ್ಯವಾಯಿತು. ಆಗ ಆ ದಂಪತಿಗಳು ಕೇವಲ ಧರ್ಮಶಾಸ್ತ್ರಾಜ್ಞೆಯೆಂದು ಆ ಹುಡುಗನಿಗೆ ಮೌಂಜೀಬಂಧನ ಮಾಡಿದರು. ಚಮತ್ಕಾರವೇನಂದರೆ—ಗಾಯತ್ರೀ ಉಪದೇಶವಾದದ್ದೊಂದೇ ತಡ; ಹುಡುಗನು ಚತುರ್ವೇದಗಳನ್ನು ಮುಖೋದ್ಗತವಾಗಿ ಉಚ್ಚರಿಸತೊಡಗಿದನು. ನೆರೆದವರಿಗೆ ಆಶ್ಚರ್ಯವಾಯಿತು. ಕೆಲವರು "ಈತನು ಯೋಗಭ್ರಷ್ಟನಿರಬಹುದೆಂದು'' ಅಂದರು. ಕೆಲವರು ಅವನಿಗೆ ಈಶ್ವರಾಂಶನೆಂದರು. ಹೀಗೆ ಅನೇಕರು ಅನೇಕ ಬಗೆಯಾಗಿ ಮಾತನಾಡಿಕೊಳ್ಳುತ್ತಿರಲು, ಆ ದಂಪತಿಗಳು ತಮ್ಮ ಮಗನ ಅಲೌಕಿಕ ಸಾಮರ್ಥ್ಯವನ್ನು ತಿಳಿದು ಸಂತೋಷಬಟ್ಟರು. ಆದರೆ ಆ ಹುಡುಗನು ಲೌಕಿಕ ವ್ಯವಹಾರದ ಯಾವ ಮಾತುಗಳನ್ನೂ ಆಡದ್ದರಿಂದ ಅವರು ಆ ಮಗುವನ್ನು ಅದೇ ಊರಲ್ಲಿರುವ ಪೂರ್ಣಾನಂದರೆಂಬ ಒಬ್ಬ ಸತ್ಪುರುಷರ ಕಡೆಗೆ ಕರೆದೊಯ್ದರು. ಪೂರ್ಣಾನಂದರು ಸದಾನಂದರೆಂಬ ಒಬ್ಬ ಸಿದ್ಧಪುರುಷರ ಸಚ್ಛಿಷ್ಯರು. ಅವರು ಆ ಮಗುವನ್ನು ನೋಡಿ ನಕ್ಕು—ಅವರ ತಾಯಿ-ತಂದೆಗಳನ್ನುದ್ದೇಶಿಸಿ—"ನೀವು ಮನಸ್ಸಿನಲ್ಲಿ ಯಾವ ಯೋಚನೆಯನ್ನೂ ಮಾಡಬೇಡಿರಿ. ನಿಮ್ಮ ಮಗನು ಮಹಾಪುರುಷನಿರುವನು. ನೀವು ಶ್ರೀ ದತ್ತಾತ್ರಯರ ಸೇವೆಯನ್ನು ಮಾಡುತ್ತ ಆನಂದದಿಂದ ಕಾಲಕಳೆಯಬೇಕು.'' ಎಂದು ನುಡಿದರು. ಪೂರ್ಣಾನಂದರ ಈ ಅಪ್ಪಣೆಯನ್ನು ಹೊಂದಿ ಆ ದಂಪತಿಗಳು ಮನೆಗೆ ಬಂದು ಶ್ರೀದತ್ತನ ಸೇವೆಯಲ್ಲಿ ಆಸಕ್ತರಾದರು.

ಈ ಮೇರೆಗೆ ಆ ಮನೋಹರ ನಾಯಿಕರು ತಮ್ಮ ಪರಮ ಸಾಧ್ವಿಯಾದ ಬಯಾಬಾಯಿ ಎಂಬ ಪತ್ನಿಯೊಡನೆ ಶಾಂತ ಮನಸ್ಸಿನಿಂದ ದತ್ತನ ಸೇವೆಯಲ್ಲಿ ತೊಡಗಿರಲು ಹದಿನಾರು ವರುಷಗಳು ಕ್ರಮಿಸಿದವು; ಶ್ರೀಗುರುಚರಿತ್ರೆಯ ಪಾರಾಯಣವು ಎಷ್ಟೋ ಆವರ್ತಿಯಾಗಿ ಹೋಯಿತು. ಆ ಸುಶೀಲ ಬ್ರಾಹ್ಮಣನು ನಿಜಾಮನು ತನಗೆ ಕೊಟ್ಟಿರುವ ಬಹು ದೊಡ್ಡ ಕೆಲಸವನ್ನು ಸಹ ಬದಿಗಿಟ್ಟು ಹಗಲು-ರಾತ್ರಿ ಅಖಂಡವಾಗಿ ಶ್ರೀಗುರುವಿನ ಚಾಕರಿಯನ್ನು ಮಾಡಿದನು. ಮತ್ತು ಈ ಅವಧಿಯಲ್ಲಿ ತನ್ನ ಬಳಿಯಲ್ಲಿದ್ದ ಲಕ್ಷಾಂತರ ರೂಪಾಯಿಗಳನ್ನು ನೀರಿನಂತೆ ವೆಚ್ಚಮಾಡಿ ಬ್ರಾಹ್ಮಣ ಸಂತರ್ಪಣೆಯನ್ನು ಮಾಡಿದನು. ಆತನ ಹೆಂಡತಿಯಾದರೂ ಬಹುಭಕ್ತಿಯಿಂದ ಶ್ರೀದತ್ತಾತ್ರಯರ ಸೇವೆಯನ್ನು ಮಾಡುತ್ತಿದ್ದಳು. ಹೀಗೆ ಆ ದಂಪತಿಗ

ಶಿಬ್ಬರು ಅನನ್ಯ ಗತಿಕರಾಗಿ ಶ್ರೀದತ್ತಚರಣಗಳಲ್ಲಿಯೇ ಸ್ಥಿರಚಿತ್ತರಾಗಿರಲು, ಹದಿಸಾರನೇ ವರ್ಷದ ಕೊನೆಯಲ್ಲಿ ಒಂದು ದಿನ ಶ್ರೀಭಗವಾನ್ ದತ್ತನು ಅವರ ಸ್ವಪ್ನದಲ್ಲಿ ಪ್ರಕಟನಾದನು. ಆಗ ಆತನ ಧ್ಯಾನವು ಅವರ್ಣನೀಯವಾಗಿತ್ತು. ಕಾಷಾಯ ವಸ್ತ್ರಗಳು ಅವನ ಮೈಮೇಲೆ ಒಪ್ಪುತ್ತಿದ್ದವು. ಕಾಲಲ್ಲಿ ಅವುಗೆಗಳು ಭಕ್ತರನ್ನು ಭವಸಾಗರದಿಂದ ದಾಟಿಸುವ ನೌಕೆಗಳೋಪಾದಿಯಲ್ಲಿ ಪರಿಶೋಭಿಸುತ್ತಿದ್ದವು. ಶುಭ್ರ ಭಸ್ಮವೂ, ರುದ್ರಾಕ್ಷಿಯ ಸರಗಳೂ ಒಸೆದು ಕಾಣುತ್ತಿದ್ದವು. ಯತಿವೇಷದ ಶ್ರೀದತ್ತಾತ್ರೇಯನು ಹಸನ್ಮುಖನಾಗಿದ್ದನು.

ಈ ಪ್ರಕಾರ ರೂಪವನ್ನಳವಡಿಸಿಕೊಂಡು ಬಂದ ದತ್ತಾತ್ರೇಯರು ಭಕ್ತಶ್ರೇಷ್ಠರಾದ ಆ ದಂಪತಿಗಳನ್ನು ಕುರಿತು—"ಅಹೋ, ಭಕ್ತಶ್ರೇಷ್ಠರೇ, ನಿಮ್ಮ ಅನನ್ಯ ಭಕ್ತಿಯಿಂದ ನನಗೆ ಬಹು ಸಂತೋಷವಾಗಿರುತ್ತದೆ. ನಾನು ಭಕ್ತೋದ್ಧಾರಾರ್ಥವಾಗಿ ಅವತರಿಸಬೇಕಾಗಿರುತ್ತದೆ. ನಿಮಗೆ ಈಗಿದ್ದ ಹಿರಿಯ ಮಗನು ಕೇವಲ ಅವಧೂತ ಮೂರ್ತಿಯಾಗಿರುವನು. ಅವನ ಮದುವೆ ಮೊದಲಾದವುಗಳ ಗೊಡವೆಗೆ ಹೋಗಬೇಡಿರಿ. ನಾನು ಸ್ವತಃ ನಿಮ್ಮ ಹೊಟ್ಟೆಯಲ್ಲಿ ಹುಟ್ಟಿಬಂದು ನಿಮ್ಮ ದ್ವಿತೀಯ ಪುತ್ರನಾಗಿ ಆಮರಣ ಬ್ರಹ್ಮಚರ್ಯವನ್ನು ಪಾಲಿಸಿ ಭಕ್ತಸಂರಕ್ಷಣೆಯ ಕೆಲಸವನ್ನು ಮಾಡುವೆನು. ನಾವಿಬ್ಬರೂ ನಿಮ್ಮ ವಂಶರಕ್ಷಣೆಯ ಕೆಲಸಕ್ಕೆ ಉಪಯೋಗ ಬೀಳುವದಿಲ್ಲ. ನಿಮಗೆ ಅಸಮಾಧಾನವಾಗಬಾರದೆಂದು ಇನ್ನೊಬ್ಬ ಪುತ್ರನನ್ನು ನಿಮಗೆ ದಯಪಾಲಿಸುತ್ತೇನೆ ಆತನು ಗೃಹಸ್ಥಾಶ್ರಮವನ್ನು ಸ್ವೀಕರಿಸಿ, ನಿಮ್ಮ ವಂಶವೃಕ್ಷವನ್ನು ಬೆಳೆಸುವನು. ಇನ್ನು ನಿಮ್ಮ ಅನುಷ್ಠಾನವನ್ನು ಮುಗಿಸಿರಿ.'' ಎಂದು ನುಡಿದು ಅಂತರ್ಧಾನರಾದರು. ಇತ್ತ ಆ ದಂಪತಿಗಳು ಪಳಕ್ಕನೆ ಕಣ್ಣು ತೆರೆದು ನೋಡಿದರು. ಎದುರಿಗೆ ಬೇರೆ ಯಾರೂ ಇರದೆ ಸ್ವಪ್ನದ ಸಂಗತಿಯು ಮಾತ್ರ ಸ್ಮರಣೆಯಲ್ಲಿತ್ತು. ಇಬ್ಬರಿಗೂ ಒಂದೇ ಕಾಲದಲ್ಲಿ ಒಂದೇ ಬಗೆಯ ಸ್ವಪ್ನಬಿದ್ದದ್ದನ್ನು ನೋಡಿ ಅವರಿಗೆ ಆಶ್ಚರ್ಯವಾಯಿತು. ಶ್ರೀದತ್ತಾತ್ರೇಯನು ತಮ್ಮ ಮಗನಾಗಿ ಹುಟ್ಟುವನೆಂಬುದನ್ನು ಸ್ಮರಿಸಿಯಂತೂ ಅವರ ಆನಂದವು ಹೇಳಕೂಡದಷ್ಟು ಹೆಚ್ಚಿತು.

ಕಲ್ಯಾಣಕರ ದಂಪತಿಗಳ ಹೊಟ್ಟೆಯಲ್ಲಿ ಶ್ರೀದತ್ತಾತ್ರೇಯರು ಹುಟ್ಟಿಬರುವರೆಂಬ ದಟ್ಟ ವರ್ತಮಾನವು ಜನರಲ್ಲಿ ಪ್ರಸಿದ್ಧವಾಯಿತು. ಆ ಭಾವಿಕ ದಂಪತಿಗಳ ದತ್ತೋಪಾಸನೆಯೂ ಅವರು ಬ್ರಾಹ್ಮಣ ಸಂತರ್ಪಣೆಗಾಗಿ ಲಕ್ಷಾಂತರ ರೂಪಾಯಿಗಳನ್ನು ವೆಚ್ಚಮಾಡಿದ್ದೂ ಜನರನ್ನು ದಂಗುಬಡಿಸಿದವು. ಜನರೆಲ್ಲ ಶ್ರೀದತ್ತಪ್ರಭು

ವು ಯಾವಾಗ ಸಗುಣರೂಪವ ತಾಳುವನೋ, ಎಂದು ಎದುರು ನೋಡಹತ್ತಿದರು. ಹೀಗಿರಲು ಭಕ್ತಕಾಮಕಲ್ಪದ್ರುಮನಾದ ಶ್ರೀದತ್ತನು ಆ ಸಾಧ್ವಿಯ ಉದರವನ್ನು ಪ್ರವೇಶಿಸಿದನು. ಪೂರ್ಣ ಪರಬ್ರಹ್ಮನು ಅಂತರಂಗವನ್ನು ಪ್ರವೇಶ ಮಾಡಿದ್ದರಿಂದ ಆ ಸತೀಮಣಿಯು ಅಪ್ರತಿಮ ಪ್ರತಿಭೆಯಿಂದ ಒಪ್ಪಿದಳು. ಅವಳ ಗರ್ಭವು ಕ್ರಮೇಣ ಪುಷ್ಟವಾಗುತ್ತ ಹೋಯಿತು. ಭಕ್ತರಿಗೆ ಆನಂದಾತಿಶಯವಾಯಿತು.

ನವಮಾಸಗಳು ತುಂಬಿ ಹತ್ತನೆಯ ಮಾಸವು ಪ್ರಾಪ್ತವಾಯಿತು. ಆ ಸಾಧ್ವಿಗೆ ಪ್ರಸವ ವೇದನೆಗಳುಂಟಾಗತೊಡಗಿದವು. ಮುಂದೆ ಸ್ವಲ್ಪ ಹೊತ್ತಿನಲ್ಲಿ ಶ್ರೀದತ್ತ ಮಹಾರಾಜನು ಶಿಶು ರೂಪದಿಂದ ಆ ಮಹಾಸಾಧ್ವಿಯ ಉದರದಿಂದ ಪ್ರಕಟನಾದನು. ಆ ತೇಜಸ್ವಿಯಾದ ಶಿಶುವನ್ನು ನೋಡಿ ಕಲ್ಯಾಣನಿವಾಸಿಗಳಿಗೆ ಆನಂದವಾಯಿತು. ಸುವಾಸಿನಿಯರು ಆ ಶಿಶುವಿಗೆ ಮಂಗಲಾರತಿಯನ್ನು ಮಾಡಿದರು. ಎಷ್ಟೋ ಜನ ಭಾವಿಕರು ಸಕ್ಕರೆಯನ್ನು ಹಂಚಿದರು. ಆ ಮಂಗಲಮಯನು ಅವತರಿಸಿದಾಗ ಸಾಧುಗಳ ಮನಃಕುವಲಯಗಳು ಅರಳಿದವು; ಅಧರ್ಮವು ಥರಥರ ನಡುಗಿತು. ದಶದಿಕ್ಕುಗಳು ಪ್ರಸನ್ನವಾದವು. ಭೂದೇವಿಯು ಸಂತಸವನ್ನು ತಾಳಿದಳು. ಮುಂದೆ ಹನ್ನೆರಡನೆಯ ದಿವಸ ಸುಮಂಗಲೆಯರು ಆ ಶಿಶುವಿಗೆ ಮಾಣಿಕಪ್ರಭು ಎಂಬ ಮಂಗಳಪ್ರದ ನಾಮಕರಣವನ್ನು ಮಾಡಿ, ಜೋಗುಳವನ್ನು ಹಾಡಿದರು. ಆ ಸಮಾರಂಭವನ್ನು ಕಣ್ಣಿಟ್ಟು ನೋಡಿದವರು ಧನ್ಯತೆಯನ್ನು ಪ್ರಕಟಿಸಿದರು.

ಪ್ರಿಯ ವಾಚಕರೇ, ಭಕ್ತೋದ್ಧಾರಕ್ಕಾಗಿ ಶಿಶುರೂಪದಿಂದ ಪ್ರಕಟನಾದ ಮಾಣಿಕ ಪ್ರಭುವಿನ ವರ್ಣನೆಯನ್ನು ಎಷ್ಟೆಂದು ಮಾಡೋಣ! ಆ ಮಹಾಮಹಿಮನ ಸಾಗ್ರ ವರ್ಣನೆಯನ್ನು ಮಾಡಲು ಯಾರು ತಾನೇ ಶಕ್ತರು? ಕಲ್ಯಾಣನಿವಾಸಿಗಳು ಆ ಆನಂದಮೂರ್ತಿಯ ಒಂದೊಂದೇ ಲೀಲೆಗಳನ್ನು ಕಣ್ಣಾರೆ ನೋಡುತ್ತ ತಮ್ಮ ಜನ್ಮ ಸಾಫಲ್ಯವನ್ನು ಮಾಡಿಕೊಳ್ಳತೊಡಗಿದರು. ಆತನು ಒಮ್ಮೆ ಆಡುವನು, ಒಮ್ಮೆ ಅಳುವನು. ಮತ್ತೊಮ್ಮೆ ಗೆಳೆಯರೊಡನೆ ಗುದುಮುರಿಗೆ ಹಾಕುವನು. ವಿದ್ಯೆ ಸಂಪಾದನೆಯ ಕಡೆಗೆ ಅವನ ಲಕ್ಷ್ಯವೇ ಇರಲಿಲ್ಲ. ಆತನು ದೊಡ್ಡವನಾಗುತ್ತ ನಡೆದ ಹಾಗೆ ಅವನ ಗೊಂದಲವು ಹೆಚ್ಚುತ್ತ ನಡೆಯಿತು. ಆ ಪ್ರಭುವಿನ ಲೀಲೆಗಳಿಗೆ ಊರು-ಕೇರಿಗಳು ಸಾಲದಾದವು; ಕಡೆಗೆ ಆತನು ಅರಣ್ಯದಲ್ಲಿ ಸಂಚರಿಸತೊಡಗಿದನು.

ಪ್ರಭುವು ಸಣ್ಣವನಿದ್ದಾಗ ಅವನ ತಂದೆಯೂ ಕಲ್ಯಾಣದ ಗ್ರಾಮಾಧಿಪತಿಯೂ ಅವನ ಮೈಮೇಲೆ ಬಹು ಬೆಲೆಯುಳ್ಳ ಒಡವೆಗಳನ್ನು ಮಾಡಿಸಿ ಇಟ್ಟಿದ್ದರು.

ಅವನ್ನು ಕಾಯಲಿಕ್ಕೆ ಪ್ರಭುವಿನ ಬಳಿಯಲ್ಲಿ ಯಾವಾಗಲೂ ಕಾವಲುಗಾರರು ಇರುತ್ತಿದ್ದರು. ಆದರೆ ಪ್ರಭುವು ದೊಡ್ಡವನಾದ ಬಳಿಕ ಸಿಕ್ಕಸಿಕ್ಕ ಹಾಗೆ ತಿರುಗಹತ್ತಲು ಕಾವಲುಗಾರರ ಆಟವು ನಿಂತಿತು. ಪ್ರಭುವು ಆ ಅಲಂಕಾರಗಳ ಉಪಾಧಿಯನ್ನು ಬಿಸುಟಿ ಬೇಕಾದಲ್ಲಿ ಸಂಚರಿಸತೊಡಗಿದನು. ಒಮ್ಮೊಮ್ಮೆ ಅಖಂಡವಾಗಿ ನಾಲ್ಕೆಂಟು ದಿನಗಳ ವರೆಗೆ ಮನೆಯ ಕಡೆಗೆ ಸಹ ಸುಳಿಯುತ್ತಿದ್ದಿಲ್ಲ. ತಾಯಿ-ತಂದೆಗಳು ಹುಡುಕಿ ಹುಡುಕಿ ಕಷ್ಟಬಡುತ್ತಿದ್ದರು. ಆದರೂ ಅವರು ತಮ್ಮ ಮಗನು ದತ್ತಾವತಾರಿಕನೆಂದು ಬಗೆದು ಸಮಾಧಾನವನ್ನು ತಾಳುತ್ತಿದ್ದರು.

---

## ೩ ನೆಯ ಪ್ರಕರಣ.

### ಕವಡಿಯಭಿಕ್ಷೆಗೆ ಪುತ್ರಪ್ರದಾನ.

ಶ್ರೀಮಾಣಿಕ ಪ್ರಭುವಿನ ಬಾಲ್ಯಪ್ರಭಾವವು ದಶದಿಕ್ಕುಗಳಲ್ಲಿ ಹಬ್ಬಿತು. ದೂರ ದೂರಿನ ಜನರು ದರ್ಶನಾರ್ಥವಾಗಿ ಬರತೊಡಗಿದರು. ಕೆಲವರು ಪ್ರಭುವನ್ನು ದಿವ್ಯವಾದ ಆಸನದಲ್ಲಿ ಕುಳ್ಳಿರಿಸಿ ಪೂಜೆ ಮಾಡುತ್ತಿದ್ದರು. ಕೆಲವರು ವಿವಿಧ ಅಲಂಕಾರಗಳಿಂದ ಶೃಂಗರಿಸುತ್ತಿದ್ದರು. ಅವರವರ ಭಾವನೆಯಂತೆ ಅವರವರಿಗೆ ಫಲವೂ ದೊರೆಯುತ್ತಿತ್ತು. ಹೀಗಿರಲು ಹೈದರಾಬಾದದಲ್ಲಿರುವ 'ಭೀಮಾಬಾಯಿ' ಎಂಬ ಸ್ತ್ರೀಯು ಸಂತತಿಗಾಗಿ ಹಗಲಿರುಳೂ ಚಿಂತಿಸುತ್ತಿದ್ದಳು. ಆಕೆಯು ಶ್ರೀಮಾಣಿಕ ಪ್ರಭುವಿನ ಪ್ರಖ್ಯಾತಿಯನ್ನು ಕೇಳಿ ಪ್ರಭು ದರ್ಶನಕ್ಕೆ ಹವಣಿಸಹತ್ತಿದಳು. ಆಕೆಯ ಗಂಡನು ನೈಜಾಮ ಸರಕಾರದಲ್ಲಿ ದೊಡ್ಡ ಅಧಿಕಾರಿಯಾಗಿದ್ದು ಬಹು ನಾಸ್ತಿಕನಿದ್ದನು. ಅವನಿಗೆ ಸಾಧು ಸಜ್ಜನರಲ್ಲಿ ವಿಶ್ವಾಸವಿದ್ದಿಲ್ಲ. ಅಂದಬಳಿಕ ಆ ಸಾಧ್ವಿಯ ಬಯಕೆಯು ಹೇಗೆ ಈಡೇರಬೇಕು? ಆದರೂ ಭೀಮಾಬಾಯಿಯು ಸವಿಮಾತುಗಳಿಂದ ಗಂಡನನ್ನು ಸಂತೈಸಿ ಪ್ರಭು ದರ್ಶನಕ್ಕೆ ಆತನ ಸಮ್ಮತಿಯನ್ನು ಪಡೆದಳು. ಗಂಡನು ಒಡಂಬಟ್ಟಿದ್ದೊಂದು ಮಾಣಿಕಪ್ರಭುವಿನ ಕೃಪೆಯೇ ಎಂದು ಭಾವಿಸಿ ಆ ಸ್ತ್ರೀಯು ಸರಂಜಾಮುದೊಡನೆ ಕಲ್ಯಾಣಕ್ಕೆ ಹೊರಟಳು. ಅವಳು ಪಯಣದ ಮೇಲೆ ಪಯಣವನ್ನು ಮಾಡುತ್ತ ಒಂದು ದಿನ ಮುಂಜಾವಿನಲ್ಲಿ ಕಲ್ಯಾಣ ಗ್ರಾಮವನ್ನು ಪ್ರವೇಶಮಾಡಿದಳು. ಆಕೆಯಲ್ಲಿ ಪ್ರಭುದರ್ಶನದ ಉತ್ಕಂಠೆಯು ವಿಶೇಷವಾಗಿ ಇದ್ದದರಿಂದ ಮೇಣೆಯನ್ನು ಹೊತ್ತ ಭೋಯಿಗಳು ವಿರಾಮ

ವಿಲ್ಲದೆ ಸಾಗಿದ್ದರು. ಆ ಮೇಣೆಯ ಹಿಂದೆ ಮುಂದೆ ಶಿಪಾಯಿಗಳೂ, ಸ್ವಾರರೂ ಓಡುತ್ತಿದ್ದರು.

ಈ ಪ್ರಕಾರ ಆ ಸಾಧ್ವಿಯು ಸಾಗಿರಲು ಒಂದು ಚಮತ್ಕಾರವು ವರ್ತಿಸಿತು. ಶ್ರೀಮಾಣಿಕಪ್ರಭು ಚಿಕ್ಕ ವಯಸ್ಸಿನ ಹುಡುಗನಷ್ಟೇ, ಆತನು ತನ್ನ ಸಮ ವಯಸ್ಕ ಹುಡುಗರ ಜೊತೆಗೆ ಯಾವಾಗಲೂ ಆಟದಲ್ಲಿ ಮಗ್ನನಾಗಿರುತ್ತಿದ್ದನು. ಈ ದಿನ ಆಟವನ್ನು ಆಡುತ್ತಿರಲು ಉಳಿದ ಹುಡುಗರಿಗೂ ಅವನಿಗೂ ಕವಡಿಗಳ ಸಲುವಾಗಿ ವ್ಯಾಜ್ಯವುಂಟಾಯಿತು. ಪ್ರಭುವಿನ ಬಳಿಯಲ್ಲಿ ಕವಡಿಗಳು ಇಲ್ಲದ್ದರಿಂದ ಅವನು ಕೊಡದಾದನು. ತುಂಟರಾದ ಕೆಲವು ಹುಡುಗರು ಪ್ರಭುವಿಗೆ ಕೂಡಿಂದು ಗಂಟುಬಿದ್ದು ಅವನಕೂಡ ಗುದ್ದಾಡತೊಡಗಿದರು. ಬರಬರುತ್ತ ವ್ಯಾಜ್ಯವು ವಿಕೋಪಕ್ಕೆ ಹೋಯಿತು. ಹುಡುಗರು ಪ್ರಭುವನ್ನು ನೆಲಕ್ಕೆ ಕೆಡವಿ ಅವನ ಎದೆಯ ಮೇಲೆ ಕುಳಿತು ಎದೆಗೆ ಗುದ್ದಹತ್ತಿದರು. ಈ ಸಂಧಿಯಲ್ಲಿ ಮೇಲೆ ಹೇಳಿದ ಭೀಮಾಬಾಯಿಯು ಅಲ್ಲಿಗೆ ಬಂದಳು. ಆಕೆಗೆ ಮಾಣಿಕಪ್ರಭುವಿನ ಪರಿಚಯವಿದ್ದಿಲ್ಲ ಆದರೂ ಆ ಕೋಮಲ ಮನಸ್ಸಿನ ಹೆಣ್ಣುಮಗಳು ಕೆಲವು ಹುಡುಗರು ಯಾವನೋ ಬಡ್ಡ ಹುಡುಗನ ಪ್ರಾಣ ತಕ್ಕೊಳ್ಳುವನೆಂದು ತಿಳಿದು ತನ್ನ ಶಿಪಾಯಿಗಳನ್ನು ಕರೆದು, ಆ ಹುಡುಗನನ್ನು ಬಿಡಿಸಲಿಕ್ಕೆ ಅಪ್ಪಣೆ ಮಾಡಿದಳು. ಕೂಡಲೆ ಶಿಪಾಯಿಗಳು, ಆ ಹುಡುಗರು ಗುದ್ದಾಡುತ್ತಿದ್ದ ಸ್ಥಳಕ್ಕೆಹೋಗಿ ಅವರನ್ನು ಬೆದರಿಸಹತ್ತಿದರು. ಶಿಪಾಯಿಗಳ ರಭಸಕ್ಕೆ ಆ ಹುಡುಗರು ಬೆದರಿ ಅಲ್ಲಿಂದ ಕಾಲ್ತೆಗೆಯ ಲುಪಕ್ರಮಿಸಿದರು. ಇದನ್ನು ನೋಡಿ ಮಾಣಿಕಪ್ರಭು ಶಿಪಾಯಿಗಳನ್ನು ಕುರಿತು—ಏನಿರೋ ಇದೆಲ್ಲ ಉಸಾಬರಿ ನಿಮಗೆ ಯಾತಕ್ಕೆ ಬೇಕು? ನಾವು ಹುಡುಗರು, ಆಡುತ್ತೇವೆ; ಬಡಿದಾಡುತ್ತೇವೆ. ನಮ್ಮ ಗೊಡವೆ ನಿಮಗೇನು? ಎಂದು ನುಡಿದು ಕೂಡಲೆ "ನನಗೆ ಎಂಟು ಕವಡಿಗಳು ಬೇಕಾಗಿವೆ; ಯಾರಾದರೂ ಪುಣ್ಯವಂತರಿದ್ದರೆ ಕೊಡಿರಿ; ಅಂದರೆ ನಿಮಗೆ ಒಂದೊಂದು ಕವಡಿಗೆ ಒಂದೊಂದರಂತೆ ಎಂಟು ಗಂಡು ಮಕ್ಕಳನ್ನು ಕೊಡುವೆನು. ಎಂದು ಕೂಗಿದನು. ಆ ಕೂಗನ್ನು ಭೀಮಾಬಾಯಿಯು ಕೇಳಿ ಆಶ್ಚರ್ಯ ಪಟ್ಟಳು. ಆಕೆಯು ಸಂತಾನಾಪೇಕ್ಷೆಯಿಂದ ಎಂಟು ಕವಡಿಗಳನ್ನು ತರಿಸಿ ಕೊಡಿಸಿದಳು. ಮಾಣಿಕಪ್ರಭುವು ಸಂತೋಷ ಪಟ್ಟು ಈ ಕವಡಿಗಳನ್ನು ತರಿಸಿಕೊಟ್ಟವರಿಗೆ ಕವಡಿಗೊಂದರಂತೆ ಎಂಟು ಗಂಡು ಮಕ್ಕಳಾಗಲಿ! ಎಂದು ಹರಕೆಕೊಟ್ಟನು. ಆ ಸಾಧ್ವಿಗೆ ಸಂತೋಷವಾಯಿತು. ಆಕೆಗೆ ಹರಕೆ ಕೊಟ್ಟವನೇ ಮಾಣಿಕಪ್ರಭು ಎನ್ನುವದು ಗೊತ್ತಿರಲಿಲ್ಲ. ಆಗ ಆಕೆಯು

ಮನಸ್ಸಿನಲ್ಲಿ—ಪ್ರಭುವಿನ ದರ್ಶನಕ್ಕಾಗಿ ಊರಲ್ಲಿ ಕಾಲಿಟ್ಟಕೂಡಲೆ ಇದೊಂದು ಶುಭ ಶಕುನವಾಯಿತು. ಎಂದು ಹಿಗ್ಗುತ್ತ ಪ್ರಭುವಿನ ಮನೆಯಕಡೆಗೆ ನಡೆದಳು.

ಮಾಣಿಕಪ್ರಭುವಿನ ತಾಯಿತಂದೆಗಳು ಕೆಲವುದಿನ ಹೈದರಾಬಾದದಲ್ಲಿದ್ದದರಿಂದ ಅವರಿಗೂ ಭೀಮಾಬಾಯಿಗೂ ಪರಿಚಯವಿತ್ತು. ಭೀಮಾಬಾಯಿಯು ದೊಡ್ಡ ಶ್ರೀಮಂತಳೂ ದೈವಭಕ್ತಳೂ ಆದ್ದರಿಂದ ಅವರು ಆಕೆಗೆ ಯೋಗ್ಯಸನ್ಮಾನಮಾಡಿ ಮನೆಯಲ್ಲಿ ಇಳಿಸಿಕೊಂಡರು. ಬಾಯಿಯು ಮೊದಲು ಪ್ರಭುದರ್ಶನ ಮಾಡಿಸಬೇಕೆಂದು ಹೇಳಿಕೊಂಡಳು ಅದಕ್ಕೆ ಅವರು—"ತಾಯಿ, ಪ್ರಭುವು ಈಗ ಮನೆಯಲ್ಲಿಲ್ಲ; ಮೇಲಾಗಿ ಅವನು ನೇಮದವನಲ್ಲ; ಒಮ್ಮೊಮ್ಮೆ ನಾಲ್‌ನಾಲ್ಕು ದಿವಸಗಳಾದರೂ ಮನೆಗೆಬರುವದಿಲ್ಲ. ಮೊದಲು ನಿಮ್ಮ ಊಟ ಉಡುಗೆಗಳ ವ್ಯವಸ್ಥೆಯಾಗಲಿ; ನಂತರ ಪ್ರಭುವು ಮನೆಗೆಬಂದಾಗ ಅವನ ದರ್ಶನಮಾಡಿಸುವೆವು. ಎಂದರು. ಈ ಮಾತಿನಿಂದ ಭೀಮಾಬಾಯಿಗೆ ಸಮಾಧಾನವಾಗಲಿಲ್ಲ; ಆಕೆಯು ಪ್ರಭು ದರ್ಶನವಾದ ಹೊರತು ಊಟಮಾಡಲಿಕ್ಕಿಲ್ಲೆಂದು ನಿಶ್ಚಯಮಾಡಿದಳು. ಹೀಗೆ ಆಕೆಯು ನಿಶ್ಚಯಿಸುತ್ತಿರಲು ಹೊರಗಿನಿಂದ ಪ್ರಭುವು ಓಡಿ ಬಂದು ತಾಯಿಯನ್ನು ಅಪ್ಪಿಕೊಂಡನು. ತಾನು ಬೀದಿಯಲ್ಲಿ ಹುಡುಗರ ಗುದ್ದ್ಯಾಟದಲ್ಲಿ ನೋಡಿದ ಹುಡುಗನೇ ಈಗ ಬಂದದ್ದರಿಂದ ಭೀಮಾಬಾಯಿಯು ಚಕಿತಳಾದಳು ಆಕೆಯು ತನಗೆ ಕವಡಿಗೊಂದರಂತೆ ಎಂಟು ಮಕ್ಕಳಾಗಲೆಂದು ಆಶೀರ್ವಾದವ ಮಾಡಿದವನು ಮಾಣಿಕ ಪ್ರಭುವೇ ಎಂದು ತಿಳಿದು, ಸಂತೋಷಪಟ್ಟು ಆ ಬಾಲಕನಿಗೆ ನಮಸ್ಕರಿಸ ಹೋದಳು. ಆಗ ಮಾಣಿಕ ಪ್ರಭುವು ದೂರ ಸರಿದು ನುಡಿದನೇನಂದರೆ—ನಮಸ್ಕಾರ ಚಮತ್ಕಾರದ ಆಡಂಬರವು ಈಗೇತಕ್ಕೆ? ನೀವು ಎಂಟು ಕವಡಿಗಳನ್ನು ದಾನ ಮಾಡಿದ್ದಕ್ಕೆ ನಿಮಗೆ ಎಂಟು ಮಂದಿ ಗಂಡು ಮಕ್ಕಳಾಗುವರೆಂದು ಆಶೀರ್ವಾದವ ಮಾಡಿದೆಯಷ್ಟೇ; ಆಯಿತು ನಿಮ್ಮ ಕೆಲಸವು!

ಈ ಪ್ರಕಾರ ಮಾತನಾಡಿ ಪ್ರಭುವು ಅಲ್ಲಿಂದ ಹೊರಬಿದ್ದವನು ಪುನಃ ಮನೆಯ ಸಮೀಪಕ್ಕೆ ಬರಲಿಲ್ಲ ಭೀಮಾಬಾಯಿಯ ಇಚ್ಛೆಯು ಪೂರ್ಣವಾದ್ದರಿಂದ ಅವಳು ಪ್ರಭುವಿನ ಮನೆಯಲ್ಲಿ ಪ್ರಸಾದವನ್ನು ಗ್ರಹಣ ಮಾಡಿದಳು. ಮುಂದೆ ಅವಳು ನಾಲ್ಕು ದಿನಗಳವರೆಗೆ ನಿಂತರೂ ಪ್ರಭುವು ಮನೆಗೆ ಬರಲಿಲ್ಲ. ಭೀಮಾಬಾಯಿಯು ಪುನರ್ದರ್ಶನಕ್ಕೆ ಬಹಳವಾಗಿ ಚಡಪಡಿಸಿದಳು. ಕಡೆಗೆ ಅವಳು ನಿರುಪಾಯಳಾಗಿ ಪ್ರಭುವಿನ ತಂದೆತಾಯಿಗಳ ಅಪ್ಪಣೆಯನ್ನು ಪಡೆದು, ಹೈದರಾಬಾದಕ್ಕೆ ಹೊರಟು ಹೋದಳು. ಮುಂದೆ ಆಕೆಗೆ ಪ್ರಭುವಿನ ಆಶೀರ್ವಾದದಂತೆ ಮಕ್ಕಳಾದ ಸಂಗತಿಯನ್ನು ಕ್ರಮೇಣ ವಾಚಕರಿಗೆ ಸಾದರಗೊಳಿಸುವೆವು.

## ೪ನೆಯ ಪ್ರಕರಣ.

### ಪಿತೃ-ವಿಯೋಗ.

ಈ ರೀತಿಯಾಗಿ ಶ್ರೀಮಾಣಿಕಪ್ರಭುವು ಬಾಲಲೀಲೆಗಳನ್ನು ಪ್ರಕಟಿಸುತ್ತಿರಲು ಮನೋಹರ ನಾಯಿಕರಿಗೆ ಮತ್ತೊಬ್ಬ ಗಂಡು ಮಗನು ಹುಟ್ಟಿದನು. ಶ್ರೀದತ್ತನ ವರಪ್ರದಾನದಂತೆ ಕಾರ್ಯಗಳಾಗುತ್ತ ಬಂದವೆಂದು ನಾಯಿಕರು ಸಂತೋಷಬಟ್ಟರು. ಇಷ್ಟೊತ್ತಿಗೆ ಪ್ರಭುವು ಉಪನಯನಕ್ಕೆ ಯೋಗ್ಯನಾದನು. ನಾಯಿಕರು ಸಮಸ್ತ ಬಾಂಧವರಿಂದೊಡಗೂಡಿ ವೈಭವದಿಂದ ಪ್ರಭುವಿನ ಉಪನಯನವನ್ನು ಮಾಡಿದರು. ಮೇಖಲಾಜಿನಗಳನ್ನು ಧರಿಸಿ ಪ್ರಭುವು ಬ್ರಹ್ಮತೇಜಸ್ಸಿನಿಂದ ದೇದೀಪ್ಯಮಾನನಾಗಿ ತೋರಿದನು. ಬಂಗಾರಕ್ಕೆ ಕುಂದಣ ಹಾಕಿದ ಹಾಗಾಯಿತು. ಆತನ ಅತುಲ ತೇಜಸ್ಸನ್ನು ನೋಡಿ, ಜನರು ಬೆರಗಾಗುತ್ತಿರಲು, ಪ್ರಭುವು ಯಾವ ಅಧ್ಯಯನವನ್ನು ಮಾಡದಿದ್ದರೂ ಚತುರ್ವೇದಗಳನ್ನು ಅಸ್ಖಲಿತವಾಗಿ ಅಂದು ತೋರಿಸಿದನು. ಅವನು ಸಮಯೋಚಿತವಾಗಿ ಪ್ರಾಸಬದ್ಧ ಗೀರ್ವಾಣ ಭಾಷೆಯಲ್ಲಿ ಮಾತಾಡಲುಪಕ್ರಮಿಸಿದನು. ದೊಡ್ಡ ದೊಡ್ಡ ವೇದಜ್ಞರೂ, ಶಾಸ್ತ್ರಜ್ಞರೂ ಪ್ರಭುವಿನ ಲೀಲೆಗೆ ಕೌತುಕಪಟ್ಟು ತಮ್ಮ ವಿದ್ಯಾಗರ್ವವನ್ನು ಬಿಟ್ಟು ಆತನ ಚರಣದಲ್ಲಿ ಲೀನರಾದರು. ಮಗನ ದೈವೀ ತೇಜಸ್ಸನ್ನು ನೋಡಿಯಂತೂ ನಾಯಿಕ ದಂಪತಿಗಳ ಆನಂದಕ್ಕೆ ಎಣೆಯಿಲ್ಲದಾಯಿತು.

ಹೀಗೆ ಕೆಲವು ದಿವಸ ಕಳೆಯಲು, ಹಿಂದಿನ ಪ್ರಕರಣದಲ್ಲಿ ಹೇಳಿದಂತೆ ಘೋಷಬಾಯಿಯು ಬಂದಾಗ ಪ್ರಭುವು ಮನೆಯಿಂದ ಹೊರಟು ಹೋದವನು ಬಹಳ ದಿವಸಗಳಾದರೂ ಮನೆಯ ಸನಿಯಕ್ಕೆ ಸುಳಿಯಲಿಲ್ಲ. ಮನೋಹರ ನಾಯಿಕರೂ ಬಯಾಬಾಯಿಯವರೂ ಚಡಪಡಿಸತೊಡಗಿದರು. ಪ್ರಭುವಿನ ವಿಯೋಗವು ಅವರಿಗೆ ಸಹನವಾಗದಾಯಿತು. ಕಡೆಗೆ ಅವರಿಗೆ ಪ್ರಭುವು ಮಂಠಾಳ ಅರಣ್ಯದಲ್ಲಿದ್ದದ್ದು ಗೊತ್ತಾಯಿತು. ಆ ಅರಣ್ಯವು ಮನುಷ್ಯ ಸಂಚಾರಕ್ಕೆ ತಕ್ಕುದಲ್ಲವಿದ್ದರೂ ಪುತ್ರವಾತ್ಸಲ್ಯದಿಂದ ನಾಯಿಕರು ಗಟ್ಟಿಧೈರ್ಯವ ಮಾಡಿ ಆ ಅಡವಿಯನ್ನು ಹೊಕ್ಕರು; ಆದರೆ ಎಷ್ಟು ಹುಡುಕಿದರೂ ಅವರಿಗೆ ಪ್ರಭುವಿನ ದರ್ಶನವಾಗಲಿಲ್ಲ. ಆಗ ನಾಯಿಕರು—“ಪ್ರಭುವಿನ ದರ್ಶನವಾಗದ ಹೊರತು ಅನ್ನೋದಕ ಸೇವಿಸುವದಿಲ್ಲ” ಎಂದು ನಿಶ್ಚಯಿಸಿ ಮಂಠಾಳ ಅರಣ್ಯದಲ್ಲಿರುವ ಅಂಬಲ ಕುಂಡದ ಬಳಿಯಲ್ಲಿ ಅನುಷ್ಠಾನ

ಕ್ಕಾಗಿ ಕುಳಿತುಕೊಂಡರು. ಅವರು ಪ್ರತಿನಿತ್ಯ ಕುಂಡದಲ್ಲಿ ಸ್ನಾನಮಾಡಿ ಶ್ರೀ ಮದ್ಭಗವದ್ಗೀತೆಯ ಪಾರಾಯಣವನ್ನು ಮಾಡತೊಡಗಿದರು. ಇದರಂತೆ ಅವರು ಕೆಲವುದಿವಸಗಳವರೆಗೆ ಅನುಷ್ಠಾನಮಾಡಲು, ಪ್ರಭುವಿಗೆ ದಯೆಹುಟ್ಟಿತು. ಹೀಗಿರಲು, ಒಂದುದಿನ ಸಂಜೆಯಮುಂದೆ ನಾಯಿಕರು ಅನುಷ್ಠಾನ ಮುಗಿಸಿಕೊಂಡು ರಾತ್ರಿಯಲ್ಲಿ ಮಲಗುವದಕ್ಕಾಗಿ ಮಂದಾಳಗ್ರಾಮಕ್ಕೆ ಹೊರಟರು; ದಾರಿಯಲ್ಲಿ ಅವರಿಗೆ ಒಂದು ಹೆಬ್ಬುಲಿಯು ದೃಷ್ಟಿಗೆ ಬಿದ್ದಿತು. ಆ ಭಯಂಕರ ಪ್ರಾಣಿಯನ್ನು ನೋಡಿ ನಾಯಿಕರು ಅಂಜಿದರು. ಆಗ ಅವರು ಶ್ರೀ ದತ್ತಸ್ತೋತ್ರವನ್ನು ಗಟ್ಟಿಯಾಗಿ ಉಚ್ಚರಿಸುತ್ತ ನಿಂತುಕೊಳ್ಳಲು ಸ್ವಲ್ಪ ಹೊತ್ತಿನಲ್ಲಿ ಹುಲಿಯ ಸ್ಥಳದಲ್ಲಿ ಅವರಿಗೆ ಷಡ್ಭುಜಗಳಲ್ಲಿ ಶಂಖ-ತ್ರಿಶೂಲಾದಿಗಳಿಂದ ಒಪ್ಪುವ ಶ್ರೀ ದತ್ತನ ಶಾಂತಮೂರ್ತಿಯು ಕಂಡಿತು!

ಸಾಕ್ಷಾತ್ ಶ್ರೀ ದತ್ತಾತ್ರೇಯನ ದರ್ಶನದಿಂದ ನಾಯಿಕರ ಆನಂದವು ಮೇರೆದಪ್ಪಿತು. ಅವರು ದಂಡವತ್ ಪ್ರಣಾಮವನ್ನು ಮಾಡಿ ಆನಂದಾಶ್ರುಗಳಿಂದ ಪ್ರಭುಚರಣಗಳನ್ನು ತೊಳೆದರು. ಆಗ ಅವರ ಕಂಠವು ಬಿಗಿದು ಬಂದಿತು; ಮೈಮೇಲೆ ರೋಮಾಂಚಗಳೆದ್ದವು; ದೇಹವು ಭಕ್ತಿ ಪರವಶತೆಯಿಂದ ನಡುಗಹತ್ತಿತು. ನಾಯಿಕರ ಈ ಪ್ರೇಮದಿಂದ ದತ್ತನು ಸಂತೋಷಪಟ್ಟು ಚರಣಗಳಿಗೆರಗಿರುವ ಭಕ್ತಶಿರೋಮಣಿಯನ್ನು ಹಿಡಿದೆಬ್ಬಿಸಿ, ತಬ್ಬಿಕೊಂಡು ನುಡಿದನೇನಂದರೆ—"ಭಕ್ತಶ್ರೇಷ್ಠನೇ, ನಾನು ನಿನಗೆ ವರಪ್ರದಾನ ಮಾಡುವಾಗ ಹೇಳಿದ ಸಂಗತಿಯನ್ನು ಮರೆತಿರುವಿಯೇನು? ನಿನಗಾಗುವ ಮೂವರು ಮಕ್ಕಳಲ್ಲಿ ಹಿರಿಯವನು ಅವಧೂತ ಮಾರ್ಗದವನೂ ನಡುವಿನವನು ಭಕ್ತ ಕಲ್ಯಾಣಾರ್ಥವಾಗಿ ಅವತರಿಸಿದ ಮಹಾತ್ಮನೂ ಕಡೆಯವನು ನಿಮ್ಮ ವಂಶವರ್ಧಕನೂ ಆಗುವರೆಂದು ಹೇಳಿರುವೆನಲ್ಲವೆ? ಅದರಂತೆ ಈಗ ಕಾರ್ಯಗಳಾದರೂ ಜರಗುತ್ತಿದ್ದು, ನೀನು ವ್ಯರ್ಥ ಶೋಕಮಾಡುವ ಕಾರಣವೇನು? ಅಪ್ಪಾ ನಾಯಿಕಾ, ಹೀಗೆ ಹಂಬಲಿಸಬೇಡ; ಮಾಣಿಕಪ್ರಭುವು ನಿಮ್ಮ ಮೋಹಪಾಶದಲ್ಲಿ ಸಿಗತಕ್ಕವನಲ್ಲ, ಅವನು ಭಕ್ತರ ಸಲುವಾಗಿ ಹುಟ್ಟಿ ಬಂದದ್ದರಿಂದ ಅವನಿಂದ ನಿಮ್ಮ ಸಾಂಸಾರಿಕ ಬಯಕೆಗಳು ಕೈಗೂಡಲಾರವು, ನಿಮ್ಮ ಕಡೆಯ ಮಗನಾದ ತಾತ್ಯಾಸಾಹೇಬನಿಂದ ನಿಮ್ಮ ವಂಶವೃಕ್ಷವು ಬೆಳೆಯುವದು. ಇನ್ನು ಮುಂದೆ ಪ್ರಭುವಿನ ಚಿಂತೆಯನ್ನು ಬಿಡಿಯಬೇಡ. ಸಂತೋಷದಿಂದ ನಿನ್ನ ಗ್ರಾಮಕ್ಕೆ ಹೋಗಿ ನಿಯಮಾಚಾರದಿಂದ ಬಾಳುವೆ ನಿನ್ನ ಸೇವೆಯಲ್ಲಿ ದೇಹವನ್ನು ಸವಿಸು!!

ಈ ರೀತಿಯಾಗಿ ಶ್ರೀ ದತ್ತನು ಉಪದೇಶಮಾಡಿ ತಿಂದಳ ಪ್ರಸಾದಗಳನ್ನು

ಕೊಟ್ಟು ಅಂತರ್ಧಾನನಾದನು. ಬಳಿಕ ನಾಯಿಕರು ಏಪಾದ ಪಡುತ್ತಿರಲು ಹತ್ತು ವರ್ಷದ ಮಾಣಿಕ ಪ್ರಭುವು ತಂದೆಯ ಮುಂದೆ ನಿಂತುಕೊಂಡನು. ಆಗ ಆ ತಂದೆಮಕ್ಕಳಿಬ್ಬರ ಭೆಟ್ಟಿಯಾಯಿತು. ನಾಯಿಕರು ಮಗನನ್ನು ಮುದ್ದಾಡಿ—ತಮ್ಮಾ ಕಲ್ಯಾಣಕ್ಕೆ ಹೋಗೋಣನಡೆ ಎಂದರು. ತಂದೆಯಮಾತು ಕೇಳಿ ಬಾಲಕನು—ಅಪ್ಪಾ, ಇದೇನು? ಇಷ್ಟೊತ್ತಿನವರೆಗೆ ಶ್ರೀ ದತ್ತಾತ್ರೇಯರು ಹೇಳಿದ್ದನ್ನು ಇಷ್ಟರಲ್ಲಿಯೇ ಮರೆತುಬಿಟ್ಟಿಯಲ್ಲ? ವ್ಯಸನಪಡಬೇಡ; ನನಗೆ ಕೆಲವುಕಾಲ ತಾಯಿಯವರ ಸೇವೆಯು ಲಭಿಸಬೇಕಾಗಿದೆ. ನಾನು ಒಂದಿನಿಂದ ಕಲ್ಯಾಣಕ್ಕೆ ತಪ್ಪದೇ ಬರುವೆನು; ನೀವು ಮುಂದೆ ನಡೆಯಿರಿ; ಎಂದು ತಂದೆಯನ್ನು ಸಮಾಧಾನಗೊಳಿಸಿ ಪ್ರಭುವು ಕಾಣದಂತಾದನು. ಆಗ ನಾಯಿಕರು ಮಗನ ಅದ್ಭುತಲೀಲೆಗೆ ಅಚ್ಚರಿಗೊಂಡು ಮಂಠಾಳದ ದಾರಿಯನ್ನು ಹಿಡಿದರು.

ಬಳಿಕ ಕೆಲವು ದಿವಸಗಳು ಕ್ರಮಿಸಿದವು; ನಾಯಿಕರು ಕಲ್ಯಾಣವನ್ನು ಮುಟ್ಟಿ ಮಗನ ಮಾರ್ಗ ನಿರೀಕ್ಷಣೆಯನ್ನು ಮಾಡತೊಡಗಿದರು. ಮುಂದೆ ಒಂದುದಿನ ಮಧ್ಯಾಹ್ನದ ಹೊತ್ತಿನಲ್ಲಿ ಪ್ರಭುವು ಒಮ್ಮಿಂದೊಮ್ಮೆ ತಾಯಿಯಮುಂದೆ ನಿಂತುಕೊಂಡನು. ಆಗ ಆ ಮಾತೆಗೆ ಆದ ಆನಂದವನ್ನು ವರ್ಣಿಸುವದು ಅಸದಳವು; ಆಕೆಯು ಮಗನ ಮುಂದಲೆಯನ್ನು ಮೂಸಿನೋಡಿ ಅವನನ್ನು ಗಟ್ಟಿಯಾಗಿ ಅವಚಿಕೊಂಡಳು. ಈ ಸುದ್ದಿಯು ಹಾಹಾ ಅನ್ನುವಷ್ಟರಲ್ಲಿ ಊರತುಂಬ ಹಬ್ಬಿತು. ಗ್ರಾಮಾಧಿಕಾರಿಗಳಿಗೂ ಪುರನಿವಾಸಿಗಳಿಗೂ ಪರಮಾನಂದವಾಯಿತು. ಜನರು ಗುಂಪುಗುಂಪಾಗಿಬಂದು ಪ್ರಭುವಿನದರುಶನ ತಕ್ಕೊಳ್ಳಹತ್ತಿದರು. ಬಹುದಿವಸ ಗುಪ್ತನಾದ ಪ್ರಭುವು ಈದಿವಸ ಪ್ರಕಟನಾದ್ದರಿಂದ ಇಂದೇ ದೊಡ್ಡ ಹಬ್ಬವೆಂದು ಜನರು ಊರಲ್ಲಿ ಗುಡಿತೋರಣಗಳನ್ನು ಕಟ್ಟಿ ಬ್ರಾಹ್ಮಣ ಸಂತರ್ಪಣೆಯನ್ನು ನಡಿಸಿದರು. ದೂರ ದೂರಿನ ಜನರು ಮಾಗಾಳಾಯಾಸವನ್ನು ಲೆಕ್ಕಿಸದೆ ಪ್ರಭುದರುಶನಕ್ಕೆ ಬರತೊಡಗಿದರು. ಬರಬರುತ್ತ ಯಾತ್ರಸ್ಥರ ಸಂಖ್ಯೆಯು ಹೆಚ್ಚಿ ಊರು ಜನಸಂದಣಿತವಾಯಿತು.

ಈ ಸಮಯಕ್ಕೆ ಪ್ರಭುವಿನ ತಮ್ಮನಾದ ತಾತ್ಯಾಸಾಹೇಬನ ಉಪನಯನ ಮಾಡಬೇಕಾಯಿತು. ಶ್ರೀ ಪ್ರಭುವು ಸಮರ್ಥನಿದ್ದದರಿಂದ ಮನೆಯಲ್ಲಿ ಯಾತಕ್ಕೂ ಕೊರತೆಯಿಲ್ಲ. ಸಾವಿರಾರು ಜನ ಬ್ರಾಹ್ಮಣರು ಕೂಡಿದರು. ದೊಡ್ಡಮನೆಯ ಕಾರ್ಯವೆಂದು ಅಳತೆಗೆಟ್ಟು ಬಡಬಗ್ಗರು ನೆರೆದರು. ಈ ಉಪನಯನ ಕಾರ್ಯದಲ್ಲಿ ಪ್ರಭುವು ತಾನೇ ಮುಂದರಿದು ಎಲ್ಲಜನರ ಯೋಗಕ್ಷೇಮ

ವನ್ನು ಸರಿಯಾಗಿ ತಕ್ಕೊಂಡನು. ನಿತ್ಯ ಸಾವಿರ ಗಟ್ಟಲೆ ಜನರು ಬಂದರೂ ಅನ್ನದ ಕೊರತೆಯು ಒಬ್ಬರಿಗೂ ಆಗಲಿಲ್ಲ. ಬಡಬಗ್ಗರು ಸಂತೃಪ್ತಿಯನ್ನು ಹೊಂದಿದರು. ಬ್ರಾಹ್ಮಣರು ಪ್ರಭುವಿನ ಕೊಡಗೈಯಿಂದ ಬಡತನವನ್ನು ನೀಗಿದರು. ಈ ರೀತಿಯಾಗಿ ತಾತ್ಯಾಸಾಹೇಬನ ಪೌಂಜೇಬಂಧನವು ಆನಂದದಿಂದ ನೆರವೇರಿದ ಬಳಿಕ ಕೆಲವು ದಿವಸಗಳ ಮೇಲೆ ಮನೋಹರ ನಾಯಿಕರು, ವ್ಯಾಧಿಗ್ರಸ್ತರಾದರು. ಇಷ್ಟೊತ್ತಿಗೆ ಅವರಿಗೆ ವೃದ್ಧಾಪ್ಯವು ಸಮೀಪಿಸಿತ್ತು. ಆದ್ದರಿಂದ ಅವರು ಆ ವ್ಯಾಧಿಯಲ್ಲಿಯೇ ಪ್ರಭು ಚರಣಗಳಲ್ಲಿ ಐಕ್ಯರಾದರು. ಮುಪ್ಪಿನ ಮುತ್ತೈದೆಯಾದ ಬಯಾಬಾಯಿ ಮಾತೆಯವರು ಹಂಬಲಿಸಿ ಹಲುಬಿದರು. ಪ್ರತ್ಯಕ್ಷ ಶ್ರೀದತ್ತನೇ ಮಗನಾಗಿ ಮನೆಯಲ್ಲಿರುತ್ತಿದ್ದರೂ, ನನಗೆ ವೈಧವ್ಯ ಬಂತೆಂದು ಆ ಸಾಧ್ವಿಯು ದುಃಖಿಸಿದಳು. ಆಗ ಪ್ರಭುವು ಮುಂದುಬದು ತಾಯಿಗೆ ಆತ್ಮಾನಾತ್ಮ ವಿಚಾರವನ್ನು ಬೋಧಿಸಿದನು. ಆ ಸದುಪದೇಶದಿಂದ ಆ ಪುಣ್ಯಶಾಲಿನಿಯ ಅಜ್ಞಾನವೆಲ್ಲ ಕತ್ತರಿಸಲು, ಅವಳು ಬ್ರಹ್ಮಾನಂದದಲ್ಲಿ ಲೀನಳಾದಳು.

ಬಳಿಕ ಪ್ರಭುವು ತಮ್ಮ ಅಣ್ಣಂದಿರಾದ ಹನುಮಂತರಾಯ ಉರ್ಫ ದಾದಾಸಾಹೇಬನನ್ನು ಮುಂದೆ ಮಾಡಿ ತಂದೆಯ ಔರ್ಧ್ವದೇಹಿಕ ಕಾರ್ಯವನ್ನು ತೀರಿಸಿದನು. ಈ ಕಾಲಕ್ಕೆ ಪ್ರಭುವು ದೈವೀ ಶಕ್ತಿಯನ್ನು ಚನ್ನಾಗಿ ಪ್ರಕಟ ಮಾಡಿ. ಅಜ್ಞಾನಿಗಳ ಕಣ್ಣುಮುಂದಿರುವ ನಾಸ್ತಿಕ ಭಾವದ ಪಟಲವನ್ನು ಪರಿಹರಿಸಿದನು. ಜನರು ಭಯ-ಭಕ್ತಿಯಿಂದ ಪ್ರಭುವನ್ನು ಭಜಿಸತೊಡಗಿದರು. ಅನೇಕ ಜನ ಮುಮುಕ್ಷುಗಳೂ, ಕಾಮುಕರೂ ಪ್ರಭುವಿನ ಸೇವೆಗಾಗಿ ಆತನ ಬಳಿಯಲ್ಲಿ ನಿಂತುಕೊಂಡರು. ಬ್ರಹ್ಮಾನಂದನಾದ ಶ್ರೀಮಾಣಿಕ ಪ್ರಭುವು ಭಕ್ತರ ಕಲ್ಯಾಣವನ್ನೇ ಚಿಂತಿಸುತ್ತ ಕಲ್ಯಾಣ ಗ್ರಾಮದಲ್ಲಿ ಕೆಲವು ದಿವಸಗಳ ವರೆಗೆ ವಾಸ ಮಾಡಿದನು.

## ೫ನೆಯ ಪ್ರಕರಣ.

### ಸರ್ವಂ ವಿಷ್ಣುಮಯಂ ಜಗತ್.

ಸರ್ವ ಬ್ರಹ್ಮಾಂಡಗಳನ್ನು ನಿರ್ಮಿಸಿದ ಪರಮಾತ್ಮನು ಮನುಷ್ಯರೂಪದಿಂದ ಅವತರಿಸಿದಾಗ ಲೀಲಾ ಮಾತ್ರದಿಂದ ಬೇಕಾದದ್ದನ್ನು ಮಾಡಬಲ್ಲನೆಂಬದನ್ನು ಆಸ್ತಿ

ಕ ಭಾವನೆಯ ನಮ್ಮ ವಾಚಕರಿಗೆ ಬರೆದು ತಿಳಿಸುವ ಕಾರಣವಿಲ್ಲ. ಶ್ರೀಮಾಣಿಕ ಪ್ರಭುವಿನಲ್ಲಿ ಬಹಳ ಪ್ರೀತಿಯನ್ನಿಟ್ಟಿದ್ದ ಒಬ್ಬ ಅಗ್ನಿಹೋತ್ರಿ ಬ್ರಾಹ್ಮಣನು ವೃದ್ಧಾಪ್ಯದ ಮೂಲಕ ದೇಹವು ಜರ್ಜರವಾಗಿರಲು ಅಗ್ನಿಯಲ್ಲಿ ಆಹುತಿಯನ್ನು ಹಾಕುತ್ತ ಕುಳಿತಿದ್ದನು. ಮುಂದೆ ಸ್ವಲ್ಪ ವೇಳೆಯಲ್ಲಿ ಅವರ ದೇಹಾವಸಾನವು ಆಗುವದಿತ್ತು; ಅವರಿಗೆ ತಮ್ಮ ಮರಣವು ತಿಳಿದದ್ದರಿಂದ ಮರಣ ಸಮಯಕ್ಕೆ ಶ್ರೀಮಾಣಿಕ ಪ್ರಭುವಿನ ದರ್ಶನವಾಗಬೇಕೆಂದು ಮನಮುಟ್ಟಿ ಬಯಸುತ್ತಿದ್ದರು. ಅವರ ಅತ್ಯಂತ ಪ್ರೇಮಭಾವವನ್ನು ತಿಳಿದು ಪ್ರಭುವು ದಯಾವಂತನಾಗಿ ಆ ಅಗ್ನಿಹೋತ್ರಿಗಳ ಅಗ್ನಿಕುಂಡದಲ್ಲಿ ಒಮ್ಮಿಂದೊಮ್ಮೆ ಪ್ರಕಟನಾದನು. ಈ ಅದ್ಭುತ ಚಮತ್ಕಾರವನ್ನು ನೋಡಿ ಅಲ್ಲಿ ಕುಳಿತ ಬ್ರಾಹ್ಮಣರಿಗೂ ಅಗ್ನಿಹೋತ್ರಿಗಳಿಗೂ ಪರಮಾಶ್ಚರ್ಯವಾಯಿತು. ಅಗ್ನಿಹೋತ್ರಿಗಳ ಆಯುಷ್ಯವು ತೀರುತ್ತ ಬಂದದರಿಂದ ಅವರು ಆಶ್ಚರ್ಯದಲ್ಲಿ ಹೊತ್ತು ಕಳೆಯದೆ ತತ್ಕ್ಷಣದಲ್ಲಿ ಪ್ರಭುವಿನ ಚರಣದಲ್ಲಿ ಮಸ್ತಕವನ್ನಿಟ್ಟರು. ಭಕ್ತಪ್ರಿಯನಾದ ಪ್ರಭುವು ಮಂದಹಾಸದಿಂದ ನೋಡುತ್ತಿರಲು, ಅಗ್ನಿಹೋತ್ರಿಗಳ ಪ್ರಾಣವು ಜಡದೇಹವನ್ನು ಬಿಟ್ಟು ಪ್ರಭುವಿನ ಚರಣದಲ್ಲಿ ಐಕ್ಯವಾಯಿತು! ಧನ್ಯರು ಅಗ್ನಿಹೋತ್ರಿಗಳು!! ಅವರ ಪುಣ್ಯಕ್ಕೆ ಎಣೆಯುಂಟೇ!!!

ಈ ರೀತಿ ಅಗ್ನಿಹೋತ್ರಿ ಬ್ರಾಹ್ಮಣನಿಗೆ ಸದ್ಗತಿಯನ್ನು ದಯಪಾಲಿಸಿ ಶ್ರೀಮಾಣಿಕ ಪ್ರಭುವು ಕಲ್ಯಾಣಕ್ಕೆ ಹೋಗದೆ ಪಾಂಚಾಳವೆಂಬ ಗ್ರಾಮದ ನೆರೆಯಲ್ಲಿರುವ ಒಂದು ಮಾರುತಿಯ ದೇವಾಲಯಕ್ಕೆ ಹೋದನು. ಈ ದೇವಾಲಯವು ಒಂದು ಕಟ್ಟಡವಿಯಲ್ಲಿತ್ತು. ಆ ಅಡವಿಯು ೬೦-೭೦ ಮೈಲುಗಳವರೆಗೆ ಹಬ್ಬಿದ್ದರಿಂದ ಅದರ ರೌದ್ರತೆಯು ವರ್ಣನೆಯನ್ನು ಮೀರಿತ್ತೆಂದು ಹೇಳಬಹುದು. ಹುಲಿ-ಕರಡಿ ಮೊದಲಾದ ಶ್ವಾಪದಗಳು ಹಗಲ ಹಾಡೇ ಆ ಮಾರುತಿಯ ಗುಡಿಯನ್ನು ಬಂದು ಸೇರುತ್ತಿದ್ದವು. ಮಾರುತಿಯ ಸ್ಥಾನವು ಬಹು ಜಾಗ್ರತವೂ ಅಲ್ಲಿ ಸ್ವಯಂಭೂ ಮಾರುತಿಯ ಮೂರ್ತಿಯೂ ಇದ್ದದರಿಂದ ಒಬ್ಬ ಶ್ರೀಮಂತನು ದೇವರ ಪೂಜೆಗೆ ಬಹು ದೊಡ್ಡ ಉತ್ಪನ್ನವನ್ನು ಹಚ್ಚಿಕೊಟ್ಟಿದ್ದನು. ಆ ಉತ್ಪನ್ನದ ಆಶೆಗಾಗಿ ಪೂಜಾರಿಯು ಸಂಗಡ ನಾಲ್ಕಾರು ಜನರನ್ನು ಕರಕೊಂಡು ದಿವಸಕ್ಕೊಂದು ಸಲ ಆ ಗುಡಿಗೆ ಹೋಗಿ ಶ್ರೀಮಾರುತಿಯ ಪೂಜೆಯನ್ನು ಮಾಡಿ ಎಂಟು ಪ್ರಹರಗಳವರೆಗೆ ಸಾಕಾಗುವಷ್ಟು ಎಣ್ಣೆಯನ್ನು ನಂದಾದೀಪದ ಪಣತಿಯಲ್ಲಿ ಹಾಕಿ ಬರುತ್ತಿದ್ದನು. ಇಂಥ ಭಯಂಕರ ಸ್ಥಳದಲ್ಲಿದ್ದ ಆ ಮಾರುತಿಯ ಗುಡಿಯಲ್ಲಿ ರಾತ್ರಿಯಲ್ಲಿ ಯಾರೂ ವಾಸಮಾಡುತ್ತಿದ್ದಿಲ್ಲವೆಂಬದನ್ನು ಹೇಳಲಿಕ್ಕೇ

ಬೇಡ; ಇಂಥ ಆ ಗುಡಿಗೆ ನಮ್ಮ ಪ್ರಭುವು ಮೇಲೆ ಹೇಳಿದಂತೆ ಬಂದನು.
ಷ್ಯಮಾತ್ರರನ್ನು ಅಂಜಿಸುವ ಆ ಅರಣ್ಯವು ಆ ಮಹಾಮಹಿಮನನ್ನು
ಹುದೆ? ಸರ್ವತ್ರದಲ್ಲಿಯೂ ನಿರ್ಭಯನಾದ ಹಾಗೂ ಸರ್ವಾಂತರ್ಯಾ
ಆ ಪ್ರಭುವು ಗುಡಿಯನ್ನು ಹೊಕ್ಕು ಮೈಮೇಲಿನ ಬಟ್ಟೆಗಳನ್ನೂ ಭಕ್ತ
ಯಿಂದ ಇಟ್ಟ ಅಲಂಕಾರಗಳನ್ನೂ ತೆಗೆದು ಒಂದು ಗಂಟುಕಟ್ಟಿ ಅದನ
ತಿಯ ತಲೆಯಮೇಲೆ ಇಟ್ಟನು. ಬಳಿಕ ಆತನು ತನ್ನ ಪಾದರಕ್ಷೆಗಳನ್ನು
ಟಿನಮೇಲಿಟ್ಟು ಒಂದು ಮೂಲೆಯಲ್ಲಿ ಮಲಗಿಕೊಂಡನು. ಬೆಳಗಾದಬ
ನಿತ್ಯದಂತೆ ಪೂಜಾರಿಯು ನಾಲ್ಕಾರು ಜನರೊಡನೆ ಗುಡಿಗೆ ಬಂದನು.
ತ್ತಾನೆ, ದೇವರ ತಲೆಯಮೇಲೆ ಒಂದು ಅರಿವೆಯಗಂಟು ಇದ್ದು ಮೇಲೆ
ಪಾದರಕ್ಷೆಗಳಿರುತ್ತವೆ. ರಾತ್ರಿಯಲ್ಲಿ ಇಲ್ಲಿಗೆ ಒಂದು ಇಂಥ ಅಧಮ
ಯಾರು ಮಾಡಿದರೆಂದು ಪೂಜಾರಿಯು ಕಿಡಿಕಿಡಿಯಾಗುತ್ತಿರಲು, ಗುಡಿಯ
ಮೂಲೆಯಲ್ಲಿ ಯಾರೋ ಮಲಗಿದಂತೆ ಅವನಿಗೆ ಭಾಸವಾಯಿತು.
ಅವನು ಅಲ್ಲಿಗೆ ಹೋಗಿ ಮಲಗಿದವನನ್ನು ಎಬ್ಬಿಸಿ ವಿಚಾರಿಸಿದನು.
ಪ್ರಭುವು ಆ ಗಂಟನ್ನೂ ಪಾದರಕ್ಷೆಗಳನ್ನೂ ಮಾರುತಿಯ ಮೇಲೆ ನಾನೇ
ನೆಂದು ಹೇಳಿದನು. ಆತನು ಮಾಣಿಕ ಪ್ರಭುವು ಎಂಬದನ್ನರಿಯದೆ,
ದ ಹುಚ್ಚನಾಗಿದ್ದ ಪೂಜಾರಿಯು ಅವನನ್ನು ಮೈಮುರಿ ಥಳಿಸಿ ಕೈಕಾ
ಕಟ್ಟಿ ಚಲ್ಲಿದನು. ಪೂಜಾರಿಯು ತಾಡನಮಾಡುವಾಗ ಪ್ರಭುವು ಸ್ವ
ದುಃಖಪಡಲಿಲ್ಲ; ಅವನ ಮುಖದಲ್ಲಿ ಉಲ್ಲಾಸಕಳೆಯು ಅಷ್ಟಳಿಯದೆ ಒಪ್ಪ

ಇಷ್ಟಾದ ಮೇಲೆ ಪೂಜಾರಿಯು ಮಾರುತಿಯ ಒಳಿಗೆ ಹೋದ
ಅವನಿಗೆ ಮಾರುತಿಗೆ ತೊಡಿಸಿದ ಅಂಗಿಯು (ಝಗ)ಕಾಣದ ಹಾಗಾಯಿ
ದ್ದ ಅಂಗಿಯು ಎಲ್ಲಿ ಮಾಯವಾಯಿತೆಂದು ಅವನು ಕಕ್ಕಾವಿ
ನೋಡುತ್ತಿರಲು, ತಾನು ಕೈಕಾಲು ಕಟ್ಟಿ ಚಲ್ಲಿದ್ದ ಮನುಷ್ಯನ ಮೈ
ಅಂಗಿಯು ಇದ್ದದ್ದು ಕಂಡಿತು. ಪೂಜಾರಿಗೆ ಆಶ್ಚರ್ಯವಾಯಿತು.
ನಿಗೆ ಆ ಮನುಷ್ಯನು ಯಾರಿರಬಹುದೆಂಬ ಸಂಶಯವುತ್ಪನ್ನವಾಯಿತು.
ಹುಚ್ಚೆದ್ದು ಹೊಡೆಯುತ್ತಿದ್ದಾಗ ಅವನು ಕುಲುಕುಲು ನಗುತ್ತಿದ್ದದ್ದೂ,
ತಿಯ ಅಂಗಿಯು ಅವನನ್ನು ಹೊಂದಿದ್ದೂ ಪೂಜಾರಿಯ ಸಂಶಯ
ಕರಣಕ್ಕೆ ಕಾರಣಗಳಾದವು. ಅವನು ಯೋಚನೆಯಲ್ಲಿ ಬಿದ್ದುಕೊಂಡನು.
ರಲ್ಲಿ ಊರೊಳಗಿಂದ ಕೆಲವು ಪ್ರತಿಷ್ಠಿತ ಜನರು ಗುಡಿಗೆ ಬಂದರು.

ಶ್ರೀ ಪ್ರಭುವಿನ ಪರಿಚಯವಿತ್ತು. ಆದ್ದರಿಂದ ಅವರು ಕೂಡಲೆ ಪ್ರಭುವಿನಗುರುತುಹಿಡಿದು ಅವರನ್ನು ಹೀಗೆ ಪ್ರತಿಬಂಧಿಸಿದ್ದಕ್ಕೆ ಪೂಜಾರಿಯನ್ನು ದೂರಿದರು. ಅವರಬಾಯಿಂದ ಶ್ರೀಮಾಣಿಕಪ್ರಭುನೆಂಬ ಹೆಸರನ್ನು ಕೇಳಿದಕೂಡಲೆ ಪೂಜಾರಿಯು ಥರಥರನಡುಗಹತ್ತಿದನು; ಇಷ್ಟೇ ಅಲ್ಲ; ಅವನು ದೊಡ್ಡದನಿಯಿಂದ ಅಳತೊಡಗಿದನು. ಆ ಮಹಾಮುನಿಯಿಂದ ತನಗೆಲ್ಲಿ ಶಾಪವು ತಟ್ಟುವದೋ ಎಂಬದು ಅವನ ಚಿಂತೆಗೆಕಾರಣವಾಗಿತ್ತು. ಆಗ ಆ ಪ್ರತಿಷ್ಠಿತ ಗೃಹಸ್ಥರು ಲಗಬಗೆಯಿಂದ ಪ್ರಭುವಿನ ಕೈಕಾಲುಗಳನ್ನು ಬಿಚ್ಚಿ ಪೂಜಾರಿಯು ತಿಳಿಯದೇ ಹೀಗೆಮಾಡಿದ್ದಕ್ಕೆ ಅವನನ್ನು ಕ್ಷಮಿಸಬೇಕೆಂದು ಹೇಳಿಕೊಂಡರು. ಅದನ್ನುಕೇಳಿಪ್ರಭುವು ಪ್ರಸನ್ನಮುಖದಿಂದ ನುಡಿದನೇನಂದರೆ—"ಅಪ್ಪಗಳಿರಾ, ಯಾರುಯಾರಿಗೆ ಕ್ಷಮೆಮಾಡಬೇಕು? ಚರಾಚರವಸ್ತುಗಳೆಲ್ಲೆಲ್ಲ ಭಗವಂತನ ಅಧಿಷ್ಠಾನವಿರುವದರಿಂದ ಕ್ಷಮೆಯಶಬ್ದವನ್ನು ಉಚ್ಚರಿಸುವ ಪ್ರಸಂಗವೇ ಉಳಿದಿರುವದಿಲ್ಲ. ಪೂಜಾರಿಯು ನನಗೆ ಹೊಡೆದನು, ಕೈಕಾಲುಗಳನ್ನು ಕಟ್ಟಿದನು, ನೀವು ಬಿಡಿಸಿದಿರಿ ಎಂಬಕಲ್ಪನೆಗಳು ಮಾಯೆಯಉಪಾಧಿಯಿಂದಲ್ಲವೆ? ಮಾಯೆಯು ಹೇಳಿಕೇಳಿ ಮಿಥ್ಯವಿರುವದರಿಂದ ತನ್ನಿಮಿತ್ತ ಹುಟ್ಟಿದ ಕಲ್ಪನೆಗಳಾದರೂ ಮಿಥ್ಯವೆಂದು ಬೇರೆಹೇಳುವ ಕಾರಣವೇನು? ಈ ಮಾಯೋಪಾಧಿಯಿಂದಲೇ ಪೂಜಾರಿಗೆ-ಈತನು ದೇವರು, ಇವನತಲೆಯಮೇಲೆ ಪಾದಗಳನ್ನಿಟ್ಟಿರುವದು ಮಹಾಪಾಪವು; ಎಂಬ ಭ್ರಾಂತಿಯುಂಟಾಯಿತು ಆ ಉಪಾಧಿಯೇ ಅವನನ್ನು ಈಗ ಅಳಹತ್ತಿಸುವದು; ಮತ್ತು ನಿಮ್ಮನ್ನು ಬೇಡಿಕೊಳ್ಳಹಚ್ಚಿರುವದು; ಅಪ್ಪಗಳಿರಾ, ಈ ಭ್ರಾಂತಿಯನ್ನು ಬಿಡಿರಿ, "ಸರ್ವಂ ವಿಷ್ಣುಮಯಂಜಗತ್॥ ಎಂಬ ಶ್ರುತಿವಚನವನ್ನು ಅನುಭವಕ್ಕೆ ತಂದುಕೊಳ್ಳಿರಿ. ಅನುಭವಕ್ಕೆ ತಾರದೆಮಾತ್ರ ಆ ವಾಕ್ಯವನ್ನು ಬಾಯಿಕಥನಮಾಡುತ್ತ ಕುಳಿತುಕೊಳ್ಳಬೇಡಿರಿ, ಆ ಅನುಭವದ ಹೆಗ್ಗುರುತೆಂದರೆ ಸರ್ವಕಾಲದಲ್ಲಿಯೂ ನಿರ್ವಿಕಾರಸ್ಥಿತಿಯಲ್ಲಿರುವದು; ಸದ್ಗುರುವನ್ನು ಹುಡುಕಿ ಇಂಥ ಬ್ರಹ್ಮಭಾವನೆಯನ್ನುಂ-ಟುಮಾಡಿಕೊಳ್ಳಿರಿ, ವ್ಯರ್ಥವಾಗಿ ಭ್ರಾಂತಿಗೀಡಾಗಬೇಡಿರಿ."

ಪ್ರಭುವಿನ ಈ ಜ್ಞಾನಪರಮಾತುಗಳನ್ನುಕೇಳಿ ಪೂಜಾರಿಯು ಅಳುವದನ್ನು ಬಿಟ್ಟು ಮಹಾಪ್ರಭೋ ನೀನೇ ಸದ್ಗುರು! ಈದಾಸನನ್ನು ಉದ್ಧರಿಸಬೇಕು ಎಂದು ಆ ಮಹಾತ್ಮನ ಚರಣಗಳನ್ನು ಗಟ್ಟಿಯಾಗಿಹಿಡಿದನು. ಕರುಣಾಳುವಾದ ಮಹಾ

ಕಪ್ರಭುವು ಪೂಜಾರಿಯ ಅಜ್ಞಾನವನ್ನು ಕತ್ತರಿಸಿ ಅವನನ್ನು ಸಮಾಧಾನಪಡಿಸಿದನು. ಆದಿನ ಗುಡಿಗೆಬಂದವರೆಲ್ಲರ ಶ್ರವಣಸಂಪುಟಗಳಲ್ಲಿ "ಸರ್ವಂ ವಿಷ್ಣುಮಯಂಜಗತ್|| ಎಂಬ ವಾಕ್ಯವೇ ಸುಳಿದಾಡತೊಡಗಿತು.

## ೬ನೆಯ ಪ್ರಕರಣ.

ಶರಣಾಗತರ—ತಾರಣ.

ಬಳಿಕ ಪ್ರಭುವು ಅನೇಕಜನ ಬ್ರಾಹ್ಮಣರನ್ನು ಸಂತೃಪ್ತಿಗೊಳಿಸಿ ತನ್ನ ಕುಲಸ್ವಾಮಿಯಕ್ಷೇತ್ರವಾದ ಮೈಲಾರಕ್ಕೆ ಬಂದನು. ಅಲ್ಲಿ ಶ್ರೀ ಖಂಡೋಬನ ಪ್ರೀತ್ಯರ್ಥವಾಗಿ ಮಹಾಪೂಜೆ—ಬ್ರಾಹ್ಮಣ-ಸುವಾಸಿನಿಯರ ಸಂತರ್ಪಣೆ ಮೊದಲಾದವುಗಳನ್ನು ಪ್ರತಿನಿತ್ಯ ನಡೆಸಿದನು, ನೂರಾರುಜನ ಯಾತ್ರಸ್ಥರು ನೆರೆದರು. ಹೈದರಾಬಾದದಿಂದ ದೊಡ್ಡದೊಡ್ಡ ಶ್ರೀಮಂತರೂ ಅಧಿಕಾರಸ್ಥರೂ ಪ್ರಭುವಿನ ದರ್ಶನಕ್ಕೆಬಂದರು. ಒಂದು ತಿಂಗಳವರೆಗೆ ಉತ್ಸವವು ಸಾಗಿತು. ಈ ಅವಧಿಯಲ್ಲಿ ಒಂದುದಿನ ಒಂದು ಚಮತ್ಕಾರವು ಸಂಭವಿಸಿತು. ಅದೇನಂದರೆ-

ಒಂದುದಿನ ಪ್ರಭುವು ಪ್ರವಚನಕ್ಕೆ ಕುಳಿತಾಗ ಒಮ್ಮಿಂದೊಮ್ಮೆ ಕಾಣದಂತಾದನು. ಪೀಠವು ಬರಿದೆ ಉಳಿದಿತ್ತು. ವಸ್ತ್ರಪತ್ರಗಳು ಪ್ರಭುವಿನ ಪೀಠಸ್ತ್ರವದಲ್ಲಿ ಸ್ಥಗಿತವಾಗಿಬಿಟ್ಟಿದ್ದವು. ನೋಡನೋಡುವಷ್ಟರಲ್ಲಿ ಪ್ರಭುವು ಅದೃಶ್ಯನಾಗಲು ಪೀಠಸ್ಥಾನವು ಗಕ್ಕನೆ ನಿಂತಿತು; ಜನರಿಗೆ ಭ್ರಾಂತಿಯುಂಟಾಗಿ ಸ್ವಪ್ನದಲ್ಲಿರುವೆವೋ ಎಚ್ಚರಿಕೆಯಲ್ಲಿರುವೆವೋ ಎಂಬುದು ತಿಳಿಯದಾಯಿತು. ಈ ಸ್ಥಿತಿಯಲ್ಲಿ ೨|೩ ತಾಸುಗಳು ಕ್ರಮಿಸಲು ಪ್ರಭುವು ಪೂರ್ವವತ್ ಪೀಠದಲ್ಲಿ ಕಾಣಿಸಿದನು; ಆಗ ಆತನ ಮೈಮೇಲಿನಬಟ್ಟೆಗಳೆಲ್ಲ ತೊಪ್ಪನೆ ತೊಯ್ದಿದ್ದವು; ಕಾಲುಗಳು ಕೆಸರಾಗಿದ್ದವು; ಈ ಪ್ರಕಾರದ ಪ್ರಭುವಿನ ಸ್ವರೂಪವನ್ನು ಕಂಡು ಆತನಭಕ್ತರು ಧಾವಿಸಿಬಂದು ಮೈಮೇಲಿನ ಬಟ್ಟೆಗಳನ್ನು ತೆಗೆದು ಬೇರೆವಸ್ತ್ರಗಳನ್ನು ಉಡಿಸಿದರು. ಮತ್ತು ಕಾಲುಗಳನ್ನು ತೊಳೆದು ಚನ್ನಾಗಿ ಒರಸಿದರು. ಹೀಗೆ ಯಾಕೆ ಆಗಿರಬಹುದೆಂಬ ಕಾರಣವು ಯಾರಿಗೂ ಹೊಳೆಯಲಿಲ್ಲ. ಪ್ರಭುವಿನ ಮೈಕೈಒರಿಸಿ ಹೊಸವಸ್ತ್ರವನ್ನು ಹಾಕಿ ಆತನನ್ನು ಕುಳ್ಳಿರಿಸಿದಬಳಿಕ ಭಕ್ತರು ವಿನಯದಿಂದ

ಕೈಜೋಡಿಸಿ—"ಪ್ರಭುವಿನಲೀಲೆಯು ಬ್ರಹ್ಮಾದಿಗಳಿಗೂ ಅಗೋಚರವು; ನಮ್ಮಂಥಪಾಮರರಿಗೆ ತಿಳಿಯುವದಂತೂ ಶಕ್ಯವೇ ಇಲ್ಲ. ಈಗಪ್ರಭುವು ಎಲ್ಲಿಗೆಹೋಗಿದ್ದನು? ಮೈಯಲ್ಲ ಹೀಗೆ ತೊಯ್ಯಲಿಕ್ಕೆ ಕಾರಣವೇನು? ಬಾವಿನೀರಿನಲ್ಲಿ ಈಸಾಡುವ ಮನುಷ್ಯನಂತೆ ಪ್ರಭುವಿನ ಸ್ಥಿತಿಯಾಗಿತ್ತಲ್ಲ? ಎಂದು ಪ್ರಶ್ನಮಾಡಿದರು. ಅವರ ಈ ಮಾತನ್ನು ಕೇಳಿ ಪ್ರಭುವು ನಕ್ಕು ನುಡಿದನೇನಂದರೆ—"ಶರಣುಬಂದವರನ್ನು ತಾರಿಸುವದು ನಮ್ಮ ಕರ್ತವ್ಯವು. ಬಾರದೆಇದ್ದರೆ ಮಾತ್ರ ನಮ್ಮ ಯತ್ನವಿಲ್ಲ; ಭವಸಾಗರದಿಂದ ದಾಟಿಸೆಂದು ಶರಣುಬಂದರೆ ಅದರಿಂದ ದಾಟಿಸುವಂತೆ ಜಡದೇಕ್ಕೆಬಂದ ವಿಪತ್ತಿನಿಂದ ದಾಟಿಸೆಂದು ಶರಣುಬಂದರೂ ಪ್ರಸಂಗವಶಾತ್ ನಾವು ದಾಟಿಸುಬೇಕಾಗುತ್ತದೆ; ಮಾಯಕ್ಕೆ ಒಳಗಾದ ಕಾರ್ಯಗಳನ್ನು ಮಾಡದವನು ಮಾಯಕ್ಕೆ ಮೀರಿದ ಅಂದರೆ ನಿರ್ವಿಕಲ್ಪ ಪರಬ್ರಹ್ಮಸ್ಥಿತಿಗೆ ಮುಟ್ಟಿಸುವ ಕಾರ್ಯವನ್ನೇನು ಮಾಡಿಯಾನೆಂದು ಜನರಿಗೆ ಭ್ರಮೆಬಾರದಂತೆ ವರ್ತಿಸುವದಕ್ಕೆ ನಮಗೆ ಶ್ರೀ ದತ್ತನ ಆಜ್ಞೆಯಿರುತ್ತದೆ. ಮಾಯಿಕ ಜನರನ್ನು ಮಾಯಾವ್ಯವಹಾರದಿಂದಲೇ ಭಗವದ್ಭಕ್ತಿಗೆ ಹಚ್ಚಬೇಕಾಗುವದು. ಈ ಮಾತಿನ ನಿದರ್ಶನವು ನಿಮಗೆ ನಾಳೆಗೆ ಬರುವದು."

ಮರುದಿನ ಎರಡು ತಾಸು ಹೊತ್ತು ಏರುವಷ್ಟರಲ್ಲಿ ನೂರಾರು ಜನ ಪ್ರವಾಸಿಗರು ಬಂದರು. ಅವರು ಜಾತಿಯಿಂದ ವೈಶ್ಯರಿದ್ದರು. ಶ್ರೀಮಾಣಿಕಪ್ರಭುವಿನಲ್ಲಿ ಅವರ ಮನೆಯ ಮುಖ್ಯ ಮನುಷ್ಯನು ಸೇವೆಗಾಗಿ ನಿಂತುಕೊಂಡಿದ್ದರಿಂದ ಆ ಜನರು ತಮಗೆ ಯಜಮಾನನನ್ನು ಹುಡುಕುತ್ತ ಪ್ರಭುವು ಮೈಲಾರದಲ್ಲಿರುವನೆಂದು ಕೇಳಿ ಹೊರಟಿದ್ದರು. ಅವರು ಹೀಗೆ ಪ್ರಯಾಣಮಾಡುತ್ತಿರಲು, ಒಂದುದಿನ ಮಳೆಯು ಒಳ್ಳೇ ಕಸುವಿನಿಂದ ಆಗಿ ಹೊಳೆಹಳ್ಳಗಳನ್ನು ಹೊರವಾಹಿಸಿತ್ತು. ಈ ಮಳೆಯಾದ ಕಾಲಕ್ಕೆ ಆ ವೈಶ್ಯಕುಟುಂಬವು ಮೈಲಾರದಿಂದ ಆರೇಳು ಮೈಲುಗಳ ಅಂತರದಲ್ಲಿತ್ತು. ಮಳೆಯಿಂದ ಅವರ ಬಟ್ಟೆಬರೆಗಳೆಲ್ಲ ತೊಯ್ದು ಬಹು ಸಮೀಪದಲ್ಲಿರುವ ಯಾವದಾದರೊಂದು ಹಳ್ಳಿಗೆ ಹೋಗಬೇಕೆಂದು ಅವರು ಧಾವಿಸುತ್ತಿರಲು, ಒಂದುತುಂಬಿದ ಹಳ್ಳವು ಹತ್ತಿತು. ಹಳ್ಳವು ಬಹಳ ಅಗಲವಿದ್ದರಿಂದ ನೀರು ಹೇರಾಗಿ ಇರಲಿಕ್ಕಿಲ್ಲೆಂದು ತಿಳಿದು ಆ ವೈಶ್ಯಕುಟುಂಬವು ಅದರಲ್ಲಿ ಕಾಲಿಟ್ಟಿತು; [illegible] ಬದಲ್ಲಿಯು ಬಾಳ [illegible]ನೆಯಾದ [illegible] ನಡು[illegible]ಗಳು ನೀರಗುಂಡಿಗಳು

ದು ಹೋಗಲಾರಂಭಿಸಿತು. ಆ ಹುಡುಗಿಯನ್ನು ಹಿಡಿಯಬೇಕೆಂದು ಮತ್ತೊಬ್ಬ ಗಂಡಸು ಸಾಗರಬಿದ್ದನು. ನೀರಿನ ಸೆಳವು ಹೆಚ್ಚಾಗಿದ್ದುದರಿಂದ ಅವನೂ ಗುಟುಕುನೀರು ಕುಡಿಯಲಾರಂಭಿಸಿದನು. ಹೀಗೆ ಒಬ್ಬರ ಹಿಂದೊಬ್ಬರಂತೆ ಆ ನಾಲ್ಕಾರು ಜನರು ಹಳ್ಳದಲ್ಲಿ ಧುಮುಕಿ ಪ್ರಾಣಾಂತಸಂಕಟವನ್ನು ತಂದುಕೊಂಡರು. ಆಗ ಆ ಕುಟುಂಬದಲ್ಲಿಯ ಮುಖ್ಯ ಮನುಷ್ಯರು ಅಂದರೆ ಪ್ರಭುವಿನ ಬಳಿಯಲ್ಲಿ ಸೇವೆಗಿದ್ದ ವೈಶ್ಯನ ಹೆಂಡತಿಯೂ, ಮತ್ತು ಆ ಬಾಲವಿಧವೆಯಾದ ಹುಡುಗಿಯೂ ಪ್ರಭುವನ್ನು ಕುರಿತು ಅನನ್ಯಗತಿಕರಾಗಿ ಪ್ರಾರ್ಥಿಸಿದರು. ಆ ಬಾಲವಿಧವೆಯ ಸದ್ಭಾವನೆಯು ಪ್ರಭುವಿನಲ್ಲಿ ಕನಿಕರವನ್ನು ಹುಟ್ಟಿಸಿತು. ಈ ಕನಿಕರವೇ ಹಿಂದೆ ಹೇಳಿದಂತೆ ಪ್ರಭುವನ್ನು ಒಮ್ಮಿಂದೊಮ್ಮೆ ಗುಪ್ತನಾಗಮಾಡಿ ಆತನನ್ನು ಆ ಹಳ್ಳದ ದಂಡೆಗೆ ಬರಮಾಡಿತು. ನೀರಲ್ಲಿ ಮುಳುಮುಳುಗಿ ಏಳುತ್ತಿದ್ದ ಆ ವೈಶ್ಯಪರಿವಾರವನ್ನು ಪ್ರಭುವು ತನ್ನ ಪ್ರಭಾವದಿಂದ ಮೇಲಕ್ಕೆಳೆದು ದಂಡೆಗೆ ಮುಟ್ಟಿಸಿದನು. ಅವರು ದಂಡೆಗೆ ಬಂದು ಕಣ್ದೆರೆದು ನೋಡಲು ಹದಿನಾರು ವರುಷದ ಶಾಮಸುಂದರ ಮೂರ್ತಿಯೊಂದು ಅವರ ಕಣ್ಣಿಗೆ ಬಿದ್ದಿತು. ಮತ್ತೊಮ್ಮೆ ನೋಡುವಷ್ಟರಲ್ಲಿ ಆ ಮೂರ್ತಿಯು ಅಲ್ಲಿ ಇರಲಿಲ್ಲ. ಈ ಚಮತ್ಕಾರದಿಂದ ಆ ವೈಶ್ಯಕುಟುಂಬದವರು ಅತ್ಯಂತ ಭಕ್ತಿಯುಕ್ತರಾಗಿ ಮೇಲೆ ಹೇಳಿದಂತೆ ಪ್ರಭುವಿನ ಬಳಿಗೆ ಬಂದರು. ಅವರ ಬಾಯಿಂದ ಎಲ್ಲ ಸಂಗತಿಯನ್ನು ಕೇಳಿ ಮೈಲಾರದಲ್ಲಿದ್ದ ಜನರು ಆಶ್ಚರ್ಯಚಕಿತರಾದರು. ಶಾಮಸುಂದರನಾದ ಪ್ರಭುವನ್ನು ನೋಡಿ ಆ ಪ್ರವಾಸಿಗರು ಈತನೇ ನಮ್ಮನ್ನು ಹಳ್ಳದಿಂದ ಪಾರುಮಾಡಿದನೆಂದು ಗುರ್ತುಹೇಳಿದರು. ನಿನ್ನೆಯ ದಿವಸ ಪ್ರಭುವು ತೋಯಿಸಿಕೊಂಡು ಬಂದದ್ದಕ್ಕೂ ಈ ದಿನ ಆ ಪ್ರವಾಸಿಗರು ಹೇಳಿದ್ದಕ್ಕೂ ಹೋಲುವುದ್ದರಿಂದ ಪ್ರಭುವಿನ ಅಗಾಧ ಲೀಲೆಗೆ ಎಲ್ಲರೂ ತಲೆದೂಗಿದರು.

ಪ್ರಭುವಿನ ಈ ಅಗಾಧ ಲೀಲೆಯಿಂದ ಬಾಲವಿಧವೆಯಾದ ಆ ವೈಶ್ಯಬಾಲಿಕಗೆ ಪ್ರಭುವಿನಲ್ಲಿ ಅತ್ಯಂತ ನಿಷ್ಠೆಯುತ್ಪನ್ನವಾಯಿತು. ಆ ಹುಡುಗಿಯು ಗುರುಸನ್ನಿಧಿಯಲ್ಲಿ ಸೇವೆಗೆ ನಿಂತುಕೊಂಡಿತು. ತಂದೆ-ತಾಯಿಗಳು ಪುನಃ ತಮ್ಮ ಊರಿಗೆ ಹೊರಟು ಹೋದರೂ ಆ ಹುಡುಗಿಯ ಮನಸ್ಸು ಅತ್ತಿತ್ತ ಚಲಿಸಲಿಲ್ಲ. ಆಕೆಯ ಈ ನಿಷ್ಠೆಯನ್ನು ನೋಡಿ ಜನರು ಬೆರಗಾದರು. ಮಾಯಿಕ ಆಟಗಳಿಂದಲೇ ಜನರನ್ನು ಭಕ್ತಿಮಾರ್ಗಕ್ಕೆ ಹಚ್ಚಬೇಕೆಂದು ಪ್ರಭುವು ಆಡಿದ ಸಂಗತಿಯು ಜನರ

ದರ್ಶನಕ್ಕೆ ಬಂದಿತು. ಆತನು ಶರಣರ ತಾರಣವನ್ನು ಯಾವರೀತಿಯಿಂದ ಮಾಡುತ್ತಾನೆಂಬದು ತಿಳಿಯಬೇಕೆಂದು ಜನರೆಲ್ಲರು ಮಾತನಾಡಿಕೊಂಡರು

## ೭ ನೆಯ ಪ್ರಕರಣ.

### ಮೃತಬಾಲಕ ಸಂಜೀವನ

ಈ ಮೇರೆಗೆ ಪ್ರಭುವು ಮೈಲಾರದಲ್ಲಿ ಅನಂತ ಲೀಲೆಗಳನ್ನು ಪ್ರಕಟಿಸಿ, ಅಖಂಡ ಅನ್ನದಾನದಿಂದ ಪ್ರಾಣಿಮಾತ್ರಕ್ಕೆಲ್ಲ ಆನಂದವನ್ನುಂಟು ಮಾಡಿ ಪುನಃ ಕಲ್ಯಾಣಕ್ಕೆ ಬಂದನು. ಈ ಸಮಯಕ್ಕೆ ಪ್ರಭುವಿನ ತಮ್ಮನಾದ ತಾತ್ಯಾಸಾಹೇಬನು ವಿವಾಹಕ್ಕೆ ಯೋಗ್ಯನಾಗಿದ್ದನು. ಶ್ರೀದತ್ತಗುರುವಿನ ವರಪ್ರಸಾದದಂತೆ ಆತನು ವಂಶರಕ್ಷಕನಾಗಬೇಕಾದ್ದರಿಂದ ಪ್ರಭುವು ತಡವಿಲ್ಲದೆ ಕುಲೀನಳಾದ ಕನ್ಯೆಯನ್ನು ಶೋಧಿಸಿ ಬಹು ಸಮಾರಂಭದಿಂದ ತಮ್ಮನ ವಿವಾಹವನ್ನು ಬೆಳೆಸಿದನು. ಲಗ್ನಕಾಲದಲ್ಲಿ ಕಲ್ಯಾಣ ಗ್ರಾಮದ ನವಾಬನು ಬಹು ವಿಧವಾಗಿ ಸೇವೆ ಮಾಡಿದನು. ಲಗ್ನದ ಎಲ್ಲ ಖರ್ಚನ್ನು ಆತನೇ ನೋಡಿಕೊಂಡನು.

ಈ ಕಾರ್ಯವು ನೆರವೇರಿದ ಕೆಲವು ದಿವಸಗಳ ಮೇಲೆ ಪ್ರಭುವು ಅರಣ್ಯವಾಸಕ್ಕೆ ಹೊರಟನು. ಆಗ ಆ ವೆಂಕಮ್ಮ ಬಾಲಿಕೆಯೂ ಸಂಗಡ ಹೊರಡಲು ಪ್ರಭುವು ಆಕೆಗೆ ನಾಮೋಪದೇಶಮಾಡಿ ವಿಭೂತಿಧಾರಣ ವಿಧಿಯನ್ನು ತಿಳಿಸಿ, ನೀನು ಇಲ್ಲಿಯೇ ಕೆಲವು ದಿವಸ ನಮ್ಮ ತಾಯಿಯ ಸೇವೆ ಮಾಡಿಕೊಂಡಿರೆಂದು ಆಜ್ಞೆ ಮಾಡಿದರು. ಮತ್ತು ಆ ಹುಡುಗಿಯನ್ನು ಕುರಿತು "ವೆಂಕಮ್ಮಾ ಮನಸ್ಸಿನಲ್ಲಿ ಅಸಮಾಧಾನ ಪಡಬೇಡ. ನಮ್ಮ ತಾಯಿಯ ಸೇವೆಯನ್ನು ಮಾಡಿದರೆ ನನ್ನ ಸೇವೆಯನ್ನು ಮಾಡಿದಂತೆ ಆಗುವದು ಎಂದು ಪುನಃ ಹೇಳಿದನು. ಆಗವೆಂಕಮ್ಮನು ಸಂತೋಷದಿಂದ ನುಡಿದಳೇನಂದರೆ—"ಗುರುಮಹಾರಾಜರ, ದಯದಿಂದ ನನಗೆ ಜಗತ್ತೇ ಗುರುಸ್ವರೂಪವಾಗಿರುವದು. ಅಸಮಾಧಾನಕ್ಕೆ ಸ್ಥಳವೆಲ್ಲಿರುವದು!" ವೆಂಕಮ್ಮನ ಈ ಜ್ಞಾನ ಪೂರ್ಣಮಾತಿನಿಂದ ಪ್ರಭುವು ಆನಂದ ಪಟ್ಟು ಸಂಗಡ ನಾಲ್ಕೈದು ಜನ ಶಿಷ್ಯರೊಡನೆ ಭಾಲಕಿ, ಎಂಬ ಗ್ರಾಮದ ನೆರೆಯಲ್ಲಿರುವ ಒಂದು ಘೋರ ಅರಣ್ಯವನ್ನು ಕುರಿತು ನಡೆದನು.

ಈ ಭಾಲಕೀ ಅರಣ್ಯದಲ್ಲಿ ಪ್ರಭುವು ಒಂದೂವರೆ ವರುಷ ಇದ್ದನು. ಇಲ್ಲಿ ಆತನು ಎಷ್ಟು ಗೌಪ್ಯವಾಗಿದ್ದರೂ ಭಕ್ತರು ಆತನನ್ನು ಅರಸುತ್ತ ಬರುತ್ತಿದ್ದರು; ಒಂದುದಿನ ಒಬ್ಬ ಬ್ರಾಹ್ಮಣನು ಹೆಂಡತಿಯನ್ನೂ ೩ ವರುಷದ ಒಂದು ಚಿಕ್ಕ ಪ್ರಾಯದ ಮಗುವನ್ನೂ ಕರಕೊಂಡು ಪ್ರಭುದರ್ಶನಕ್ಕೆ ಹೊರಟನು. ಆತನಲ್ಲಿ ಪ್ರಭುದರುಶನದ ವಿಷಯವಾಗಿ ಅತ್ಯಂತ ಉತ್ಕಂಠೆಯುಂಟಾಗಿತ್ತು. ಆದ್ದರಿಂದ ಆತನು ಕೈಯಲ್ಲಿ ಕಾಸಿಲ್ಲದಿದ್ದರೂ ಸ್ತ್ರೀಸಮೇತನಾಗಿ ಪ್ರಯಾಣ ಬೆಳೆಸಿದ್ದನು. ಆತನು ಪಾದಚಾರಿಯಾಗಿ ನಡೆಯುತ್ತ ಒಂದುದಿನ ರಾತ್ರಿ ಒಂದು ಗುಡಿಯಲ್ಲಿ ವಸತಿಯನ್ನು ಮಾಡಿದನು. ಮಾರ್ಗದಲ್ಲಿ ಅವರಿಗೆ ಎರಡು ದಿನಗಳಿಂದ ಅನ್ನವು ದೊರೆಕಿದ್ದಿಲ್ಲ. ಆಯಾಸವು ಮಿತಿಮೀರಿ ಆಗಿತ್ತು; ಇದಲ್ಲದೆ ಆ ಮಗುವಿಗೆ ಮೈಲಿಗಳೆದ್ದಿದ್ದವು. ಮರುದಿನ ಪ್ರಾಪ್ತವಾಗುವಷ್ಟರಲ್ಲಿ ಆ ಕೂಸು ಬಹಳ ಹೈರಾಣವಾಯಿತು. ಇಂಥ ವಿಪತ್ತಿನಲ್ಲಿ ಅವರು ಸಿಕ್ಕಿದ್ದರೂ ಪ್ರಭುಚರಣಗಳನ್ನು ಕಾಣಬೇಕೆಂಬ ಲವಲವಿಕೆಯುಳ್ಳ ಆ ಬ್ರಾಹ್ಮಣನು ಆಯಾಸವನ್ನು ಲೆಕ್ಕಿಸದೆ ಹಾಗೇ ಹೊರಟನು. ಆ ದಂಪತಿಗಳು ಮಗುವನ್ನು ಬೆನ್ನಿಗೆ ಕಟ್ಟಿಕೊಂಡು ನಡೆದಿರಲು ಪ್ರಭುವು ಇದ್ದ ಅರಣ್ಯದ ನೆರೆಯಲ್ಲಿರುವ ಒಂದು ದೊಡ್ಡ ಕೆರೆಯು ಹತ್ತಿತು; ಅಲ್ಲಿಂದ ಮುಂದೆ ಪ್ರಭುವಿನ ಸ್ಥಳವು ಸಮೀಪದಲ್ಲಿತ್ತು. ಇನ್ನು ಸ್ವಲ್ಪ ಹೊತ್ತಿನಲ್ಲಿ ನಮಗೆ ಗುರುವಿನ ದರುಶನವಾಗುವದೆಂದು ಬ್ರಾಹ್ಮಣನು ಹಿಗ್ಗಿದನು. ಅಷ್ಟರಲ್ಲಿ ಆ ಮಗುವು ಪ್ರಾಣೋತ್ಕ್ರಮಣವನ್ನು ಹೊಂದಿತು! ಹಾಯ್! ಹಾಯ್! ಆ ಬ್ರಾಹ್ಮಣನ ಆಶಾತಂತುವು ಹರಿದು ಹೋಯಿತು. ಗುರುಪಾದವ ಕಾಣುವಷ್ಟರಲ್ಲಿ ಮಗುವು ಸತ್ತು ಅಸಹ್ಯ ದುಃಖವು ಪ್ರಾಪ್ತವಾದದ್ದಲ್ಲದೆ ಅಶೌಚ ಬಂದದ್ದರಿಂದ ತ್ರಿದಿನಗಳವರೆಗೆ ಗುರುವಿನ ದರುಶನವಾಗುವಹಾಗಿಲ್ಲವೆಂದು ಆತನು ನಿಶ್ಚೇಷ್ಟಿತನಾಗಿ ಬಿದ್ದುಕೊಂಡನು. ಆತನ ಹೆಂಡತಿಯಂತೂ ಅತ್ಯಂತ ಶೋಕಾಕುಲಳಾದಳು. ಹೋಗ—ಬರುವವರು ಅವರ ಸಂಗತಿಯನ್ನು ವಿಚಾರಿಸಿ ಮರಮರನೆ ಮರುಗಿದರು.

ಜನರು ಓಡುತ್ತ ಹೋಗಿ ಪ್ರಭುವಿನ ಮುಂದೆ ಈ ಸಂಗತಿಯನ್ನು ನಿವೇದಿಸಿದರು. ಆಗ ಪ್ರಭುವು ಭಕ್ತರೊಡನೆ ಸುಖಸಲ್ಲಾಪಗಳನ್ನು ನಡಿಸಿದ್ದನು. ಈ ಸುದ್ದಿಯನ್ನು ಕೇಳಿದ ಕೂಡಲೆ ತಟ್ಟನೆ ಹೊರಟು ಆ ಕೆರೆಯ ಮೇಲೆ ಒಂದು ಮೃತ ಬಾಲಕನನ್ನು ತೊಡೆಯ ಮೇಲೆ ಮಲಗಿಸಿಕೊಂಡು ಅಮೃತಹಸ್ತವನ್ನು ಅವನ ಮೈ

ಮೇಲೆ ಎಳೆದನು. ಪ್ರಭುವಿನ ಹಸ್ತ ಸ್ಪರ್ಶವಾದ ಕೂಡಲೆ ಆ ಮಗುವು ಎದ್ದು ಕುಳಿತಿತು. ಅದರ ಮೈಮೇಲಿನ ಮೈಲಿಗಳೆಲ್ಲ ಹೇಳಹೆಸರಿಲ್ಲದೆ ಹೋದವು. ಹೀಗೆ ಸತ್ತ ಮಗನು ಬದುಕಲು ಆ ದಂಪತಿಗಳು ಚಟ್ಟನೆದ್ದು ಪ್ರಭುವಿಗೆ ಸಾಷ್ಟಾಂಗ ನಮಸ್ಕಾರ ಹಾಕಿ ಆನಂದ ಪರವಶರಾಗಿ ನಿಂತುಕೊಂಡರು. ಅವರಿಗೆ—ತಮ್ಮ ಮಗುವನ್ನು ಸಜೀವಗೊಳಿಸಿದವನೇ ಮಾಣಿಕ ಪ್ರಭುವೆಂದು ಗೊತ್ತಾಗಲಿಲ್ಲ. ಆಗ ಪ್ರಭುವು ಆ ದಂಪತಿಗಳನ್ನು ಕುರಿತು—"ನೀವು ಎಲ್ಲಿಗೆ ಹೊರಟಿರುವಿರಿ?" ಎಂದು ಕೇಳಿದನು.

ದಂಪತಿಗಳು—ನಾವು ಮಾಣಿಕಪ್ರಭುವಿನ ಕೀರ್ತಿಯನ್ನು ಕೇಳಿ ಆತನ ಚರಣದರುಶನಕ್ಕೆ ಹೊರಟಿರುವೆವು. ದಾರಿಯಲ್ಲಿ ಅನೇಕ ಸಂಕಟಗಳು ಬಂದು ನಮ್ಮನ್ನು, ನಿರ್ವಿಣ್ಣರಾಗಮಾಡಿದವು. ಕಡೆಗೆ ಈ ಮಗುವಿನ ಪ್ರಾಣೋತ್ಕ್ರಮಣವಾಗಿ ಬಹುದೊಡ್ಡ ವಿಘ್ನವುಂಟಾಗಿತ್ತು; ಶ್ರೀ ಪ್ರಭುವು ನಿಮ್ಮ ಮುಖಾಂತರ ನಮ್ಮ ಸಂಕಟವನ್ನು ನಿವಾರಿಸಿದನು. ಇನ್ನು ಆತನ ದರುಶನಕ್ಕೆ ಹೋಗುವೆವು.

ಪ್ರಭು—ಪ್ರಭುವಿನ ದರುಶನವು ನಿಮಗೆ ಇಲ್ಲಿಯೇ ಆದರೆ ಹೇಗೆ?

ದಂಪತಿಗಳು—ಅಷ್ಟು ಪುಣ್ಯವು ನಮ್ಮ ಹಣೆಯಲ್ಲಿರಬಹುದೇನು?

ಪ್ರಭು—ಇರಲಿ; ನೀವು ಹಸಿದಿರುವಿರಿ; ೨-೩-ದಿವಸ ಅನ್ನವಿಲ್ಲದೆ ಬಳಲಿದಂತೆ ಕಾಣುತ್ತದೆ; ನನಗೂ ಹಸಿವೆಯಾಗಿರುವದು. ಊಟವಾದಬಳಿಕ ನಿಮಗೆ ದರುಶನವಾದೀತು.

ಈ ಮೇರೆಗೆ ಪ್ರಭುವು ಮಾತನಾಡಿ ತಮ್ಮ ಶಿಷ್ಯರನ್ನು ಕರೆದು—"ಈ ದಿನ ಮೃತಬಾಲಕನ ಸಂಜೀವನವಾಗಿರುವದು. ಶ್ರೀ ದತ್ತ ಪ್ರೀತ್ಯರ್ಥವಾಗಿ ಸಂತರ್ಪಣೆಯನ್ನು ಮಾಡಬೇಕು. ಊರಲ್ಲಿ ಹೋಗಿ ಬೇಗನೆ ಮಧುಕರಿಯನ್ನು ಬೇಡಿಕೊಂಡು ಬರ್ರಿ ಎಂದನು. ಗುರುವಿನ ಅಪ್ಪಣೆಯಂತೆ ನಾಲ್ಕು ಜನ ಶಿಷ್ಯರು ಊರಲ್ಲಿ ಹೋಗಿ ೪ ಜೋಳಿಗೆಗಳ ತುಂಬ ಮಧುಕರಿಯನ್ನು ತಂದರು; ಅಲ್ಲಿಯೇ ಕೆರೆಯ ದಂಡೆಯ ಮೇಲೆ ಪ್ರಶಸ್ತವಾದ ಸ್ಥಳವಿದ್ದದರಿಂದ ಎಲೆಗಳನ್ನು ಹಾಕಿದರು. ಪ್ರಭುವು ಸುತ್ತುಮುತ್ತಿನ ಹಳ್ಳಿಯ ಜನರನ್ನೆಲ್ಲ ಕರೆಯಿಸಿದನು. ಸ್ವಲ್ಪ ಹೊತ್ತಿನಲ್ಲಿ ಬ್ರಾಹ್ಮಣರಿಂದ ಅತಿಶೂದ್ರರ ವರೆಗೆ ೪ ಸಾವಿರ ಜನರು ಕೂಡಿದರು ಅವರವರ ಜಾತಿಯಮರ್ಯಾದೆಯಂತೆ ಬೇರೆಬೇರೆ ಸ್ಥಳಗಳಲ್ಲಿ ಎಲೆಗಳು ಹಾಕಲ್ಪಟ್ಟವು.

ಬಳಿಕ ಪ್ರಭುವು ಶಿಷ್ಯರು ತಂದ ನಾಲ್ಕು ಜೋಳಿಗೆಗಳನ್ನು ತರಿಸಿ ಅದರಲ್ಲಿದ್ದ ಪದಾರ್ಥಗಳನ್ನು ಹೊರಗೆ ತೆಗೆದಿಡಲಿಕ್ಕೆ ಹೇಳಿದನು. ಅನ್ನ-ಭಕ್ಕರಿ-ಪಲ್ಲೆ-ನುಚ್ಚು ಮೊದಲಾದ ಪದಾರ್ಥಗಳನ್ನು ಅವರು ಬೇರೆಬೇರೆಯಾಗಿ ತೆಗೆದಿಡಹತ್ತಿದರು. ಅವರು ತೆಗೆತೆಗೆದಂತೆ ಜೋಳಿಗೆಯು ತುಂಬುತ್ತ ನಡೆಯಿತು. ಹೊರಗೆ ಪರ್ವತ ಪ್ರಾಯವಾಗಿ ಅನ್ನದ ರಾಶಿಯು ಬಿದ್ದಿತು. ನಾಲ್ಕು ಸಾವಿರ ಜನರೂ ಆ ಮಹಾ ಪ್ರಸಾದವನ್ನುಂಡು ಸಂತುಷ್ಟರಾದರು. ಈ ಅದ್ಭುತವನ್ನು ನೋಡಿ ಆ ಬ್ರಾಹ್ಮಣ ದಂಪತಿಗಳು ಬೆರಗಾದರು. ಆವಾಗ ಈತನೇ ಶ್ರೀ ಮಾಣಿಕಪ್ರಭುವೆಂದು ಗೊತ್ತಾಯಿತು. ಆಗ ಆ ಬ್ರಾಹ್ಮಣನ ಆನಂದವನ್ನು ಕೇಳುವದೇನು? ಅವನು ಧಾವಿಸಿಹೋಗಿ ಪ್ರಭುಚರಣಗಳನ್ನು ಗಟ್ಟಿಯಾಗಿ ಹಿಡಿದನು. ಬ್ರಾಹ್ಮಣನ ಭಕ್ತಿಯನ್ನು ನೋಡಿ ಪ್ರಭುವು ಆನಂದಪಟ್ಟು "ಬ್ರಾಹ್ಮಣನೇ ನಿನಗೆ ಈಗ ಪ್ರಭುದರ್ಶನವಾಯಿತೇ ಎಂದು-ಕೇಳಿ ಅನೇಕ ಬಗೆಯ ಸದುಪದೇಶಗಳಿಂದ ಅವನನ್ನು ಸಂತುಷ್ಟವಾಗಮಾಡಿದನು. ಪ್ರಭುವನ್ನು ಈ ಪರಿ ಋಣಿಯಾಗಮಾಡಿದ ಆ ಬ್ರಾಹ್ಮಣನ ಭಾವಿಕತನದ ಧನ್ಯವಾದವನ್ನು ಎಷ್ಟು ಮಾಡಿದರೂ ಸ್ವಲ್ಪವೇ ಇರುವದು!



## ೮ನೆಯ ಪ್ರಕರಣ.

### ಯದೃಚ್ಛಾಲಾಭ ಸಂತುಷ್ಟಿ.

ಲೋಕದೊಳಗೆ ಸಾಮಾನ್ಯ ಪುರುಷರು ವಿಶೇಷವಾಗಿ ಸುಖಾಭಿಲಾಷಿಗಳೇ ಇರುತ್ತಾರೆ. ದೇವರು ಕೊಟ್ಟದ್ದರಲ್ಲಿ ಸಂತೋಷಪಡುವ ಗುಣವು ಅವರಲ್ಲಿ ಇರುವದಿಲ್ಲ. ಅವರ ಇಚ್ಛೆ [illegible] ಬೆಳೆಯುತ್ತಿರುತ್ತದೆ. ಅವರು ತಮ್ಮಲ್ಲಿ ಅಗಾಧ ಸಾಮರ್ಥ್ಯವಿದ್ದರೂ ಅದನ್ನು ಬಿಟ್ಟು ಭೋಗಕ್ಕೆ ಸುಲಭವಾಗಿ ದೊರೆತ ಆಹಾರವನ್ನು ಉಣ್ಣುವರು ಪ್ರಾಪ್ತವಾದ ವಸ್ತುವನ್ನು ಭೋಗಿಸುವರು. ಹಾಗಾದಲ್ಲಿ-ಹೀಗಾದಲ್ಲಿ ಎಂಬ ಹಂಬಲವನ್ನು ಹಿಂಬಾಲಿಸುವದಿಲ್ಲ. ಯದೃಚ್ಛಾಲಾಭ ಸಂತುಷ್ಟರೆನಿಸುವ [illegible]. ಅಂತೇ ಅವರಿಗೆ ದೊಡ್ಡವರೆಂಬ ಉಬ್ಬುವದು [illegible], ಮಾನಾಪಮಾನ, [illegible] ಇವೇ ಮೊದಲಾದ [illegible] ಯಾವು ನಿಲುಕಲಾರವೋ ಅವರೇ ನಿಜವಾದ [illegible]. ಅವರನ್ನು [illegible] ಬಿಟ್ಟಕ್ಕೆ ಹಾಲು ಬಿಟ್ಟಕ್ಕೆ [illegible], [illegible], [illegible], ಎಂಬ [illegible] ಗಳಿಗೆ [illegible]. ಈ ಗುಣವನ್ನು [illegible] ಮನುಷ್ಯನ ಇತಿ ಕರ್ತವ್ಯವು. [illegible] ಸಂಪ್ರಯು. ಸತ್ಪುರುಷರ [illegible] ಸಂಪಾದಿಸುವದರಲ್ಲಿಯೇ ಆಚರಿಸಬೇಕೆಂದು ಹೇಳಲಾಗುವದು. [illegible] ಪ್ರಭುವರ ಆಚರಣೆಯಲ್ಲಿ [illegible] ದೃಗ್ಗೋಚರವಾಗುತ್ತದೆ. ಮತ್ತು ಅದೇ [illegible].

ಶ್ರೀ ಮಾಣಿಕಪ್ರಭುಗಳು ಮೃತಬಾಲಕನನ್ನು [illegible] ಸುದ್ದಿಯು ಹಾ ಹಾ ಅನ್ನುವಷ್ಟರಲ್ಲಿ ದಶದಿಕ್ಕುಗಳಲ್ಲಿ ಹಬ್ಬಿ, [illegible] ಜನ [illegible] ಕರ ಬಾಯಲ್ಲಿ ಸೇರೊಹೋಯಿತು. [illegible]. ಆಧ್ಯಾತ್ಮಿಕ ವೈಭವವನ್ನು [illegible] ವೈಭವವನ್ನು ಇಚ್ಛಿಸುವ ಜನರೇ ಹೆಚ್ಚು [illegible]. [illegible] ಕಂಡು ಪ್ರಭುವು ಮನಸ್ಸಿನಲ್ಲಿಯೇ [illegible] ಸುತ್ತಿದ್ದನು. ಹೀಗಿರಲು ಪ್ರಭುವು [illegible] ಸಮಾಧಿ [illegible]

# ೪ನೆಯ ಪ್ರಕರಣ.

## ಯದೃಚ್ಛಾ ಲಾಭ ಸಂತುಷ್ಟತೆ.

ಲೋಕದೊಳಗೆ ಸಾಮಾನ್ಯ ಪುರುಷರು ಬಹುತರವಾಗಿ ಸುಖಾಭಿಲಾಷಿಗಳೇ ಇರುತ್ತಾರೆ. ದೇವರು ಕೊಟ್ಟಿದ್ದರಲ್ಲಿ ಸಂತೋಷವನ್ನು ಪಡೆಕೊಳ್ಳುವ ಗುಣವು ಅವರಲ್ಲಿ ಇರುವದಿಲ್ಲ. ಆದರೆ ಇದಕ್ಕೆ ವಿಪರೀತವಾಗಿ ದೊಡ್ಡವರಸ್ಥಿತಿಯಿರುತ್ತದೆ. ಅವರು ತಮ್ಮಲ್ಲಿ ಅಗಾಧ ಸಾಮರ್ಥ್ಯವಿದ್ದರೂ ಅದನ್ನು ಬಚ್ಚಿಟ್ಟು ಭೋಗಕ್ಕೆ ಸರಿಯಾಗಿ ದೊರೆತ ಆಹಾರವನ್ನು ಉಣ್ಣುವರು. ಪ್ರಾಪ್ತವಾದ ವಿಪತ್ತನ್ನು ಭೋಗಿಸುವರು. ಹಾಗಾಗಲಿಲ್ಲ-ಹೀಗಾಗಲಿಲ್ಲ ಎಂಬ ಹಂಬಲವನ್ನು ಹಿಂಬಾಲಿಸುವದಿಲ್ಲ. ಯದೃಚ್ಛಾಲಾಭ ಸಂತುಷ್ಟತೆಯಿಂದ ಕಾಲಕಳೆಯುವರು. ಅಂತೇ ಅವರಿಗೆ ದೊಡ್ಡವರೆಂಬ ಉರುಬಿರುದು ಬಂದಿರುತ್ತದೆ. ಸುಖ-ದುಃಖ, ಮಾನಾಪಮಾನ, ನಿಂದಾಸ್ತುತಿ ಇವೇ ಮೊದಲಾದ ದ್ವಂದ್ವಗಳಿಗೆ ಯಾರು ನಿಲುಕಿಲ್ಲವೋ ಅವರೇ ನಿಜವಾದ ದೊಡ್ಡವರು. ಅವರನ್ನು ಬಿಟ್ಟು ಉಳಿದವರು ಅಟ್ಟಕ್ಕೆ ಹಾರಿ ಜಿಟ್ಟಕ್ಕೆ ಬಿದ್ದರೂ ದಾಂಭಿಕರೂ, ಠಕ್ಕರೂ, ಕಾರ್ಯಸಾಧಕರೂ, ಎಂಬ ವಿಶೇಷಣಗಳಿಗೆ ಗುರಿಯಾಗದೆ ಇರರು. ಈ ಗುಣವನ್ನು ಸಂಪಾದಿಸುವದೇ ಮನುಷ್ಯನ ಇತಿ ಕರ್ತವ್ಯತೆಯು. ಈ ಸ್ಥಿತಿಗೇ ಶುದ್ಧಬ್ರಹ್ಮ ಸ್ಥಿತಿಯೆಂಬ ಸಂಜ್ಞೆಯು. ಸತ್ಪುರುಷರ ಚರಿತ್ರಾವಲೋಕನದ ಫಲವು ಈ ನಿರ್ವಿಕಾರ ಸ್ಥಿತಿಯನ್ನು ಸಂಪಾದಿಸುವದರಲ್ಲಿಯೇ ಅಡಕವಾಗಿರುತ್ತದೆಂದು ಹೇಳಲಾಗುವದು. ಯಾಕೆಂದರೆ ದೊಡ್ಡವರ ಆಚರಣೆಯಲ್ಲಿ ಪ್ರಾಮುಖ್ಯವಾಗಿ ನಿರ್ವಿಕಾರತೆಯೇ ದೃಗ್ಗೋಚರವಾಗುತ್ತದೆ. ಮತ್ತು ಅದೇ ಅವರಿಗೆ ಪ್ರಿಯವಿರುತ್ತದೆ. ಇರಲಿ.

ಶ್ರೀ ಮಾಣಿಕಪ್ರಭುಗಳು ಮೃತಬಾಲಕನನ್ನು ಸಂಜೀವಗೊಳಿಸಿದ ಸುದ್ದಿಯು ಹಾ ಹಾ ಅನ್ನುವಷ್ಟರಲ್ಲಿ ದಶದಿಕ್ಕುಗಳಲ್ಲಿ ಪಸರಿಸಿ, ಅಸಂಖ್ಯ ಜನ ಕಾಮುಕರ ಬಾಯಲ್ಲಿ ನೀರೊಡೆಸಿತು. ಸಾವಿರಾರು ಜನರು ಕೂಡತೊಡಗಿದರು. ಅಧ್ಯಾತ್ಮಿಕ ವೈಭವವನ್ನು ಬೇಡುವವರು ಲುಪ್ತಪ್ರಾಯರಾಗಿ ಮಾಯಿಕ ವೈಭವವನ್ನು ಇಚ್ಛಿಸುವ ಜನರೇ ಹೆಚ್ಚು ಬರತೊಡಗಿದರು. ಜನರ ಈ ಅಜ್ಞಾನವನ್ನು ಕಂಡು ಪ್ರಭುವು ಮನಸಿನಲ್ಲಿಯೇ ಕಳವಳಪಟ್ಟು ಕಾಮುಕರನ್ನು ಜ್ಞಾನಮಾರ್ಗಕ್ಕೆ ಒಲಿಸುತ್ತಿದ್ದನು. ಹೀಗಿರಲು ಪ್ರಭುವು ಒಂದು ವರುಷ ಸಮಾಧಿಯೋಗವನ್ನು ತಾಳ

ಇತ್ತು. ಆವಳು ಶರೀರವನ್ನು ಶುಷ್ಕಗೊಳಿಸಿ, ಷಡ್ವಿಕಾರಗಳನ್ನು ಅಳಿದು ಶುಚಿಯಾದ ಮನಸ್ಸಿನಿಂದ ಪ್ರಭುಗಳನ್ನು ನೆನೆಯುತ್ತ ಯಾವಾಗಲೂ ಗುಹೆಯ ಕಡೆಗೇ ದೃಷ್ಟಿಯನ್ನಿಟ್ಟು ಕುಳಿತುಕೊಳ್ಳುತ್ತಿದ್ದಳು. ಈ ಸಾತ್ವಿಕಾಚರಣೆಯಿಂದ ಆವಳ ಅಧಿಕಾರವು ಹೆಚ್ಚಿತು.

ಈ ರೀತಿಯಾಗಿ ಒಂದು ವರುಷವು ಕ್ರಮಿಸಿತು. ಪ್ರಭುವು ಸಮಾಧಿಯನ್ನಿಳಿಸುವ ಅವಧಿಯು ಸಮೀಪಿಸಿತು. ಬಹಳ ದಿವಸಗಳ ವರೆಗೆ ಪ್ರಭುವನ್ನು ಕಾಣದೆ ಜಡಪಡಿಸುತ್ತಿದ್ದ ಭಕ್ತವೃಂದವು ಕೂಡಿತು. ದೂರದೂರಿನ ಜನರು ಬಂದರು. ಶ್ರೀಮಂತರು, ಬಡವರು, ಅಧಿಕಾರಿಗಳು, ಅನಧಿಕಾರಿಗಳು, ಕಾಮುಕರು, ಹೆಚ್ಚಿದರು. ಆ ಗುಹೆಯು ಇದ್ದ ವನ ಪ್ರದೇಶವೆಲ್ಲ ಒಂದು ಶೋಭಾಯಮಾನವಾದ ಪಟ್ಟಣದಂತೆ ರಮ್ಯವಾಗಿ ತೋರಿತು. ಜನರ ಲಕ್ಷ್ಯವೆಲ್ಲ ಪ್ರಭುವು ಏಳುವವರ ಕಡೆಗೇ ಇತ್ತು. ಹೀಗಿರಲು, ಹೊಸ ವರುಷದ ಮೊದಲನೆಯ ದಿವಸವೆಂದರೆ ಯುಗಾದಿಯ ಹಬ್ಬವು ಪ್ರಾಪ್ತವಾಯಿತು. ಇಂದು ಪ್ರಭುವು ಏಳತಕ್ಕವನು. ಜನರೆಲ್ಲರೂ ತೈಲಾಭ್ಯಂಗನ ಮಾಡಿ ಗುಹೆಯ ಮುಂದೆ ನೆರೆದರು. ಬೆಂಡು-ಬತ್ತಾಸ ಹಣ್ಣು-ಕಾಯಿ ಕರ್ಪೂರ ಮೊದಲಾದ ದರುಶನೋಚಿತವಾದ ಪದಾರ್ಥಗಳು ಪ್ರತಿಯೊಬ್ಬರ ಕೈಯಲ್ಲಿ ಒಪ್ಪುತ್ತಿದ್ದವು. ವಾಚಕರ ಪೂರ್ವ ಪರಿಚಿತರಾದ ಹೈದರಾಬಾದದ ನಮ್ಮ ಭೀಮಾಬಾಯಿಯು ಪ್ರಭುವಿನ ಕೃಪೆಯಿಂದ ಇದು ವರೆಗೆ ತನಗಾಗಿದ್ದ ನಾಲ್ವರು ಮಕ್ಕಳನ್ನು ಪ್ರಭುಚರಣಕ್ಕೆ ಎರಗಿಸಲು ಕರೆದುಕೊಂಡು ಬಂದಿದ್ದಳು.

ಸುಮಾರು ಎರಡು ತಾಸು ಹೊತ್ತು ಏರಿದ ನಂತರ ಬ್ರಹ್ಮಚಾರಿಯು ಗುಹೆಯ ಮುಖವನ್ನು ಮುಚ್ಚಿಸಿ ಬಂಡೆಗಲ್ಲನ್ನು ಬದಿಗೆ ದೂಡಿದನು. ಗುಹೆಯ ಮುಖವು ಮನುಷ್ಯರ ಪ್ರವೇಶಕ್ಕೆ ಮುಕ್ತದ್ವಾರವಾಯಿತು. ಬಾಗಿಲವನ್ನು ತೆರೆದ ಕೂಡಲೆ ಸ್ವಚ್ಛವಾದ ಸೂರ್ಯಪ್ರಕಾಶದಲ್ಲಿ ಪ್ರಭುವಿನ ದೇದೀಪ್ಯಮಾನವಾದ ಮೂರ್ತಿಯು ಭಕ್ತರ ದೃಷ್ಟಿಗೆ ಬಿದ್ದಿತು. ಆ ಕೂಡಲೆ ಜನರು "ಭಕ್ತಕಾರ್ಯ ಕಲ್ಪದ್ರುಮ ಶ್ರೀಮದ್ರಾಜಾಧಿರಾಜ ಕಲ್ಯಾಣಾಧೀಶ ಶ್ರೀಮಾಣಿಕಪ್ರಭು ಮಹಾರಾಜಕೀಜಯ" ಎಂದು ಜಯಘೋಷವನ್ನು ಮಾಡಿದರು. ಆಗ ಜನರಲ್ಲಿ ನಾ ಮುಂದೆ ನಾ ಮುಂದೆ ಎಂಬ ದರ್ಶನೋತ್ಸುಕತೆಯು ಹೆಚ್ಚಿತು; ಆದರೆ ನಾಯಬನು ಒಳ್ಳೇ ವ್ಯವಸ್ಥೆಯನ್ನಿಟ್ಟು ಒಬ್ಬೊಬ್ಬರನ್ನೇ ಒಳಗೆ ಬಿಟ್ಟು ಎಲ್ಲರಿಗೂ ದರುಶನ ಮಾಡಿಸುವ ಪ್ರಯತ್ನ ಮಾಡಿದನು. ಆತನ ಈ ಪ್ರಯತ್ನಕ್ಕೆ ಚನ್ನಾಗಿ ಯಶಸ್ಸು ದೊರೆಯಿತು.

ಮಧ್ಯಾಹ್ನದ ಎರಡು ಗಂಟೆ ಹೊಡೆಯುವಷ್ಟರಲ್ಲಿ ಎಲ್ಲರಿಗೂ ದರುಶನವಾಯಿತು. ಭೀಮಾಬಾಯಿಯು ತನ್ನ ನಾಲ್ಕು ಜನ ಮಕ್ಕಳನ್ನು ಪ್ರಭುವಿನ ಚರಣದಲ್ಲಿರಿಸಿ ನಮಸ್ಕರಿಸಿದಳು. ಹಾಗು ೫ ಸಹಸ್ರರೂಪಾಯಿಗಳನ್ನು ಸಮರ್ಪಿಸಿದಳು. ಆಗ ಪ್ರಭುವು ಮುಗುಳು ನಗೆಯಿಂದ—"ತಾಯಿ, ನಿನಗೆ ಇನ್ನೂ ನಾಲ್ಕು ಜನ ಮಕ್ಕಳಾಗಬೇಕಲ್ಲವೆ?" ಎಂದು ಕೇಳಿದನು. ಮಕ್ಕಳು ಮಕ್ಕಳು ಎಂದು ಅಂಡಲೆಯುತ್ತಿದ್ದ ಭೀಮಾಬಾಯಿಯು ಈಗಾಗಿದ್ದ ನಾಲ್ಕು ಜನ ಮಕ್ಕಳನ್ನು ಸಂರಕ್ಷಿಸುವದರಲ್ಲಿಯೇ ಬೇಸತ್ತು ಹೋಗಿದ್ದಳು. ಇನ್ನೂ ನಾಲ್ಕು ಜನ ಮಕ್ಕಳಾದರೆ ಮುಂದೆ ನನ್ನ ಗತಿಯೇನೆಂಬ ವಿಚಾರ ಹುಟ್ಟಿ ಆ ಹೆಣ್ಣುಮಗಳು ಪ್ರಭುವಿಗೆ ಮಕ್ಕಳು ಸಾಕೆಂದು ಪ್ರಾರ್ಥಿಸಿದಳು. ಆಗ ಪ್ರಭುವು ಕರುಣಾಳುವಾಗಿ—ತಾಯಿ, ಹೆದರಬೇಡ; ನಿನಗೆ ಪ್ರಭುವಿನ ವರದಂತೆ ಎಂಟು ಜನ ಮಕ್ಕಳಾಗಬೇಕಾಗಿತ್ತು; ಆದರೆ ನೀನು ಬಹಳ ಹೇಳಿಕೊಳ್ಳುವದರಿಂದ ನಿನಗೆ ಹೆಚ್ಚಾಗಿ ಕಷ್ಟಕೊಡಬಾರದೆಂದು ಮೂರು ಜನ ಮಕ್ಕಳ ಹರಿಕೆಯನ್ನು ಹಿಂದಕ್ಕೆ ತಕ್ಕೊಳ್ಳುವೆವು. ಇನ್ನೊಂದು ಮಗುವು ಮಾತ್ರ ನಿನಗೆ ಹುಟ್ಟುವದು. ಎಂದು ಅಂದನು. ಭೀಮಾಬಾಯಿಯು ಸಂತುಷ್ಟಳಾದಳು. ಆಕೆಯಂತೆ ಹರಿಕೆ ಹೊತ್ತ ಎಷ್ಟೋ ಜನ ಗಂಡಸರು-ಹೆಂಗಸರು ಬಂದು ಪ್ರಭುವಿನ ಮುಡುಪನ್ನು ತೀರಿಸಿದರು. ಆ ದಿವಸ ಭಕ್ತರು ಸಮರ್ಪಿಸಿದ ಹಣವು ಒಂದು 'ಲ' ಕಾರಕ್ಕೆ ಹತ್ತಿತು. ಕೂಡಲೆ ಪ್ರಭುವು ಅದನ್ನು ಕೂಡಿದ ಭಿಕ್ಷುಕ ಸಮುದಾಯದಲ್ಲಿ ಹಂಚಿಬಿಟ್ಟನು. ಈ ಅಪಾರ ಭಿಕ್ಷೆಯಿಂದ ಯಾಚಕ ವೃಂದವು ತೃಪ್ತವಾಯಿತು. ಬಳಿಕ ಬ್ರಾಹ್ಮಣ ಸಂತರ್ಪಣೆಗೆ ಆರಂಭವಾಯಿತು. ಪ್ರಭುವಿನ ಕೃಪೆಗೆ ಪಾತ್ರರಾಗಬೇಕೆಂಬ ಭಕ್ತರು ಒಳ್ಳೇ ಮನಸ್ಸುಗೊಟ್ಟು ಸುಗ್ರಾಸಪಾಕವನ್ನು ಸಿದ್ಧಪಡಿಸಿದರು. ಬ್ರಾಹ್ಮಣರಿಂದ ಅತಿ ಶೂದ್ರರವರೆಗೆ ಸಮಸ್ತರ ಭೋಜನವಾಯಿತು. ಈ ಉತ್ಸವವು ಆ ಗುಹೆಯ ನೆರೆಯಲ್ಲಿ ಹೀಗೆಯೇ ೧೫ ದಿವಸಗಳ ವರೆಗೆ ಸಾಗಿತು. ಕಲ್ಯಾಣದಿಂದ ಪ್ರಭುವಿನ ತಾಯಿಯೂ, ತಮ್ಮನೂ ಬಂದಿದ್ದರು. ಅವರು ಪ್ರಭುವನ್ನು ಊರಿಗೆ ಕರಕೊಂಡುಹೋಗಬೇಕೆಂದು ಬಹಳ ಪ್ರಯತ್ನ ಮಾಡಿದರು. ಆದರೆ ಪ್ರಭುವು ಅವರಿಗೆ—"ಈಗ ನಾನು ಕಲ್ಯಾಣಕ್ಕೆ ಬರುವದಿಲ್ಲ. ತಾತ್ಯಾನ ಹೊಟ್ಟೆಯಲ್ಲಿ ಸಂತತಿಯಾದ ಬಳಿಕ ಬರುತ್ತೇನೆ," ಎಂದು ಹೇಳಿದನು. ಪ್ರಭುವಿನ ಈ ಸ್ಪಷ್ಟ ಮಾತನ್ನು ಕೇಳಿ ಮಾತೋಶ್ರೀಯವರೂ ತಾತ್ಯಾ ಸಾಹೇಬನೂ ನಿರುಪಾಯರಾಗಿ ಹೊರಟುಹೋದರು.

ಅನಂತರ ಮಾಣಿಕಪ್ರಭುವು ಬ್ರಹ್ಮಚಾರಿ ಹಾಗು ವೆಂಕಮ್ಮ ಇವರೊಡನೆ

ಬೀದರಕ್ಕೆ ನಡೆದನು. ಆ ಬೀದರಗ್ರಾಮದ ಬಹಿರ್ಭಾಗದಲ್ಲಿ ದೇಶಮುಖರದೊಂದು ತೋಟವಿತ್ತು. ಅಲ್ಲಿ ಪ್ರಭುಗಳು ವಸತಿಯನ್ನು ಮಾಡಿದರು. ಕೆಲವು ದಿವಸಗಳ ಮೇಲೆ ಪ್ರಭುಗಳು ತಾವೊಬ್ಬರೇ ತಿರುಗಾಡಲಿಕ್ಕೆ ಹೋಗುತ್ತೇವೆಂದು ಹೇಳಿಹೋದವರು ನಾಲ್ಕೆಂಟು ದಿವಸಗಳ ವರೆಗೆ ತೋಟದ ಸನಿಯಕ್ಕೆ ಸಹ ಸುಳಿಯಲಿಲ್ಲ. ವೆಂಕಮ್ಮ ಹಾಗು ಬ್ರಹ್ಮಚಾರಿ ಇವರಿಬ್ಬರೇ ಆ ತೋಟದಲ್ಲಿ ಗುರುಚರಣವನ್ನು ಚಿಂತಿಸುತ್ತ ವಾಸಿಸಿದರು. ಬ್ರಹ್ಮಚಾರಿಯು ಊರಲ್ಲಿ ಮಧುಕರಿಯನ್ನು ಬೇಡಿತರುತ್ತಿದ್ದನು. ಬಳಿಕ ಗುರುಗಳಿಗರ್ಪಿಸಿ ಪ್ರಸಾದವನ್ನು ಇಬ್ಬರೂ ಸೇವಿಸುತ್ತಿದ್ದರು. ಹೀಗಿರಲು ಒಬ್ಬ ಯೋಗಿನಿಯೂ, ಒಬ್ಬ ಬ್ರಹ್ಮಚಾರಿಯೂ ತೋಟದಲ್ಲಿರುವರೆಂಬ ವರ್ತಮಾನವು ಊರಲ್ಲಿ ದಟ್ಟವಾಗಿ ಹಬ್ಬಿತು. ಅಲ್ಲಿಯ ದೇಶಮುಖನು ಯೋಗಿನಿಯನ್ನು ಪರೀಕ್ಷಿಸಬೇಕೆಂದು ತೋಟಕ್ಕೆ ಹೋಗಿ ಅವರನ್ನು ಕುರಿತು ಯೋಗಕ್ಷೇಮವನ್ನು ವಿಚಾರಿಸಿದನು. ನಮ್ಮ ಗುರುಮಹಾರಾಜರು ಬರುವ ವರೆಗೆ ಇಲ್ಲಿಇರುತ್ತೇವೆ. ನಂತರ ಹೊರಟುಹೋಗುತ್ತೇವೆ. ನಮಗೆ ಯಾರ ಮನೆಯ ಆಮಂತ್ರಣದ ಇಚ್ಛೆಯೂಇಲ್ಲ. ಮಧುಕರಿಯೇ ನಮಗೆರಾಜಭೋಜನವು; ಎಂದು ಬ್ರಹ್ಮಚಾರಿಯು ನುಡಿದನು. ಅದನ್ನು ಕೇಳಿ ದೇಶಮುಖನು ಕುಟಿಲ ಹೃದಯದಿಂದ—"ಬ್ರಹ್ಮಚಾರಿಗಳೇ, ನೀವು ಸಾಧುಗಳಿರುವಿರಿ! ನಿಮಗೆ ಲೌಕಿಕರ ಅವಶ್ಯಕತೆಯಿಲ್ಲ. ಇದು ನಿಜವಿರಬಹುದು; ಆದರೆ ಇಲ್ಲಿ ಕಳ್ಳರ ಭಯ ಬಹಳವಿರುವದು. ಆದ್ದರಿಂದ ನಮ್ಮ ವಾಡೆಗೆ ಬರಬೇಕೆಂದು ಹೇಳುತ್ತೇನೆ. ಎಂದು ನುಡಿದನು. ಆತನ ಕಪಟ ಹೃದಯವನ್ನು ತಿಳಿದು ಯೋಗಿನಿಯು ಜಾಬಿಹಾಕಿ—ದೇಶಮುಖರೇ, ನಮಗೆ ಗುರುಮಹಾರಾಜರ ಅಪ್ಪಣೆಯೇ ಪ್ರಮಾಣವು. ಅದೇ ತಾರಕವು. ಆದ್ದರಿಂದ ನಿಮ್ಮಲ್ಲಾರಿಗೂ ನಮ್ಮನ್ನು ಕರಕೊಯ್ಯುವದು ಶಕ್ಯವಿಲ್ಲ, ಎಂದಳು; ದೇಶಮುಖನು ಉಪಾಯವಿಲ್ಲದೆ ಮನೆಗೆ ಹೊರಟು ಹೋದನು. ಮುಂದೆ ಒಂದೆರಡು ದಿವಸ ಬಿಟ್ಟು ಆ ನೀಚನು ೮-೧೦ ಜನ ಟೊಣಪರನ್ನು ಹುರಿದುಂಬಿಸಿ ಅವರನ್ನು ಯೋಗಿನಿ ಹಾಗು ಬ್ರಹ್ಮಚಾರಿಗಳವರ ಸಮಾಚಾರಕ್ಕೆ ಕಳಿಸಿದನು.

ಜಾರ-ಚೋರ ಕರ್ಮಗಳನ್ನು ಆಚರಿಸುವವರು ಮೂಲತಃ ತಮೋಗುಣಿಗಳಿರುವದರಿಂದ ಅವರಿಗೆ ಉತ್ತೇಜನವು ಸಿಕ್ಕಬಳಿಕ ಅವರು ಏನೂ ನೋಡುವದಿಲ್ಲ. ಇದೇ ಸ್ಥಿತಿಯು ದೇಶಮುಖನು ನಿಯೋಜಿಸಿದ ಕಳ್ಳರಿಗೂ ಆಯಿತು. ಅವರು ಸರಿರಾತ್ರಿಯಲ್ಲಿ ತೋಟವನ್ನು ಹೊಕ್ಕು ಗಿಡದ ಬುಡದಲ್ಲಿ ಮಲಗಿರುವ ವೆಂಕಮ್ಮನಿಗೆ ನಾಲ್ಕು ಬಡಿಗೆಯ ಪೆಟ್ಟುಗಳನ್ನು ಹಾಕಿ—ದುಡ್ಡು ಕೊಡುತ್ತೀಯೋ ನಿನ್ನನ್ನು

ಬತ್ತಲೆ ಮಾಡಿ ಗಿಡಕ್ಕೆ ತೂಗಹಾಕಿ ಹೊಡೆಯೋಣವ್ವೋ? ಎಂದರು. ಗುರುಧ್ಯಾನದಲ್ಲಿಯೇ ಮಗ್ನಳಾಗಿದ್ದ ವೆಂಕಮ್ಮನು ಆವೇಳೆಗಾಗಿದ್ದರಿಂದ ಬಡಿಗೆಯ ಪೆಟ್ಟಿಗೆ ಎದ್ದು ಕುಳಿತು ಅಭದ್ರ ಮಾತಾಡುವ ಟೊಣಪರನ್ನು ಕಂಡು—ಅಪ್ಪಗಳಿರಾ, ಹೀಗೇಕೆ ಮಾತಾಡುವಿರಿ? ನಾವು ಭಿಕ್ಷುಕರಿದ್ದು ನಮ್ಮಲ್ಲಿ ದುಡ್ಡು ಎಲ್ಲಿಂದ ಬರಬೇಕು? ಹೀಗೆ ನಿರಪರಾಧಿಗಳನ್ನು ಪೀಡಿಸಬಹುದೇ? ಎಂದು ನುಡಿದಳು. ಆದರೆ ಆ ಕಟುಕರಿಗೆ ಆ ಸದ್ಭಕ್ತಳ ಆರ್ತಸ್ವರದಿಂದ ಕರುಣೆಯು ಹ್ಯಾಗೆ ಪುಟ್ಟಬೇಕು? ಅವರಲ್ಲಿ ಕೆಲವರು ಬ್ರಹ್ಮಚಾರಿಯ ಸಮಾಚಾರಕ್ಕಾಗಿ ಅವನೆಡೆಗೆ ಹೋದರು. ಉಳಿದವರು ವೆಂಕಮ್ಮನ ಬಳಿಯಲ್ಲಿ ನಿಂತುಕೊಂಡರು. ಇನ್ನು ಅವರು ಆಕೆಯ ಮೈಮೇಲಿನ ಬಟ್ಟೆಗಳನ್ನು ಹರಿದು ಚಲ್ಲಿ ಆಕೆಯನ್ನು ನಗ್ನಗೊಳಿಸಿ ಗಿಡಕ್ಕೆ ತೂಗಹಾಕತಕ್ಕವರು; ಅಷ್ಟರಲ್ಲಿ ಯಾವ ಕಡೆಯಿಂದಲೋ ಒಬ್ಬ ಕರೇ ಟೊಣಪನು ದೊಣ್ಣೆಯನ್ನು ಹೊತ್ತುಕೊಂಡು ಆ ಸ್ಥಳಕ್ಕೆ ಬಂದನು. ಅವನು ಪಿಟ್ಟೆಂದು ಮಿಸುಗದೆ ವೆಂಕಮ್ಮನ ಮೇಲೆ ಅತ್ಯಾಚಾರಕ್ಕೆ ಟೊಂಕಕಟ್ಟುತ್ತಿದ್ದವರನ್ನು ಮೈಮುರಿ ಥಳಿಸತೊಡಗಿದನು. ಆತನ ಬಲವಾದ ಪೆಟ್ಟುಗಳಿಂದ ಒಬ್ಬಿಬ್ಬರು ಹಾಯ್-ಹಾಯ್ ಎನ್ನುತ್ತ ನೆಲಕ್ಕುರುಳಿದರು. ಕೆಲವರು ಪೆಟ್ಟು ತಾಳಲಾರದೆ ಅಲ್ಲಿಂದಕಾಲ್ದೆಗೆದರು. ಬ್ರಹ್ಮಚಾರಿಯ ಕಡೆಗೆ ಹೋದವರು ಜೀವದಿಂದ ಹ್ಯಾಗೆ ಪಾರಾದೇವೆಂದು ತೋಟದ ಬೇಲಿಯನ್ನು ಜಿಗಿದು ಓಡಿಹೋದರು. ಕೆಲವರು ಓಡಿಹೋಗಿ ಇಬ್ಬರು ಮಾತ್ರ ಮೇಲಕ್ಕೇಳಲು ಶಕ್ತಿಯಿಲ್ಲದೆ ಬಿದ್ದಬಳಿಕ ಅವರ ಪಾರುಪತ್ಯಕ್ಕೆ ಬಂದಿದ್ದ ಆ ಕರೇ ಟೊಣಪನು ಅದೃಶ್ಯನಾದನು. ಯೋಗಿನಿಯು ಗುರುಚರಣಗಳಲ್ಲಿ ಚಿತ್ತವನ್ನಿರಿಸಿ ಸ್ವಸ್ಥವಾಗಿ ಕುಳಿತಳು. ಬ್ರಹ್ಮಚಾರಿಯು ಯಾವುದನ್ನೂ ತಿಳಿಯದೆ ಗೊಂದಲದಲ್ಲಿ ಬಿದ್ದುಕೊಂಡನು.

ಮರುದಿನ ಬೆಳಗಾಯಿತು. ದೇಶಮುಖರು ಯೋಗಿನಿಯ ಅವಸ್ಥೆಯು ಏನಾಗಿದೆಯೋ ನೋಡಬೇಕೆಂದು ಬಂದರು. ಯೋಗಿನಿಯು ಧ್ಯಾನಾಸಕ್ತಳಾಗಿದ್ದು ತಮ್ಮವರಲ್ಲಿ ಇಬ್ಬರು ನರಳುತ್ತ ಬಿದ್ದಿದ್ದರು. ದೇಶಮುಖರು ಅವರನ್ನು ಹೊರಿಸಿಕೊಂಡು ಮನೆಗೆ ಒಯ್ದರು. ಅವರ ಬಾಯಿಂದ ನಡೆದ ಪ್ರಕಾರವನ್ನು ಕೇಳಿ, ದೇಶಮುಖನು ಗಾಬರಿಯಾದನು. ಯೋಗಿನಿಯು ಮಹಾತ್ಮಳಿರುವಳೆಂದು ಭಾವಿಸಿದನು. ಆಕೆಯ ಬಗ್ಗೆ ತನ್ನಲ್ಲಿ ಉಂಟಾಗಿದ್ದ ವಿಕಲ್ಪ ಬುದ್ಧಿಯನ್ನು ಬಿಟ್ಟು, ಶರಣು ಬಂದನು. ಮುಂದೆ ಒಂದೆರಡು ದಿವಸಗಳಲ್ಲಿ ಪ್ರಭುವು ಅಲ್ಲಿಗೆ ಬಂದು ದೇಶಮುಖರ ಅಪರಾಧವನ್ನು ಕ್ಷಮಿಸಿದನು. ಮತ್ತು ಗುರುಭಕ್ತರಮೇಲೆ ಕೃಪಮಾಡಿ

ಯಾವನೂ ಜಯ ಸಂಪಾದಿಸಲಾರನೆಂದು ಸ್ಪಷ್ಟವಾಗಿ ಹೇಳಿದನು.

ಬಳಿಕ ಪ್ರಭುವು ಬೀದರವನ್ನು ತ್ಯಜಿಸಿ ಅಲ್ಲಿಂದ ೮-೧೦ ಹರದಾರಿಗಳ ಮೇಲೆ ಅರಣ್ಯ ಮಧ್ಯದಲ್ಲಿರುವ ಒಂದು ಶಿವಾಲಯಕ್ಕೆ ಶಿಷ್ಯರೊಡನೆ ತೆರಳಿದನು. ಆ ಶಿವಾಲಯದ ಸಮೀಪಕ್ಕೆ ಊರು-ಕೇರಿಗಳಿದ್ದಿಲ್ಲ. ಆದ್ದರಿಂದ ಭಿಕ್ಷೆಯು ಸಹ ಸಿಗುವದು ದುರ್ಲಭವಾಯಿತು. ಆಗ ಬ್ರಹ್ಮಚಾರಿಯು—ಗುರುಮಹಾರಾಜ, ಈ ನಿರ್ಜನ ಪ್ರದೇಶದಲ್ಲಿ ಕ್ಷುಧಾಶಾಂತಿಗೆ ಏನು ಮಾಡಬೇಕು? ಎಂದು ಕೇಳಿದನು. ಅದಕ್ಕೆ ಗುರುಗಳು—ತಮ್ಮಾ, ಗುರುಸೇವೆಯೆಂದರೆ ಸಾಮಾನ್ಯವಲ್ಲ. ಸೇವ್ಯನಲ್ಲಿದ್ದ ಎಲ್ಲ ಗುಣಗಳು ಸೇವಕನಲ್ಲಿ ಬಂದರೇ ಸೇವೆ ಮಾಡಿದ ಶ್ರೇಯಸ್ಸು ಬಂದಹಾಗಾಗುವದು. ಮುಖ್ಯವಾಗಿ ದೇಹಾಭಿಮಾನವು ಕತ್ತರಿಸಿದ ಹೊರತು ಇಂಥ ಹೆದರಿಕೆಗಳು ತಪ್ಪುವದಿಲ್ಲ. ನಾವು ಒಮ್ಮೆ ವನಚರರಾಗುವೆವು. ಒಮ್ಮೆ ಜನಪದದಲ್ಲಿ ಚರಿಸುವೆವು. ಯಾವ ಸ್ಥಿತಿಯಲ್ಲಿದ್ದರೂ ಸಂತುಷ್ಟತೆಯನ್ನು ಕಾಯ್ದುಕೊಳ್ಳುವದು ಬ್ರಹ್ಮತ್ವದ ಲಕ್ಷಣವು. ಇಂಥ ನಿರಭಿಮಾನ ಸ್ಥಿತಿಗೆ ಮುಟ್ಟಬೇಕೆಂದು ನಿನ್ನ ಇಚ್ಛೆಯಿದ್ದರೆ ಇಲ್ಲಿ ನಮ್ಮ ಬಳಿಯುಲ್ಲಿರು. ನಾಲಿಗೆಯ ರುಚಿಯನ್ನು ಬಯಸಿ ದೇಹಾಭಿಮಾನವನ್ನು ಹೆಚ್ಚಿಸಿಕೊಳ್ಳುವಂತಿದ್ದರೆ ನಮ್ಮ ಬಳಿಯಲ್ಲಿರಬೇಡ. ಎಂದು ನುಡಿದರು.

ಗುರುಗಳ ಈ ಮಾತು ಕೇಳಿ ಬ್ರಹ್ಮಚಾರಿಯು ಸುಮ್ಮನಾದನು. ಬಳಿಕ ಆತನು ಪ್ರಭುವಿನ ಅಪ್ಪಣೆಯಂತೆ ಜನಪ್ರದೇಶವನ್ನು ಹುಡುಕಿ ಭಿಕ್ಷೆಯನ್ನು ತರಲಿಕ್ಕೆ ಹೊರಟನು. ಆ ಕಟ್ಟಡವಿಯಲ್ಲಿ ಎಲ್ಲೆಲ್ಲಿಯೂ ಜನರ ಸುಳವು ಸಿಗಲಿಲ್ಲ. ಕಡೆಗೆ ಅವನು ೩ ಹರದಾರಿಗಳ ವರೆಗೆ ಹೋದನು. ಆಗ ಮಾತ್ರ ೩-೪ ಮನೆಗಳುಳ್ಳ ಒಂದು ಹಳ್ಳಿಯು ಕಂಡಿತು. ಬ್ರಹ್ಮಚಾರಿಯು ಲಗಬಗೆಯಿಂದ ಆ ಊರಲ್ಲಿ ಹೋಗಿ ಭಿಕ್ಷೆಯನ್ನು ಬೇಡಿದನು. ಅಲ್ಲಿ ಬ್ರಾಹ್ಮಣರ ಮನೆಗಳಿಲ್ಲದ್ದರಿಂದ ಧಾನ್ಯವನ್ನೇ ಭಿಕ್ಷೆ ಹಾಕಿಸಿಕೊಂಡು ಬರಬೇಕಾಯಿತು. ಹೊತ್ತು ಹೊರಳಿದ ಮೇಲೆ ಶಿವಾಲಯಕ್ಕೆ ಬಂದನು. ಬಳಿಕ ಆ ಧಾನ್ಯವನ್ನು ಒಂದು ಹಾಸುಗಲ್ಲಮೇಲೆ ಹಾಕಿ ಮೇಲೊಂದು ದುಂಡಿಯನ್ನು ಉರುಳಾಡಿಸಿದನು. ಆದರಿಂದ ಕಾಳು ಪುಡಿಪುಡಿಯಾದವು. ಬಳಿಕ ಆ ಹಿಟ್ಟನ್ನು ತಕ್ಕೊಂಡು ಅದರ ರೊಟ್ಟಿಗಳನ್ನು ಮಾಡಿ ಬೆಂಕಿಯಲ್ಲಿ ಬೇಯಿಸಿದನು. ಹೀಗೆ ಮೂರು ರೊಟ್ಟಿಗಳಾದ ಬಳಿಕ ಅವನ್ನು ಶ್ರೀದತ್ತಗುರುವಿಗೆ ಎಡೆ ತೋರಿಸಿ ಪ್ರಭುವಿನ ಎಲೆಯಲ್ಲಿ ಒಂದು ರೊಟ್ಟಿಯನ್ನು ಹಾಕಿದನು. ಆ ರೊಟ್ಟಿಯೇ ರೊಟ್ಟಿಯು. ಅದಕ್ಕೆ ಬೇರೆ ಸಾಧನವೇನೂ ಇರಲಿಲ್ಲ. ಆದ

ರೆ ಶ್ರೀಪ್ರಭುವು ಅದನ್ನು ಬಹು ಸವಿಮಾಡಿಕೊಂಡು ತಿಂದು ತೇಗಿದನು. ಬಳಿಕ ಶೇಷಪ್ರಸಾದವನ್ನು ಬ್ರಹ್ಮಚಾರಿಯೂ, ವೆಂಕಮ್ಮನೂ ಹಂಚಿಕೊಂಡು ತಿಂದರು. ಇದರಂತೆ ಆ ಅಡವಿಯಲ್ಲಿ ಪ್ರಭುವು ಒಂದು ತಿಂಗಳ ವರೆಗೆ ಕಾಲಕಳೆದನು. ಪ್ರತಿನಿತ್ಯ ಇದೇ ಆಹಾರವು; ಪ್ರಭುವಿನ ಬಳಿಯಲ್ಲಿ ಅಷ್ಟಸಿದ್ಧಿಗಳು ಕೈಕಟ್ಟಿಕೊಂಡು ನಿಂತಿರಲು, ಕಾಮಧೇನು, ಕಲ್ಪವೃಕ್ಷಗಳು ಆಧೀನವಾಗಿರಲು ಈ ಪರಿ ಕದನ್ನವನ್ನು ಪ್ರಭುಗಳು ಯಾಕೆ ತಿನ್ನುವರೋ ಎಂಬ ಸಂಶಯವು ಬ್ರಹ್ಮಚಾರಿಯಲ್ಲಿ ಹೋಗಲೇ ಇಲ್ಲ. ಆಗ ಆತನ ಅಂತರಂಗವನ್ನು ತಿಳಿದು ಪ್ರಭುವು ನುಡಿದನೇನಂದರೆ—ವತ್ಸಾ, ನಿನಗಿನ್ನೂ ದೇಹಾಭಿಮಾನ ತಪ್ಪಿಲ್ಲ. ಮಿಷ್ಟಾನ್ನ-ಕದನ್ನಗಳೆಂಬವು ಇಲ್ಲವೇ ಇಲ್ಲ. ನಾವು ಮಾತ್ರ ನಮ್ಮ ಭ್ರಾಂತಿಯಿಂದ ಹಾಗೆ ತಿಳಿಯುತ್ತೇವೆ. ಇದು ಪಾರಮಾರ್ಥಿಕರ ಮಾತು. ಇದೂ ಹೋಗಲಿ; ಸಾಂಸಾರಿಕರಾದರೂ ಮಧ್ಯಾಹ್ನಕ್ಕೆ ಸಿಕ್ಕಿದ್ದನ್ನು ಅಮೃತ ಸಮವಾಗಿ ಭಾವಿಸಿ ಊಟಮಾಡಬೇಕು. ಅದರಲ್ಲಿ ವಿಷಮತೆಯನ್ನು ತಿಳಿದುಕೊಳ್ಳಬಾರದು; ಅಂಬಲಿ-ಕಂಬಳಿಗಳೆರಡೇ ಮನುಷ್ಯನಿಗೆಯೋಗ್ಯವು. ಮಿಕ್ಕಾದವು ಹೆಚ್ಚಿನವು. ಮನುಷ್ಯನು ಮಾಯಾಧೀನನಾಗಿ ಹೆಚ್ಚಿನ ಆಶೆಗೆ ಬಿದ್ದರೆ, ಹೆಚ್ಚಿನದನ್ನು ಬಯಸಬೇಕಾಗುತ್ತದೆ. ಹೀಗೆ ಮಾಡದೆ ಯದೃಚ್ಛಾ ಲಾಭ ಸಂತುಷ್ಟತೆಯನ್ನು ಕಾಯ್ದುಕೊಳ್ಳುವವನು ಭಗವನ್ಮಾಯೆಯಿಂದ ಪಾರಾಗುವನು.

# ೯ ನೇ ಪ್ರಕರಣ.

## ಶಠಂ ಪ್ರತಿ ಶಾಠ್ಯಂ.

ಹಿಂದಿನ ಪ್ರಕರಣದಲ್ಲಿ ಹೇಳಿದಂತೆ ಮಾಣಿಕ ಪ್ರಭುವು ಕೆಲವು ದಿನಗಳನ್ನು ಆ ಅರಣ್ಯದೊಳಗಿನ ಮುರುಕ ಶಿವಾಲಯದಲ್ಲಿ ಕಳೆದ ಬಳಿಕ, ಒಂದು ದಿನ ಬ್ರಹ್ಮಚಾರಿಯನ್ನೂ, ವೆಂಕಮ್ಮನನ್ನೂ ಹತ್ತರ ಕರೆದು ನುಡಿದದ್ದೇನಂದರೆ—"ನಾನು ಕೆಲವು ದಿವಸಗಳ ವರೆಗೆ ಸಿದ್ಧಪುರುಷರ ದರ್ಶನಕ್ಕಾಗಿ ಅಲ್ಲಲ್ಲಿ ದರಿ-ಕಂದರಗಳಲ್ಲಿ ಸಂಚರಿಸುತ್ತೇನೆ. ಆದ್ದರಿಂದ ನೀವು ಕಲ್ಯಾಣಕ್ಕೆ ಹೋಗಿ, ನಾನು ಬರುವ ವರೆಗೆ ಸುಖದಿಂದ ಕಾಲಕ್ಷೇಪ ಮಾಡಬೇಕು." ಪ್ರಭುವಿನ ಈ ಮಾತಿನಿಂದ ಎಂಕಮ್ಮನಿಗೂ, ಬ್ರಹ್ಮಚಾರಿಗೂ ಅತ್ಯಂತ ವಿಷಾದವಾಯಿತು. ಆ ಕಾಲದಲ್ಲಿ ಅವರು ಬಿಟ್ಟೆಂದು ಮಾತಾಡಲಿಲ್ಲ. ಮುಂದೆ ಪ್ರಭುವು ಹೊರಡುವ ಸಮಯದಲ್ಲಿ ಆತನನ್ನು ಹಿಂಬಾಲಿಸಿದರು; ಆದರೆ ಪ್ರಭುವು ತ್ವರಿತ ಗತಿಯಿಂದ ಮುಂದೆ ಸಾಗಿದ ಬಳಿಕ ಇತ್ತ ಬ್ರಹ್ಮಚಾರಿ ಹಾಗು ಎಂಕಮ್ಮನನ್ನು ಒಂದು ಘಟಸರ್ಪವು ಅಡ್ಡಗಟ್ಟಿತು. ಬಳಿಕ ಅವರು ಅದನ್ನು ತಪ್ಪಿಸಿ ಬೇರೆ ಮಾರ್ಗವಾಗಿ ಹೋಗಲು, ಅಲ್ಲಿಯೊಂದು ವ್ಯಾಘ್ರವು ಅವರನ್ನು ಅಂಜಿಸಿತು. ವ್ಯಾಘ್ರವನ್ನು ಕಂಡು ಬ್ರಹ್ಮಚಾರಿಯ ಕೈಕಾಲುಗಳೇ ಹೋದವು. ಆಗ ಎಂಕಮ್ಮನು ಆತನಿಗೆ ಸಮಾಧಾನವನ್ನು ಹೇಳಿ ಅವನನ್ನು ಕಲ್ಯಾಣಕ್ಕೆ ಕಳುಹಿಸಿದಳು. ಬಳಿಕ ತಾನು ಹಸಿವೆ-ನೀರಡಿಕೆಗಳನ್ನು ತೊರೆದು ಆ ಗಿರಿಯ ಗಹ್ವರಗಳಲ್ಲಿ ಪ್ರಭುವನ್ನು ಹುಡುಕತೊಡಗಿದಳು. ಹೀಗೆ ಆಕೆಯು ಒಂದೇಸವನೆ ಮೂರು ದಿವಸ ಹುಡುಕಿದರೂ ಪ್ರಭುವು ಸಿಗಲಿಲ್ಲ. ಆಗ ಎಂಕಮ್ಮನು ಅವಸಾನಗೆಟ್ಟಳು. ಅವಳಲ್ಲಿ ಗುರುಗಳು ಸಿಗಲಿಲ್ಲೆಂಬ ಚಿಂತೆಯು ಹೆಚ್ಚಾಯಿತು. ಕಡೆಗೆ ಅವಳು ಮೂರ್ಛೆ ಬಂದು ಬಿದ್ದುಬಿಟ್ಟಳು. ಆಗ ಕರುಣಾಳುವಾದ ಪ್ರಭುವು ಪ್ರಕಟನಾಗಿ ಎಂಕಮ್ಮನಿಗೆ ಎಚ್ಚರಿಕೆಯನ್ನುಂಟು ಮಾಡಿ ನುಡಿದನೇನಂದರೆ—"ಎಂಕಮ್ಮಾ, ಹೀಗೆ ಹಟ ಹಿಡಿದರೆ ಏನು ಮಾಡಿದ ಹಾಗಾಯಿತು? ಕಲ್ಯಾಣಕ್ಕೆ ಹೋಗೆಂದು ಹೇಳಿಲ್ಲವೆ?"

ಪ್ರಭುವು ದರುಶನ ಕೊಟ್ಟದ್ದಕ್ಕೆ ಸಂತೋಷಪಟ್ಟು ಎಂಕಮ್ಮನು—ಪ್ರಭುವೇ, ನಾನು ನಿಮ್ಮ ಸಂಗಡವೂ ಬರುವದಿಲ್ಲ; ಕಲ್ಯಾಣಕ್ಕೂ ಹೋಗುವದಿಲ್ಲ, ನೀವು ಬರುವ ವರೆಗೆ ಇಲ್ಲಿಯೇ ಇರುತ್ತೇನೆ; ಎಂದು ನುಡಿದಳು. ಆಕೆಯ ನಿಷ್ಠ

ಯವನ್ನು ತಿಳಿದು ಪ್ರಭುವು ಆಕೆಗೆ ಅಲ್ಲಿಯೇ ಯೋಗ ಸಮಾಧಿಯನ್ನುಂಟುಮಾಡಿ, ಆಕೆಗೆ ಕ್ರೂರ ಪ್ರಾಣಿಗಳಿಂದ ಹಿಂಸೆಯುಂಟಾಗಬಾರದೆಂದು ಅವಳ ತಲೆಯಮೇಲೆ ಒಂದು ಎಲೆಯನ್ನಿಟ್ಟು, ಆಕೆಯ ಸುತ್ತುವರೆದು ಒಂದು ಮಂಡಲವನ್ನು ಕೊರೆದು ದಿಗ್ಬಂಧನವನ್ನು ಮಾಡಿದನು.

ಅನಂತರ ಪ್ರಭುವು ಗುಪ್ತನಾಗಿ ಎಲ್ಲಿಯೋ ಹೊರಟುಹೋದವನು, ಮುಂದೆ ಏಳು ತಿಂಗಳುಗಳ ಮೇಲೆ ಒಬ್ಬ ಮುಸಲ್ಮಾನ ಸಿದ್ಧಪುರುಷನೊಡನೆ ಅಲ್ಲಿಗೆ ಬಂದನು. ಎಂಕಮ್ಮನು ಸಮಾಧಿಯೋಗದಲ್ಲಿದ್ದಳು. ಮಂಡಲದ ಪ್ರಭಾವದಿಂದ ಆಕೆಯನ್ನು ಯಾವ ಹಿಂಸ್ರ ಪಶುಗಳೂ ಕಣ್ಣೆತ್ತಿ ನೋಡಿರಲಿಲ್ಲ. ಆಗ ಪ್ರಭುಗಳು ಅಂತಃಪ್ರೇರಕರಾಗಿ ಎಂಕಮ್ಮನ ಸಮಾಧಿಯನ್ನಿಳಿಸಿದರು. ಪ್ರಭುವನ್ನೂ, ಮುಸಲ್ಮಾನ ಸಿದ್ಧಪುರುಷನನ್ನೂ ಕಂಡು ಆಕೆಯು ಸಂತೋಷ ಹೊಂದಿದಳು. ಬಳಿಕ ಪ್ರಭುವು ಎಂಕಮ್ಮನನ್ನೂ, ಆ ಸಿದ್ಧಪುರುಷನನ್ನೂ ಕೂಡಿಕೊಂಡು ಬೀದರಕ್ಕೆ ಬಂದನು. ಆ ಗ್ರಾಮದ ಸೆರೆಯಲ್ಲಿ ಭವ್ಯವಾದದ್ದೊಂದು ಮಸೀದೆಯಿತ್ತು. ಅಲ್ಲಿಯೊಬ್ಬ ಸಜ್ಜನನಾದ ಮೌಲ್ವಿಯು ಇರುತ್ತಿದ್ದನು. ಅವನು ವಿದ್ಯಾವಂತನೂ, ಶ್ರೀಮಂತನೂ ಆಗಿದ್ದನು. ಆತನು ನಮ್ಮ ಈ ತ್ರಿವರ್ಗದವರನ್ನು ನೋಡಿದನು. ಆ ಮುಸಲ್ಮಾನ ಸಿದ್ಧಪುರುಷನು ಆ ಮೌಲ್ವಿಗೆ ಅತ್ಯಂತ ದೇದೀಪ್ಯಮಾನನಾಗಿ ತೋರಿದನು. ಅವನ ತೇಜಸ್ಸಿನಿಂದ ಮೌಲ್ವಿಯ ಮನಸ್ಸು ಹರಣವಾಗಲು, ಅವನು ಆ ಸಿದ್ಧಪುರುಷನೆಡೆಗೆ ಹೋದನು. ಮೌಲ್ವಿಯಲ್ಲಿ ಭಕ್ತಿಯುತ್ಪನ್ನವಾಗಿ ಅವನು ತನ್ನ ಬಳಿಗೆ ಬರಲು ಆ ಸಿದ್ಧಪುರುಷನು ಆತನಕಿವಿಯಲ್ಲಿ ಏನನ್ನೋ ಹೇಳಿ, ಅಲ್ಲಿಯೇ ಅದೃಶ್ಯನಾದನು. ಬಳಿಕ ಮೌಲ್ವಿಯು ಪ್ರಭುಚರಣಕ್ಕೆರಗಿ ಅವರನ್ನು ಒಳ್ಳೇ ವೈಭವದಿಂದ ಊರಲ್ಲಿ ತನ್ನ ಮನೆಗೆ ಕರೆದುಕೊಂಡು ಹೋಗಬೇಕೆಂಬ ತನ್ನ ವಿಚಾರವನ್ನು ಪ್ರಕಟಿಸಿದನು. ಅದನ್ನು ಕೇಳಿ ಪ್ರಭುವು—ನಾನು ನಿನ್ನ ಮನೆಗೆ ಬರುವದಿಲ್ಲ. ಊರಹೊರಗಿನ ದೇಶಮುಖರ ತೋಟದಲ್ಲಿ ಇಳಿಸುತ್ತಿದ್ದರೆ ನಿನ್ನ ಮನಸಿಗೆ ಬಂದ ಹಾಗೆ ಮೆರವಣಿಗೆಯನ್ನು ಹೊರಡಿಸು, ಎಂದು ನುಡಿದನು.

ಪ್ರಭುವಿನ ಸಮ್ಮತಿಯು ಸಿಕ್ಕಕೂಡಲೆ ಮೌಲ್ವಿಯು ಮೇಣೆಯನ್ನು ತರಿಸಿದನು. ವಾಲಗದವರನ್ನು ಕಲೆಹಾಕಿದನು. ತಾಸೆಯವರನ್ನು ಕರೆಯಿಸಿದನು. ಮಕರತೋರಣಗಳನ್ನು ಕಟ್ಟಿಸಿದನು. ಈ ಮೇರೆಗೆ ಉತ್ಸವದಿಂದ ಪ್ರಭುವನ್ನು ಕರೆದುಕೊಂಡು ದೇಶಮುಖರ ತೋಟದ ವರೆಗೆ ಹೋದನು. ಅಷ್ಟರಲ್ಲಿ ಕಲ್ಯಾಣದಿಂದ ಬಂದ ಪ್ರಭುವಿನ ಮನೆಯ ಜನರು ಆ ತೋಟದಲ್ಲಿ ಆದೇ ಬಂದಿಳಿದಿದ್ದರು. ಅವರು

ಪ್ರಭುವನ್ನು ಹುಡುಕುವದಕ್ಕಾಗಿ ಬಂದಿದ್ದು, ತಾವುಇಳಿದುಕೊಂಡ ಸ್ಥಳಕ್ಕೆ ಇನ್ನಾರು ಒರುವರೆಂದು ನೋಡುತ್ತಿರಲು, ಪ್ರತ್ಯಕ್ಷ ಪ್ರಭುವೇ ಮೋಣೆಯಲ್ಲಿ ಕುಳಿತದ್ದು ಕಂಡುಬಂದಿತು. ಆ ಕೂಡಲೆ ತಾತ್ಯಾಸಾಹೇಬ, ಬ್ರಹ್ಮಚಾರಿ ಮೊದಲಾದವರು ಓಡಿಹೋಗಿ ಪ್ರಭುವನ್ನಿದಿಗೋಂಡು ಆತನನ್ನು ಮೋಣೆಯಿಂದಿಳಿಸಿಕೊಂಡರು. ಪ್ರಭುವಿನ ಪರಿವಾರಕ್ಕೆಲ್ಲ ಆನಂದವಾಯಿತು.

ವ್ಯೌಲ್ವಿಯು ಪ್ರಭುಚರಣಗಳಲ್ಲಿ ಭಕ್ತಿ-ವಿಶ್ವಾಸಗಳನ್ನು ತಾಳಿದ್ದನ್ನು ನೋಡಿ ಆ ಊರಿನ ಮುಸಲ್ಮಾನರೆಲ್ಲರೂ ಪ್ರಭುವನ್ನು ಭಜಿಸತೊಡಗಿದರು. ಪ್ರಭುವಾದರೂ ಮುಸಲ್ಮಾನೀ ಭಕ್ತರನ್ನು ಪರಮ ಪ್ರೀತಿಯಿಂದ ಕಾಣುತ್ತಿದ್ದನು. ಹೀಗೆ ಮುಸಲ್ಮಾನ ಬಂಧುಗಳಲ್ಲಿ ಪ್ರಭುವಿನ ವಿಷಯವಾಗಿ ಭಕ್ತಿ-ವಿಶ್ವಾಸಗಳು ಹೆಚ್ಚುತ್ತಿರಲು, ಮುಸಲ್ಮಾನರಲ್ಲಿಯ ಕೆಲಜನ ಕುಹಕರು ದುರಾಲೋಚನೆಯನ್ನು ತಾಳಿ ಒಂದು ದಿನ ಬೇದರದ ನವಾಬನ ಕಡೆಗೆ ಹೋದರು. ನವಾಬನು ನೂತನ ಪ್ರಾಯದವನೂ, ದುರಭಿಮಾನ ಸ್ವಭಾವದವನೂ ಆಗಿದ್ದನು. ಆತನ ಮುಂದೆ ಈ ನಮ್ಮ ಕುಹಕರು ತಮ್ಮ ಪಂಚಾಂಗವನ್ನು ಬಿಚ್ಚಿದರು. ಅವರು ಅತ್ಯಂತ ಖಿನ್ನತೆಯನ್ನು ಆವಿರ್ಭಾವಿಸಿಕೊಂಡು ನವಾಬನ ಮುಂದೆ ಹೇಳಿದ್ದೇನಂದರೆ—"ಖಾವಿಂದ, ತಾವು ಹೀಗೆ ಯಾವ ಸುದ್ದಿಯನ್ನೂ ಪರಾಮರ್ಶಿಸದೆ ಸುಮ್ಮನೆ ಇದ್ದರೆ ಹ್ಯಾಗೆ? ಇನ್ನು ಸ್ವಲ್ಪ ದಿವಸಗಳಲ್ಲಿ ನಮ್ಮ ಮಹಮ್ಮದೀಯ ಧರ್ಮವು ನಾಮಶೇಷವಾಗುವದು. ಯಾಕಂದರೆ ಹಿಂದೂ ಸಾಧುವನ್ನು ಪೈಗಂಬರನೆಂದು ಭಾವಿಸಿ ನಮ್ಮ ಜನರೂ ಆತನಿಗೆ ನಡೆದುಕೊಳ್ಳಹತ್ತಿರುವರು. ಹೀಗೆ ಕಾಫರರನ್ನು ದೇವರೆಂದು ಪೂಜಿಸಬಹುದೆ? ಇದರಿಂದ ನಮ್ಮ ಧರ್ಮದ ಒಗರು ಏನು ಉಳಿಯಿತು? ಅನಾಯಾಸವಾಗಿ ದೊರೆತ ಈ ಸಂಧಿಯಲ್ಲಿ ಇಸ್ಲಾಮಿಯಾ ಧರ್ಮವನ್ನು ಮುಣಗಿಸುವ ಪ್ರಯತ್ನವನ್ನು ಹಿಂದುಗಳು ಮಾಡಿದರೆ ಆಶ್ಚರ್ಯವೇನು? ಇದನ್ನು ಖಾವಂದರು ಚನ್ನಾಗಿ ಪರಾಮರ್ಶಿಸಬೇಕು."

ಆಯಿತು; ಈ ಸಂಗತಿಯ ಶ್ರವಣದಿಂದ ನವಾಬನು ಹುಚ್ಚೆದ್ದು ಹರಿಯ ಹತ್ತಿದನು. ತಮ್ಮ ಮಂತ್ರವು ತತ್ಕಾಲಕ್ಕೇ ಸಿದ್ಧಿಯಾದ್ದರಿಂದ ಆ ಕುಹಕರಿಗಾದ ಆನಂದವನ್ನು ವರ್ಣಿಸಲಸದಳವು. ಅವರು ಒಂದು ಯುಕ್ತಿಯನ್ನು ಹುಡುಕಿ ನವಾಬನ ಕಿವಿಯಲ್ಲಿ ಅದನ್ನೂ ಊದಿದರು. ಕೂಡಲೆ ನವಾಬನು ತನ್ನ ಪರಿವಾರದೊಡನೆ ಪ್ರಭುವಿನ ಬಳಿಗೆ ಹೋದನು. ಮಹಾಸಾಧುವಾದ ಮಾಣಿಕಪ್ರಭುವು ಭಕ್ತರೆದುರಿಗೆ ಸುಖಗೋಷ್ಠಿಗಳನ್ನಾಡುತ್ತ ಕುಳಿತಿದ್ದನು. ನವಾಬನು ಬರಲು ಆತ

ನಿಗೆ ಅಭ್ಯುತ್ಥಾನ ಪೂರ್ವಕ ಸನ್ಮಾನ ಮಾಡಿ, ಆತನನ್ನು ಉಚಿತಾಸನದಲ್ಲಿ ಕುಳ್ಳಿರಿಸಿ, ತಾನೂ ಕುಳಿತುಕೊಂಡನು. ಬಳಿಕ ನವಾಬನು ಒಳ್ಳೇ ವಿನಯವನ್ನು ಪ್ರಕಟಿಸಿ—"ಪ್ರಭುಗಳು ನಾಳೆಗೆ ನಮ್ಮ ಅರಮನೆಗೆ ಭೋಜನಕ್ಕೆ ದಯಮಾಡಿಸಬೇಕು. ಯಾಕಂದರೆ ಮುಸಲ್ಮಾನ ಭಕ್ತರ ಮೇಲೆ ನಿಮ್ಮ ಪ್ರೇಮವು ವಿಶೇಷವಾಗಿರುವದು. ಈ ರೀತಿಯಾಗಿ ಪ್ರೇಮವಿದ್ದ ಬಳಿಕ ಆ ಭಕ್ತರ ಮನೆಯಲ್ಲಿ ಊಟ ಮಾಡದಿದ್ದರೆ, ಇದು ತಕ್ಕಪ್ರೇಮವೆಂದು ಕರೆಯಬಹುದಲ್ಲವೆ? ಈಗ ನಮ್ಮ ಔತಣವನ್ನು ಮಾನ್ಯ ಮಾಡಿ ಮುಸಲ್ಮಾನ ಭಕ್ತರಲ್ಲಿದ್ದ ವಾತ್ಸಲ್ಯವನ್ನು ಕಾಯ್ದುಕೊಳ್ಳುವಿರೋ, ಅಥವಾ ಧಿಃಕರಿಸಿ ನಿಮ್ಮ ಔಪಚಾರಿಕ ಮೋಸಗಾರಿಕೆಯ ಪ್ರೇಮವನ್ನು ಬೈಲಿಗಿಡುವಿರೋ? ಏನೆಂಬದನ್ನು ನಿರ್ಧರಿಸಿ ಹೇಳಿರಿ; ಅಂದರೆ ಮುಂದೆ ಮಾತಾಡುತ್ತೇನೆ." ಎಂದು ನುಡಿದನು.

ನವಾಬನ ಈ ಅತ್ಯಾಚಾರದ ಮಾತುಗಳನ್ನು ಕೇಳಿ, ಆತನ ಹೃದಯವನ್ನು ತಿಳಿದ ಪ್ರಭುಗಳು "ಶಠಂ ಪ್ರತಿ ಶಾಠ್ಯಂ" ಎಂಬ ಧರ್ಮವನ್ನು ತೋರಿಸಬೇಕೆಂದು ಬಗೆದು ಒಂದೇ ಮಾತಿನಲ್ಲಿ ಊಟಕ್ಕೆ ಬರುತ್ತೇವೆಂದು ಒಪ್ಪಿಕೊಂಡರು. ಅವರ ಈ ಉತ್ತರದಿಂದ ಸಮಸ್ತರೂ ಆಶ್ಚರ್ಯದಲ್ಲಿ ಬಿದ್ದರು. ನವಾಬನು ನಿರುತ್ತರನಾದನು. ಪ್ರಭುಗಳು ಬ್ರಾಹ್ಮಣರಿದ್ದು, ಅವರು ಮುಸಲ್ಮಾನರ ಆಮಂತ್ರಣವನ್ನು ಸ್ವೀಕರಿಸರೆಂಬದು ಸಹಜವು. ಆದ್ದರಿಂದ ಅವರನ್ನು ಛೀ; ಥೂ, ಮಾಡಿ ಅಪಮಾನಗೊಳಿಸಬೇಕೆಂದು ನವಾಬನ ಹಾಗು ಆತನ ಆ ಕುಹಕರ ಯೋಜನೆಯಾಗಿತ್ತು. ಈಗ ಪ್ರಭುಗಳು ಔತಣವನ್ನು ಹಿಡಿದದ್ದರಿಂದ ಮತ್ತೊಂದು ಬಗೆಯಿಂದ ಅವರು ಸಂತೋಷವನ್ನು ಹಚ್ಚಿಕೊಂಡು ಮನೆಗೆ ಹೋದರು. ಮರುದಿನ ನವಾಬನ ಮನೆಯಲ್ಲಿ ಮೇಜವಾನಿಯ ಸಿದ್ಧತೆಯು ಭರದಿಂದ ಸಾಗಿತು. ಪುಷ್ಟವಾದ ಆಕಳುಗಳು ಕರಕರನೆ ಕೊಯ್ಯಲ್ಪಟ್ಟವು; ಮದ್ಯದ ಪಾತ್ರೆಗಳು ತಾಕಲಾಡಿದವು; ಹಿಂದುಗಳಿಗೆ ವಿರೋಧವಾದ ಬೇರೆ ಅನೇಕ ಪದಾರ್ಥಗಳು ಸಿದ್ಧಮಾಡಲ್ಪಟ್ಟವು.

ಇತ್ತ ಪ್ರಭುಗಳು ಸ್ನಾನ-ಸಂಧ್ಯಾದಿಗಳನ್ನು ಮುಗಿಸಿಕೊಂಡು ಕುಳಿತಿರಲು, ನವಾಬನಿಂದ ಮೇಣೆಯು ಕಳುಹಿಸಲ್ಪಟ್ಟಿತು. ಪ್ರಭುಗಳು ಚಟ್ಟನೆದ್ದು, ಮೇಣೆಯಲ್ಲಿ ಕುಳಿತು, ಬ್ರಾಹ್ಮಣರಿಂದ ಅತಿ ಶೂದ್ರರ ವರೆಗಿನ ಎಲ್ಲ ಜನರನ್ನು ಸಂಗಡ ಕರಕೊಂಡರು. ಹೀಗೆ ಸಾವಿರಾರು ಜನರೊಂದಿಗೆ ಪ್ರಭುಗಳು, ನವಾಬನು ಸಿದ್ಧಪಡಿಸಿದ ವಿಶಾಲವಾದ ಮಂಟಪದಲ್ಲಿ ಹೊಕ್ಕರು. ಪ್ರಭುಗಳು ಮುಸಲ್ಮಾನರ ಆಮಂತ್ರಣವನ್ನು ಹಿಡಿದು ಬ್ರಾಹ್ಮಣ ಧರ್ಮವನ್ನು ಮುಣುಗಿಸು

ವರೆಂಬ ಭಯದಿಂದ ತ್ರಸ್ತರಾಗಿದ್ದ ಎಷ್ಟೋ ಜನ ಬ್ರಾಹ್ಮಣರು ಮಂಟಪದ ಹೊರಭಾಗದಲ್ಲಿಯೇ ನಿಂತುಕೊಂಡರು. ಆಗ ನಬಾಬನು ಎದ್ದು ಬಂದು ಪ್ರಭುಗಳ ಕೈ ಹಿಡಿದು ಅವರನ್ನು ಉಚಿತಾಸನದಲ್ಲಿ ಕುಳ್ಳಿರಿಸಿದನು. ಪ್ರಭುಗಳ ಶಿಷ್ಯಕೋಟಿಯಲ್ಲಿಯ ಕೆಲವು ಜನ ಪ್ರಮುಖ ಬ್ರಾಹ್ಮಣರು ಅವರ ಬಳಿಯಲ್ಲಿಯೇ ಕುಳಿತರು. ಮಂಟಪವು ಬಹು ಪ್ರೇಕ್ಷಣೀಯವಾಗಿದ್ದು, ಪ್ರತಿಷ್ಠಿತ ಮುಸಲ್ಮಾನರಿಂದ ತುಂಬಿಹೋಗಿತ್ತು. ದೊಡ್ಡ ದೊಡ್ಡ ಕಾಜಿಗಳು, ಮೌಲ್ವಿ ಮನೆತಸ್ಥರು, ಪೀರ-ಫಕೀರಾದಿಗಳು, ಅಮೀರ-ಉಮರಾವರು ಸಾಲ್ಗೊಂಡು ಮಂಡಿಸಿದ್ದರು. ಸುಂದರವಾದ ಹಾಗು ಬಹು ಬೆಲೆಯುಳ್ಳ ರತ್ನಗಂಬಳಿಗಳು, ಜಮಖಾನೆಗಳು ಹಾಸಲ್ಪಟ್ಟಿದ್ದವು. ಲೋಡು-ದಿಂಬು-ಗಿರ್ದೆಗಳಂತೂ ಅಸಂಖ್ಯವಾಗಿದ್ದವು. ಜರದ ಮೇಲ್ಕಟ್ಟುಗಳಿಂದ ಛತ್ತು ಹೊಡೆಯಲ್ಪಟ್ಟಿದ್ದು, ಕಾಜಿನ ಝುಮರಗಳು ತೂಗಹಾಕಲ್ಪಟ್ಟಿದ್ದವು; ಒಟ್ಟಿಗೆ ಮಂಟಪವು ನಬಾಬನ ವೈಭವವನ್ನು ಚನ್ನಾಗಿ ಬೈಲಿಗಿಡುತ್ತಿತ್ತು. ಇರಲಿ.

ಸಮಸ್ತರು ಸ್ಥಳವಿಡಿದು ವ್ಯವಸ್ಥೆಯಿಂದ ಕುಳಿತ ಬಳಿಕ ನಬಾಬನ ಪರಿಚಾರಕರು ಒಳಗಿನಿಂದ ಬೆಳ್ಳಿಯ ತಾಟುಗಳನ್ನು ತುಂಬಿ ಪ್ರಭುಗಳಾದಿಯಾಗಿ ಸಮಸ್ತರ ಮುಂದೆಯೂ ತಂದಿರಿಸಿದರು. ತಾಟುಗಳ ಮೇಲೆ ಶುಭ್ರ ವಸ್ತ್ರಗಳ ಆಚ್ಛಾದನವಿದ್ದದರಿಂದ ಅವುಗಳಲ್ಲಿಯ ಪದಾರ್ಥಗಳು ಜನರಿಗೆ ಸ್ಪಷ್ಟವಾಗಿ ಕಾಣುವಂತಿದ್ದಿಲ್ಲ. ಆದರೂ ಅವುಗಳ ವಾಸನೆಯ ಮೇಲಿಂದ ಹಾಗು ವಸ್ತ್ರಗಳ ಸೂಕ್ಷ್ಮ ಛಿದ್ರಗಳೊಳಗಿಂದ ಅವುಗಳಲ್ಲೇನಿರುವದೆಂಬದನ್ನು ನಮ್ಮ ಅಭ್ಯಾಗತ ಮಂಡಳಿಯು ಕಂಡು ಹಿಡಿಯದೆ ಇರಲಿಲ್ಲ. ಇನ್ನೊಂದು ಕ್ಷಣಹೊತ್ತಿನಲ್ಲಿ ಮಾಂಸ ಭಕ್ಷಣದಿಂದ ಇಲ್ಲಿ ಕುಳಿತ ನೂರಾರು ಜನ ಬ್ರಾಹ್ಮಣರು ಪ್ರಭು ವೊದಲ್ಗೊಂಡು ಮುಸಲ್ಮಾನರಾಗುವರೆಂಬ ಸಂತೋಷವು ನಬಾಬನ ಹಾಗು ಆತನ ಅನುಯಾಯಿಗಳ ಹೊಟ್ಟೆಯಲ್ಲಿ ಹಿಡಿಸಲಾರದೆ ಹೊರಸೂಸುತ್ತಿತ್ತು. ಇತ್ತ ಬ್ರಾಹ್ಮಣರು ಇದೇನು ಭಯಂಕರ ಪ್ರಸಂಗವೊದಗಿತೆಂದು ಚಿಂತೆಗೊಳಗಾಗಿದ್ದರು. ಹೀಗೆ ಮುಸಲ್ಮಾನರಲ್ಲಿ ಸಂತೋಷವೂ-ಬ್ರಾಹ್ಮಣರಲ್ಲಿ ಚಿಂತೆಯೂ ಉಂಟಾಗಿರಲು, ಇಸ್ಲಾಮಿಯಾ ಧರ್ಮದಂತೆ ಬಿಸಮಿಲ್ಲಾ ಆಗಿ, ಊಟಕ್ಕೆ ಪ್ರಾರಂಭವಾಯಿತು. ಆಗ ಸಮಸ್ತ ಮುಸಲ್ಮಾನರೂ ಮುಂಡಾಸವನ್ನು ಅಂಗಾತವಾಗಿಟ್ಟು, ತೋಳುಗಳನ್ನು ಮೇಲಕ್ಕೇರಿಸಿ, ತಾಟುಗಳಿಗೆ ಕೈ ನೀಡಿದರು. ಕೂಡಲೆ ಅವರು ಆಚ್ಛಾದಿತ ವಸ್ತ್ರಗಳನ್ನು ತೆರೆಯಲು, ಒಂದು

ಚಮತ್ಕಾರವು ವರ್ತಿಸಿತು. ಸಮಸ್ತರ ತಾಟುಗಳಲ್ಲಿ ಬಡಿಸಿದ ಗೋಮಾಂಸಾದಿ ಪದಾರ್ಥಗಳು ಕೆಂಪು ದಾಸಾಳದ ಹೂಗಳಾಗಿದ್ದವು. ಅದನ್ನು ನೋಡಿ, ನಬಾಬನ ಎದೆಯು ಧಸ್ಸೆಂದಿತು. ಆತನು ಬೆದರಿದನು. ಆತನಿಗೆ ಪರಮಾವಧಿಯಾಗಿ ಪಶ್ಚಾತ್ತಾಪವುಂಟಾಯಿತು. ನಾನು ಕುಹಕರ ಮಾತಿಗೆ ಮರುಳಾಗಿ ಹಿಂದೂ ಖುದಾನನ್ನು ಪರೀಕ್ಷಿಸಿದೆನೆಂದು ಚಟಪಡಿಸಿದನು. ಬಳಿಕ ಅವನು ಹತಬುದ್ಧನಾಗಿ ಪ್ರಭು ಚರಣಕ್ಕೆರಗಿ, ಅಪರಾಧವನ್ನು ಕ್ಷಮಿಸಬೇಕೆಂದು ಬಹು ಪರಿಯಾಗಿ ಪ್ರಾರ್ಥಿಸಿದನು. ಕ್ಷಮಾಶೀಲರಾದ ಮಾಣಿಕಪ್ರಭುಗಳು ಉಚಿತ ಮಾತುಗಳಿಂದ ನಬಾಬನನ್ನು ಸಮಾಧಾನಗೊಳಿಸಿದರು. ಸಮಸ್ತ ಹಿಂದುಗಳೂ ಸಂಭ್ರಮದಿಂದ ಪ್ರಭುವಿನ ಜಯ ಜಯಕಾರವನ್ನು ಮಾಡಿದರು. ಬಳಿಕ ಪ್ರಭುಗಳು ನಬಾಬನನ್ನು ಕುರಿತು—"ನಿನ್ನ ಆಮಂತ್ರಣವನ್ನು ಮಾನ್ಯ ಮಾಡಿ ನಿನ್ನ ಮನೆಗೆ ಊಟಕ್ಕೆ ಬಂದೆವು. ಅಂದಬಳಿಕ ನೀನು ನಿನ್ನ ಈ ಸಮಸ್ತ ಪರಿವಾರದೊಡನೆ ನಾಳೆಗೆ ನಮ್ಮಲ್ಲಿ ಊಟಕ್ಕೆ ಬರಬೇಕಾಯಿತಷ್ಟೇ; ಇದಕ್ಕೆ ಏನೆನ್ನುವಿ?" ಎಂದು ಕೇಳಿದರು. ಪ್ರಭುವಿನ ಕ್ಷಮೆಗೆ ಪಾತ್ರನಾದ ನಬಾಬನು ಒಲ್ಲೆನೆನ್ನಲಿಕ್ಕೆ ಅಸಮರ್ಥನಾಗಿ ಬರುತ್ತೇನೆಂದು ನುಡಿದನು. ಆಗ ಪ್ರಭುಗಳು ನಿರೂಪ ತಕ್ಕೊಂಡು ತಮ್ಮ ಪರಿವಾರದೊಡನೆ ಮನೆಗೆ ಬಂದರು. ಆ ದಿವಸ ಸಮಸ್ತರೂ ಪ್ರಭುವಿನ ಸಾಮರ್ಥ್ಯವನ್ನೇ ಚಿಂತನೆ ಮಾಡಿದರು.

ಮರುದಿನ ನಬಾಬನು ಪ್ರಭುವಿನ ಸೂಚನೆಯಂತೆ ಪರಿವಾರದೊಡನೆ ಬಂದನು. ಪ್ರಭುವಿನ ಮಂಟಪವು ನಬಾಬನ ಮಂಟಪದಂತೆ ರಾಜಶೀವಿಯುದಾಗಿರದೆ ಪರ್ಣಗಳಿಂದ ನಿರ್ಮಿಸಲ್ಪಟ್ಟಿತ್ತು. ಅದರಲ್ಲಿ ಪ್ರಶಾಂತವಾದ ಸಾಧು ತೇಜವು ಸಜ್ಜನರಿಗೆ ಆನಂದವನ್ನುಂಟು ಮಾಡುತ್ತಿತ್ತು. ಪ್ರತಿಷ್ಠಿತ ಮುಸಲ್ಮಾನರೆಲ್ಲರು ತಮ್ಮ ತಮ್ಮ ತಾರತಮ್ಯಾನುಸಾರವಾಗಿ ಸ್ಥಳ ಹಿಡಿದು ಕೂಡ್ರಲು, ಪ್ರಭುವು ತೋಟದ ಹೊರಗಿರುವ ಅಡವಿಯ ಕಡೆಗೆ ಮೋರೆ ಮಾಡಿದನು. ಆತನು ಮೋರೆ ತಿರುವಿದ್ದೊಂದೇ ತಡ; ಬಡ ಬಡ ಹತ್ತಿಪ್ಪತ್ತು ಜನ ಮುಸಲ್ಮಾನ ಟೊಣಪರು, ಪ್ರತಿಯೊಬ್ಬರು ಆರೇಳರಂತೆ ದೊಡ್ಡ ದೊಡ್ಡ ಹಂದಿಗಳನ್ನು ಹೊತ್ತುಕೊಂಡು ಮಂಟಪವನ್ನು ಹೊಕ್ಕರು; ಮತ್ತು ಆ ಎಲ್ಲ ಜನರ ಸಮಕ್ಷಮವಾಗಿ ಆ ಹಂದಿಗಳನ್ನು ಕೊಯ್ದು ಅವುಗಳ ಮಾಂಸವನ್ನು ಒಲೆಯ ಮೇಲಿಟ್ಟ ದೊಡ್ಡ ದೊಡ್ಡ ಮಡಿಕೆಗಳಲ್ಲಿ ತುಂಬಿದರು. ಮಡಿಕೆಗಳ ಬುಡದಲ್ಲಿ ಉರಿಯು ಚನ್ನಾಗಿ ಇದ್ದದರಿಂದ ಕ್ಷಣದಲ್ಲಿ ಮಾಂಸವು ಬೆಂದು ಸಿದ್ಧವಾಯಿತು.

ಈ ದಿನ ನಮ್ಮ ಮೇಜವಾನಿಗೆ ಹಂದಿಯ ಮಾಂಸವು ಸಿದ್ಧವಾಗುವದೆಂದು ಮುಸಲ್ಮಾನರು ಖಿನ್ನರಾದರು. ಅವರು ಸ್ಥಳ ಬಿಟ್ಟು ಓಡಿ ಹೋಗಬೇಕೆಂದು ಪ್ರಯತ್ನಿಸಿದರು. ಆದರೆ ಪ್ರಭು ಪ್ರೇರಣೆಯಿಂದ ಮಂಟಪದ ಸುತ್ತುವರೆದು ಯಮದೂತರನ್ನು ಹೋಲುವ ಕರೀಬಣ್ಣದ ಟೊಣಪರು ಕೈಯಲ್ಲಿ ದೊಣ್ಣೆಯನ್ನು ಹಿಡಿದು ಪಹರೆ ಮಾಡುತ್ತಿದ್ದದರಿಂದ ಅವರು ಉಪಾಯಗಾಣದೆ ಸುಮ್ಮನೆ ಕೂಡ್ರಬೇಕಾಯಿತು;

ಪಾಕವು ಸಿದ್ಧವಾದ ಬಳಿಕ ಪ್ರಭುಗಳು ದೊಡ್ಡ ದೊಡ್ಡ ಹರಿವಾಣಗಳನ್ನು ತರಿಸಿ, ಅವುಗಳಲ್ಲಿ ಆ ಮಾಂಸವನ್ನು ನೀಡಿಸಿ, ಪ್ರತಿಯೊಬ್ಬ ಮುಸಲ್ಮಾನನ ಮುಂದೆ ಇಡಿಸಿದರು. ಸ್ವಧರ್ಮಕ್ಕೆ ತೀರಾ ವಿರೋಧವಾದ ಈ ಘೋರ ಕೃತಿಯನ್ನು ನೋಡಿ ಮುಸಲ್ಮಾನರು "ಯಾ ಅಲ್ಲಾ, ಯಾ ಅಲ್ಲಾ" ಎಂದು ನಿಟ್ಟುಸಿರು ಬಿಡತೊಡಗಿದರು. ನಬಾಬಾದಿಯಾಗಿ ಸಮಸ್ತರೂ ಚಿಂತಿಸತೊಡಗಿದರು. ಅವರಲ್ಲಿ ಸಜ್ಜನರಾದ ಕೆಲವು ಜನ ಮುಸಲ್ಮಾನರು-ಪ್ರಭುಗಳು ಒಳ್ಳೇ ಯುಕ್ತಿಯನ್ನು ತೆಗೆದರು. ಮುಯ್ಯಕ್ಕೆ ಮುಯ್ಯ ತೀರಿಸಿದರು.- ನಮ್ಮವರ ದುರ್ಬುದ್ಧಿಯೇ ಇದಕ್ಕೆ ಕಾರಣವಾಯಿತು, ಎಂದು ಮಾತನಾಡಿಕೊಂಡರು. ಹರಿವಾಣದಲ್ಲಿ ಬಡಿಸಿದ್ದ ಹಂದಿಯ ಮಾಂಸವನ್ನು ಕಣ್ಣಾರೆ ನೋಡಲಾರದೆ ಮುಸಲ್ಮಾನರು ಚಟಪಡಿಸಿ ಬಹು ದೊಡ್ಡ ಗಲಭೆಯನ್ನುಂಟು ಮಾಡಿದರು. ಕಾವಲುಗಾರರ ಕೈಯೊಳಗಿಂದ ಪಾರಾಗುವದೂ ಅವರಿಗೆ ಕಠಿಣವೆನಿಸಿತು; ಅಲ್ಲಿ ಕೂಡ್ರುವದೂ ಅಸಾಧ್ಯವಾಯಿತು. ಹೀಗಾಗಿ ಅವರೆಲ್ಲರೂ ಗೋಳಿಡುತ್ತಿರಲು, ಪ್ರಭುಗಳ ಭಕ್ತನಾದ ಮೌಲ್ವಿಯು ಎಲ್ಲರನ್ನು ಸುಮ್ಮನಿರಿಸಿ ನುಡಿದನೇನಂದರೆ—"ನಬಾಬ ಸಾಹೇಬರೇ, ನೀವು ಮಾತ್ರ ನಿಶ್ಶಂಕೆಯಿಂದ ಪ್ರಭುಗಳ ಮುಂದೆ ಗೋಮಾಂಸವನ್ನಿಕ್ಕಿ ಪರೀಕ್ಷಿಸಿದಿರಿ. ಅವರು ಖುದಾನ ಅವತಾರಿಕರಾದ್ದರಿಂದ ಗೋಮಾಂಸವನ್ನು ಪುಷ್ಪವನ್ನಾಗ ಮಾಡಿ ನಿಮ್ಮನ್ನು ಮೆತ್ತಗೆ ಮಾಡಿದರು. ಈಗ ಅವರು ನಿಮ್ಮ ಮುಂದೆ ಹಂದಿಯ ಮಾಂಸವನ್ನಿಟ್ಟಿರುವರು. ನಿಮ್ಮಲ್ಲಿ ಯಾರಾದರೂ ಪೌರುಷವಂತರಿದ್ದರೆ, ಈ ಮಾಂಸವನ್ನು ಪುಷ್ಪವನ್ನಾಗ ಮಾಡಿರಿ. ವ್ಯರ್ಥವಾದ ಈ ಗಲಭೆಯಿಂದ ಪ್ರಯೋಜನವೇನು? ನೀವು ಮಾಡಿದ್ದೇ ನಿಮಗೆ ತಿರುಗಿರುತ್ತದೆ. ಪ್ರಭುಗಳು ನಿಮಗೆ ತಕ್ಕ ಬಂದೋಬಸ್ತನ್ನು ಮಾಡಿರುತ್ತಾರೆ. ಆದರೂ ಚಿಂತೆಯಿಲ್ಲ; ಅವರು ದಯಾಘನರಿದ್ದದರಿಂದ ಅವರಿಗೆ ಶರಣು ಹೋಗಿರಿ; ಇಲ್ಲದಿದ್ದರೆ ನಿಮ್ಮ ಗೌರವವು ಸ್ವಲ್ಪಾದರೂ ಉಳಿಯಲಿಕ್ಕಿಲ್ಲ."

ಈ ಮೇರೆಗೆ ಮೌಲ್ವಿಯು ಮಾತಾಡಿದ್ದನ್ನು ಕೇಳಿ ನಿಂದಕರಾದ ಎಲ್ಲ ಮುಸಲ್ಮಾನರೂ ಒಮ್ಮನಸ್ಸಿನಿಂದ ಪ್ರಭುಗಳಿಗೆ ಶರಣು ಹೋದರು. ತಮ್ಮ ಪ್ರತಿ ಕ್ರಿಯೆಯಿಂದ ನಿಂದಕರು ಹಣ್ಣಿಗೆ ಬಂದದ್ದನ್ನು ನೋಡಿ, ಪ್ರಭುಗಳು ಸಂತೋಷಪಟ್ಟು ಅವರಿಗೆ ಅಭಯವನ್ನಿತ್ತರು; ಮತ್ತು ಕೈಯಲ್ಲಿ ಒಂದು ಡೊಣ್ಣೆ ಯನ್ನು ತಕ್ಕೊಂಡು ಎಲೆಯ ಮೇಲಿರುವ ಮಡಿಕೆಗಳನ್ನೆಲ್ಲ ಒಡೆದರು; ಆಗ ಆ ಮಡಿಕೆಗಳಿಂದ ನೂರಾರು ಹಂದಿಗಳು ಹೊರ ಹೊರಟು ಆ ಮುಸಲ್ಮಾನರ ಮುಂದೆ ಹಾಯ್ದು ಅರಣ್ಯವನ್ನು ಸೇರಿದವು. ಬಳಿಕ ಪ್ರಭುಗಳು ಎಲ್ಲ ಮುಸ ಲ್ಮಾನರನ್ನು ಬೇರೊಂದು ಮಂಟಪಕ್ಕೆ ಕರೆದೊಯ್ದು, ಮೊದಲೇ ತಯಾರಿಸಿಟ್ಟಿದ್ದ ಪರಿಶುದ್ಧವಾದ ಷಡ್ರಸಾನ್ನವನ್ನು ಅವರಿಗೆ ಒಪ್ಪಿಸಿದರು. ಆ ಮಧುರ ಆಹಾರ ವನ್ನು ಸವಿದು ಮುಸಲ್ಮಾನರೆಲ್ಲರೂ ಸಂತೃಪ್ತಿಯನ್ನು ಹೊಂದಿದರು.

ಅನಂತರ ಪ್ರಭುಗಳು ನಬಾಬನಿಗೂ ಪ್ರತಿಷ್ಠಿತ ಜನರಿಗೂ ಬೆಲೆಯುಳ್ಳ ವಸ್ತ್ರಗಳನ್ನು ಉಡುಗರೆಯಾಗಿ ಕೊಟ್ಟು ಸದ್ಬೋಧವನ್ನು ಮಾಡಿದರು. "ಲೋಕ ವೆಲ್ಲ ಒಬ್ಬನೇ ಪರಮಾತ್ಮನಿಂದ ಸೃಷ್ಟಿಸಲ್ಪಟ್ಟಿರುವದರಿಂದ ಯಾರೂ ಅನ್ಯರ ವಿಷಯಕ್ಕೆ ದ್ವೇಷಬುದ್ಧಿಯನ್ನು ತಾಳಬಾರದು. ಒಂದೊಂದು ಪಂಥದವರಿಗೆ ಬೇರೆ ಬೇರೆ ಪದಾರ್ಥಗಳು ನಿಷಿದ್ಧವಿರುತ್ತವೆ. ಆ ನಿಷಿದ್ಧ ಪದಾರ್ಥಗಳ ಯೋಗ ದಿಂದ ಅವರನ್ನು ಛಲಿಸುವ ಭರಕ್ಕೆ ಬೀಳಬಾರದು. ಹಿಂದುಗಳಿಗೆ ಗೋಮಾಂ ಸಾವಲೋಕನದಿಂದ ಎಷ್ಟು ವ್ಯಥೆಯಾಗುವದೆಂಬದರ ಅನುಭವವು ನಿಮಗೆ ಬರಲೆಂದೇ ನಿಮ್ಮ ಮುಂದೆ ಹಂದಿಯ ಮಾಂಸವನ್ನು ತರಬೇಕಾಯಿತು. ಇದರ ಮರ್ಮವನ್ನರಿತು ಇನ್ನು ಮುಂದೆ ನೀವು ಹಿಂದುಗಳು ಕ್ಷೋಭಿಸುವಂಥ ಕೆಲಸ ಮಾಡಬಾರದು. ನೀವು ಪರ ದುಃಖಶೀತಲರಾದ್ದರಿಂದಲೇ ನಿಮ್ಮೊಡನೆ "ಶಠಂ ಪ್ರತಿ ಶಾಠ್ಯಂ" ಎಂಬ ತತ್ವವನ್ನು ಆಚರಿಸಿ ತೋರಿಸಬೇಕಾಯಿತು"

ಪ್ರಭುಗಳ ಈ ಸದುಪದೇಶದಿಂದ ಮುಸಲ್ಮಾನರೆಲ್ಲರು ಅವರಲ್ಲಿ ಸ್ಥಿರ ವಾದ ಭಕ್ತಿಯನ್ನಿಟ್ಟು ಅವರ ಉಪದೇಶದಂತೆ ನಡೆಯುವ ಸಂಕಲ್ಪ ಮಾಡಿ, ತಮ್ಮ ತಮ್ಮ ಮನೆಗಳಿಗೆ ಹೊರಟುಹೋದರು. ಪ್ರಭುಗಳ ನಿಂದಾಪ್ರವರ್ತಕ ರಾದ ಆ ಕುಹಕರಂತೂ ಮುಂದೆ ಎಂದೂ ತಲೆಯೆತ್ತಲಿಲ್ಲ.

# ೧೧ನೆಯ ಪ್ರಕರಣ.

## ಪಿಶಾಚಕ್ಕೆ ವಿಮೋಚನ.

ಬೇದರಗ್ರಾಮದಲ್ಲಿ ಈ ರೀತಿಯಾಗಿ ಅದ್ಭುತಸಾಮರ್ಥ್ಯವನ್ನು ಪ್ರಕಟಿಸಿದ ಬಳಿಕ ಪ್ರಭುಗಳು ತಮ್ಮ ತಾಯಿಯನ್ನೂ ತಾತ್ಯಾಸಾಹೇಬನನ್ನೂ ಸಮಾಧಾನಗೊಳಿಸಿ ಅವರನ್ನು ಕಲ್ಯಾಣಕ್ಕೆ ತಿರುಗಿ ಕಳುಹಿಸಿಕೊಟ್ಟರು. ಬಳಿಕ ಅವರು ತಮ್ಮ ಶಿಷ್ಯರನ್ನು ಕೂಡಿಕೊಂಡು ರಾಜೂರಿ ಎಂಬ ಗ್ರಾಮದಲ್ಲಿ ಸದ್ಭಕ್ತರಿಂದ ಆತಿಥ್ಯವನ್ನು ಹೊಂದಿ ಮುಂದೆ ಸಾಗಿದರು. ಹೀಗೆ ಅವರು ಪ್ರಯಾಣಮಾಡುತ್ತ 'ಪಹಾಡಗಾವ'ವೆಂಬ ಹಳ್ಳಿಗೆ ಬಂದರು. ಅಲ್ಲಿಗೆ ಬರುವಷ್ಟರಲ್ಲಿ ಮಧ್ಯಾಹ್ನವಾದ್ದರಿಂದ ಪ್ರಭುಗಳು ಊರಹೊರಗಿನದೊಂದು ಮಾರುತಿಯ ದೇವಾಲಯದಲ್ಲಿ ಇಳಿದುಕೊಂಡರು. ಚಿಮಣ್ಯಾಬ್ರಹ್ಮಚಾರಿಯು ಪ್ರಭುಗಳ ಸ್ನಾನಕ್ಕೆ ನೀರು ಕಾಸಿಟ್ಟು ಅಡಿಗೆಯ ಉದ್ಯೋಗದಲ್ಲಿ ತೊಡಗಿದನು. ವೆಂಕಮ್ಮನು ದೇವಾಲಯದಲ್ಲಿ ಬಿದ್ದ ಕಸವನ್ನು ಗೂಡಿಸಲು, ಪ್ರಭುಗಳು ಸ್ನಾನಕ್ಕಾಗಿ ಬಚ್ಚಲದಲ್ಲಿ ಇಳಿದರು. ಅವರು ಉಟ್ಟ ಪಂಜೆಯನ್ನು ತೋಯಿಸಿಕೊಳ್ಳುತ್ತಿರಲು, ಆ ಗುಡಿಯ ಮುಂದಿನ ದಾರಿಯಲ್ಲಿ ನಾಲ್ವರು ಬ್ರಾಹ್ಮಣರು ಒಂದು ಶವವನ್ನು ಹೊತ್ತುಕೊಂಡು ಬಂದರು. ಅವರ ಹಿಂದಿನಿಂದ ಎಷ್ಟೋ ಜನರು ದುಃಖದಿಂದ ಕಣ್ಣೀರುದುರಿಸುತ್ತ ನಡೆದಿದ್ದರು. ಆಗ ಪ್ರಭುಗಳು ಸ್ನಾನಮಾಡುವದನ್ನು ಅಷ್ಟಕ್ಕೇ ನಿಲ್ಲಿಸಿ ಹೊರಗೆ ಬಂದು ಆ ಜನರನ್ನು ಕೂಗಿದರು; ಮತ್ತು ಅವರನ್ನು ಕುರಿತು ನುಡಿದರೇನಂದರೆ—"ಅಪ್ಪಗಳಿರಾ, ಇದೇನು ಭಯಂಕರ ಕೆಲಸವನ್ನು ಮಾಡಹತ್ತಿರುವಿರಲ್ಲ! ಜೀವಂತಪ್ರಾಣಿಯನ್ನೇ ಒಯ್ದು ಸುಡುವದು ನಿಮ್ಮೂರ ಪದ್ಧತಿಯೇನು? ಛೀ; ನಿಮಗೆ ಮರುಳುಗಿರಳು ಹಿಡಿದಿರಲಿಕ್ಕಿಲ್ಲವಷ್ಟೇ;..........."

ಪ್ರಭುಗಳ ಈ ಮಾತನ್ನು ಕೇಳಿ ಆ ಜನರು ಬೆಪ್ಪಾಗಿ ನಿಂತರು. ಅಷ್ಟರಲ್ಲಿ ಶವವು ಧಡಪಡಿಸಹತ್ತಿದ್ದರಿಂದ ಅದನ್ನು ಕೆಳಗಿಳಿಸಿ ನೋಡಲು, ನಿಜವಾಗಿಯೇ ಆ ಶವಕ್ಕೆ ಜೀವತಿರುಗಿತ್ತು. ಆಗ ಆ ಜನರು ಕಟ್ಟುಗಳನ್ನೆಲ್ಲ ಹರಿಯಲು ಆ ಮೃತ ಸ್ತ್ರೀಯು ಎದ್ದು ಕುಳಿತಳು. ಕೂಡಿದವರಿಗೆಲ್ಲ ಆಶ್ಚರ್ಯವಾಯಿತು.

ಈ ಸುದ್ದಿಯು ಹಾ ಹಾ ಅನ್ನುವಷ್ಟರಲ್ಲಿ ಊರತುಂಬ ಹಬ್ಬಲು, ಸಾವಿರಾರು ಜನರು ಅಲ್ಲಿ ನೆರೆದರು. ಆ ಸ್ತ್ರೀಯ ಮಕ್ಕಳು, ಗಂಡ, ಬೇರೆ ಆಪ್ತೇಷ್ಟರು

ಕೂಡಿದರು. ಸರ್ವರೂ ಪ್ರಭುಗಳನ್ನು ಅಭಿವಂದಿಸತೊಡಗಿದರು. ಅವರಲ್ಲಿ ಯಾರಿಗೂ ಪ್ರಭುಗಳ ಪರಿಚಯವಿದ್ದಿಲ್ಲ. ಇಂಥ ಈ ಮಹಾತ್ಮರು ಯಾರಾಗಿರ ಬಹುದೆಂದು ಅವರು ತಮ್ಮ ತಮ್ಮೊಳಗೆ ಮಾತನಾಡಿಕೊಳ್ಳತೊಡಗಿದರು. ಹೀಗೆ ಜನರೆಲ್ಲರು ಆಶ್ಚರ್ಯ-ಭಯ-ಭಕ್ತಿಗಳನ್ನು ತಾಳಿ ನಿಂತುಕೊಂಡಿರಲು, ಪ್ರಭುಗಳು ಆ ಸ್ತ್ರೀಯ ಮೈಮೇಲೆ ತಮ್ಮ ಚರಣ ತೀರ್ಥವನ್ನು ಸಂಪ್ರೋಕ್ಷಿಸಲು ಬ್ರಹ್ಮಚಾರಿಗೆ ಹೇಳಿದರು. ಕೂಡಲೆ ಆತನು ತೀರ್ಥವನ್ನು ಅವಳ ಮೈಮೇಲೆ ಸಿಂಪಡಿಸಿದನು.

ಬ್ರಹ್ಮಚಾರಿಯು ತೀರ್ಥಸಂಪ್ರೋಕ್ಷಣೆ ಮಾಡಿದ್ದೊಂದೇ ತಡ, ಆ ಸ್ತ್ರೀಯ ಮೈಮೇಲೆ ಎರಡು ಪಿಶಾಚಿಗಳು ಬಂದವು; ಮತ್ತು ಅವು ಪ್ರಭುಗಳನ್ನು ಕುರಿತು—ಪ್ರಭುಗಳೇ, ತಾವು ದತ್ತಾವತಾರಿಕರು; ತಮ್ಮ ದರ್ಶನದಿಂದ ನಾವು ಧನ್ಯರಾದೆವು. ನಾವು ಮೊದಲು ಪಂಡಿತರಾದ ಬ್ರಾಹ್ಮಣರು; ಈ ಸ್ತ್ರೀಯನ್ನು ನಮ್ಮಿಬ್ಬರಲ್ಲಿ ಯಾರೊಬ್ಬರಿಗೆ ಲಗ್ನಮಾಡಿಕೊಡುತ್ತೇನೆಂದು ಚಿಕ್ಕಂದಿನಲ್ಲಿ ಈಕೆಯ ತಂದೆಯು ನಮಗೆ ವಚನಕೊಟ್ಟಿದ್ದನು. ನಾವಾದರೂ ಮನಸಾ ಈಕೆಯನ್ನು ಹೆಂಡತಿಯೆಂದು ಭಾವಿಸಿದ್ದೆವು; ಆದರೆ ಮುಂದೆ ಇವಳು ದೊಡ್ಡವಳಾದ ಹಾಗೆ ಈಕೆಯನ್ನು ಬೇಗನೆ ನಮ್ಮಿಬ್ಬರಲ್ಲಿ ಯಾರಿಗಾದರೂ ಲಗ್ನಮಾಡಿಕೊಡು ಎಂದು ಈಕೆಯ ತಂದೆಗೆ ದುಂಬಾಲಬಿದ್ದೆವು. ಆಗಾದರೂ ಆ ಗೃಹಸ್ಥನು, ಕೊಡುತ್ತೇನೆ-ಕೊಡುತ್ತೇನೆಂದು ನಮಗೆ ಆಶ್ವಾಸನವನ್ನು ಕೊಡುತ್ತಿದ್ದನು. ಹುಡುಗೆಯು ಉಪವರಳಾದಳು. ಈಕೆಯ ಸೌಂದರ್ಯವನ್ನು ನೋಡಿ ಹಲವು ಜನ ಶ್ರೀಮಂತರು ಕನ್ಯಾರ್ಥಿಗಳಾಗಿ ಇವರ ಮನೆಗೆ ಬರತೊಡಗಿದರು. ಸ್ವಾಮೀ, ಬಡವರಾಗಿ ಹುಟ್ಟಬಾರದು. ನಾವಿಬ್ಬರೂ ಪಂಡಿತ ಬ್ರಾಹ್ಮಣರಿದ್ದರೂ ನಿರ್ಧನರು. ಆದ್ದರಿಂದ ಈಕೆಯ ತಂದೆಯು ಆಶೆಗೆ ಬಿದ್ದು ನಮಗೆಕೊಟ್ಟ ವಚನವನ್ನು ತಪ್ಪಿಸಿ, ಒಬ್ಬ ಶ್ರೀಮಂತ ವರನನ್ನು ನೋಡಿ ಈಕೆಯ ಲಗ್ನಮಾಡಿದನು. ಹಾಯ್! ಹಾಯ್! ನಮ್ಮದೆಂದು ಗೊತ್ತಾಗಿಹೋಗಿದ್ದ ಹೆಣ್ಣನ್ನು ಅನ್ಯರಿಗೆ ಕೊಟ್ಟು ಲಗ್ನಮಾಡಿದ್ದು ಎಷ್ಟು ಅನ್ಯಾಯವು? ಇದರಿಂದ ನಮಗೆ ಬಹು ಸಂತಾಪವಾಯಿತು. ನಮ್ಮಿಬ್ಬರಲ್ಲಿಯೇ ಯಾರಿಗಾದರೊಬ್ಬರಿಗೆ ಈಕೆಯನ್ನು ಲಗ್ನಮಾಡಿಕೊಟ್ಟಿದ್ದರೆ ನಮಗೆ ಬಹು ಸಂತೋಷವಾಗುತ್ತಿತ್ತು. ಲಗ್ನವಾದವನಿಗೂ ಆಗದಿದ್ದವನಿಗೂ ಕೂಡಿಯೇ ಸಮಾಧಾನವಾಗುತ್ತಿತ್ತು. ಇದರಿಂದ ನಮ್ಮಿಬ್ಬರಲ್ಲಿ ಈಕೆಯ ಲಗ್ನವಾಗದಿದ್ದವನು ಈಕೆಯ ವಿಷಯವಾಗಿ ವಾಸನಾಶೂನ್ಯನಾಗುತ್ತಿದ್ದನು. ಆದರೆ ಪರಿಸ್ಥಿತಿಯು ಹಾಗೆ ಸಂಭವಿಸಲಿಲ್ಲ. ಮುಂದೆ ಈಕೆಯು ಪ್ರಬುದ್ಧಳಾಗಿ ಲಗ್ನಮಾಡಿ

ಕೊಂಡವನೊಡನೆ ಸಂಸಾರವ ಮಾಡತೊಡಗಿದಳು. ಆಗಂತೂ ನಮ್ಮ ಮನಸ್ಸಿನ ಸ್ಥಿತಿಯನ್ನು ದೇವರೇಬಲ್ಲನು. ಕರ್ಮಧರ್ಮ ಸಂಯೋಗದಿಂದ ನಮಗೆ ಲಗ್ನವೇ ಆಗದ್ದರಿಂಪ ಚಿಕ್ಕಂದಿನಲ್ಲಿ ಈ ಸ್ತ್ರೀಯಮೇಲೆ ಕುಳಿತ ನಮ್ಮ ವಾಸನೆಯು ಸ್ಥಿರವಾಯಿತು. ಈ ಸ್ಥಿತಿಯಲ್ಲಿ ನಾವಿಬ್ಬರೂ ಮರಣವನ್ನು ಹೊಂದಿದೆವು. ಮನುಷ್ಯ ಶರೀರದಲ್ಲಿ ಈ ಸ್ತ್ರೀಯ ಭೋಗವು ನಮಗೆ ಒದಗಿ ನಮ್ಮ ಮನಸ್ಸು ತೃಪ್ತವಾಗದ್ದರಿಂದ ನಾವಿಬ್ಬರೂ ಆ ವಾಸನಾ ಪ್ರಾಬಲ್ಯದಿಂದ ಪಿಶಾಚ್ಚಯೋನಿಯಲ್ಲಿ ಜನ್ಮ ತಾಳಿದೆವು. ಮತ್ತು ಪೂರ್ವಜನ್ಮದ ಹೆಂಡತಿಯಾದ ಈಕೆಯ ದೇಹದಲ್ಲಿ ಸೇರಿಕೊಂಡೆವು. ಮಹಾರಾಜ, ಈ ಪಿಶಾಚ್ಚಯೋನಿಯಲ್ಲಿ ಬಹಳವಾಗಿ ಕಷ್ಟಗಳನ್ನು ಹೊಂದುತ್ತಿರುವೆವು; ಮತ್ತು ಈಕೆಯನ್ನೂ ಹಿಂಸೆಪಡಿಸಿದೆವು. ಇಷ್ಟೆಲ್ಲ ಅನರ್ಥಕ್ಕೆ ಈಕೆಯ ತಂದೆಯೇ ಕಾರಣನು; ನಮಗೆ ಕೊಟ್ಟವಚನದಂತೆ ಅವನು ನಡೆದುಕೊಂಡುಬಿಟ್ಟಿದ್ದರೆ, ನಾವು ಪಿಶಾಚ್ಚಯೋನಿಯಲ್ಲಿ ಹುಟ್ಟಿಬರುತ್ತಿದ್ದಿಲ್ಲ. ಈ ಸ್ತ್ರೀಗೂ ಈ ಪರಿಕಷ್ಟವನ್ನನುಭವಿಸುವ ಪ್ರಸಂಗವು ಬರುತ್ತಿದ್ದಿಲ್ಲ. ಈಕೆಯ ತಂದೆಯು ವಚನಭ್ರಷ್ಟನಾದರೂ ಆಗಲೊಲ್ಲಸೇಕೆ! ನಾವಾದರೂ ಈಕೆಯ ವಿಷಯವಾಗಿ ಇಷ್ಟೇಕೆ ದುರಾಶೆಯನ್ನು ತಾಳಿದೆವೋ ಎಂಬ ಪಶ್ಚಾತ್ತಾಪವು ನಮಗೆ ಈಗ ಆಗುತ್ತದೆ. ಮಹಾರಾಜರೇ, ಪ್ರಭುಗಳೇ, ನಿಮ್ಮ ಮಹಾಪಾದಗಳ ಪರುಶನವಾಯಿತು. ಈ ಸ್ತ್ರೀಯು ಸತ್ತು ಪುನಃ ಸಜೀವಳಾದ್ದರಿಂದ ಈಕೆಗೆ ಅನ್ಯಜನ್ಮವು ಬಂದಹಾಗಾಯಿತು. ಆದ್ದರಿಂದ ಈಕೆಯು ನಮಗೆ ಈಗ ಪರಸ್ತ್ರೀಯಾದಳು. ನಾವು ಈಕೆಯನ್ನು ಬಿಟ್ಟುಹೋಗಲೇಬೇಕಾಯಿತು. ದೊಡ್ಡವರ ಚರಣಗಳನ್ನು ಕಂಡಬಳಿಕ ನಮಗೆ ಯಮಯಾತನೆಯು ಇಲ್ಲವಷ್ಟೇ; ಪ್ರಭುಗಳೇ, ಶರಣುಬಂದಿರುವ ಈ ದೀನರನ್ನು ಉದ್ಧರಿಸಬೇಕು, ಎಂದು ನುಡಿದವು.

ಪಿಶಾಚಿಗಳು ಉ[illegible]ದ ಈ ಅದ್ಭುತ ಚರಿತ್ರವನ್ನು ಕೇಳಿ ನೆರೆದ ಜನರ ಮೈಕೂದಲುಗಳು ನೆಟ್ಟಗಾದವು. ತಮ್ಮ ಮುಂದೆ ನಿಂತಿರುವ ಈ ಸತ್ಪುರುಷರು ಕಲ್ಯಾಣದ ಶ್ರೀ ಮಾಣಿಕ ಪ್ರಭುಗಳೆಂದು ಅವರು ತರ್ಕಿಸಿದರು. ಪ್ರಭುಗಳ ಕೀರ್ತಿ ಶ್ರವಣವನ್ನು ಅವರು ಬಹಳವಾಗಿ ಮಾಡಿದ್ದರಿಂದಲೂ ಈ ದಿವಸ ಅವರ ಮಹಿಮೆಯನ್ನು ಪ್ರತ್ಯಕ್ಷವಾಗಿ ನೋಡಿದ್ದರಿಂದಲೂ ಆ ಜನರ ಭಕ್ತಿಯು ಇಮ್ಮಡಿಸಿತು. ಅವರು ಪ್ರಭುಗಳಿಗೆ ದಂಡವತ್‌ಸಾಷ್ಟಾಂಗನಮಸ್ಕಾರಗಳನ್ನು ಹಾಕಿ ಅವರನ್ನು ಸ್ತುತಿಸಹತ್ತಲು ಪ್ರಭುಗಳು ಕೈಸನ್ನೆಯಿಂದ ಅವರೆಲ್ಲರನ್ನು ಸುಮ್ಮನಿರಿಸಿ ಪಿಶಾಚಿಗಳನ್ನು ಕುರಿತು ನುಡಿದರೇನಂದರೆ—"ನಿಮಗೆ ಕೊಟ್ಟ ವಚನವನ್ನು ತಪ್ಪಿ

ಸಿದ್ದರಿಂದ ಈಕೆಯ ತಂದೆಯು ಯಮಯಾತನೆಯನ್ನು ಅನುಭವಿಸುತ್ತಿದ್ದನು. ಹೀಗಿದ್ದು ನೀವು ಈ ಸ್ತ್ರೀಯ ವಿಷಯವಾಗಿ ದುರಾಶೆಪಟ್ಟದ್ದರಿಂದ ನಿಮಗೆ ಈ ರೀತಿ ಶಿಕ್ಷೆಯಾದದ್ದು ಯೋಗ್ಯವೇ ಸರಿ. ನೀವು ಸುಮ್ಮ ಸುಮ್ಮನೆ ಅನ್ಯಸ್ತ್ರೀಯನ್ನು ಹಿಂಸೆಪಡಿಸಿದ್ದರಿಂದ ಈಗಲಾದರೂ ನಿಮ್ಮನ್ನು ಉದ್ಧರಿಸುವದು ಯೋಗ್ಯವಾಗಿರುವದಿಲ್ಲ. ಆದರೆ ನೀವು ಪಶ್ಚಾತ್ತಾಪಪಟ್ಟು ಶರಣು ಬಂದದ್ದರಿಂದ ನಿಮ್ಮನ್ನು ಉದ್ಧರಿಸಬೇಕಾಗಿರುವದು. ಆದರೂ ಇನ್ನೂ ಕೆಲವು ದಿವಸ ನೀವು ಪಿಶಾಚ್ಚಯೋನಿಯಲ್ಲಿ ಕಾಲಹರಣಮಾಡಬೇಕು. ನೀವು ಈಗ ಈ ಸ್ತ್ರೀಯನ್ನು ಬಿಟ್ಟು ನಮ್ಮ ಸೇವೆಯಲ್ಲಿ ನಿರತನಾದ ಈ ಗೋಪಾಳನ ಮೈಯಲ್ಲಿ ವಾಸಮಾಡಿಕೊಂಡಿರಬೇಕು. ಅಂದರೆ ಸ್ವಲ್ಪದಿವಸಗಳಲ್ಲಿ ನಿಮ್ಮ ಕಲ್ಯಾಣವಾಗುವದು. ನೀವು ಈ ಜನ್ಮವನ್ನು ನೀಗುವಿರಿ.''

ಪ್ರಭುಗಳು ಈ ರೀತಿಯಾಗಿ ಅಪ್ಪಣೆಮಾಡಿದ ಕೂಡಲೆ ಆ ಸ್ತ್ರೀಯು ದೊಪ್ಪನೆ ನೆಲಕ್ಕೆ ಬಿದ್ದಳು. ಆಕೆಯ ಮೈಯೊಳಗಿನ ಆ ಪಿಶಾಚಿಗಳು ಪ್ರಭುಗಳ ಸೇವಕನಾದ ಗೋಪಾಳನ ದೇಹದಲ್ಲಿ ಸೇರಿಕೊಂಡವು. ಬಳಿಕ ಆ ಸ್ತ್ರೀಯು ಶುದ್ಧಿಯ ಮೇಲೆ ಬಂದು ಲಜ್ಜಿತಳಾಗಿ ಸೆರಗನ್ನು ಸಾವರಿಸಿಕೊಳ್ಳುತ್ತ ಎದ್ದು ನಿಂತುಕೊಂಡಳು. ಪ್ರಭುಗಳ ದಯದಿಂದ ಸತ್ತವಳು ಬದುಕಿದಳಲ್ಲದೆ ಪಿಶಾಚಿಬಾಧೆಯಿಂದಲೂ ವಿಮುಕ್ತಳಾದಳೆಂದು ಆ ಸ್ತ್ರೀಯ ಮನೆಯವರಿಗೆ ಪರಮಾವಧಿಯಾದ ಆನಂದವಾಯಿತು. ಆಗ ಪ್ರಭುಗಳು ನೆರೆದ ಜನರನ್ನು ಕುರಿತು ನುಡಿದರೇನಂದರೆ—''ಅಪ್ಪಗಳಿರಾ, ನೋಡಿದಿರಾ, ಕಲಿಯುಗದ ಜನರ ಆಟವನ್ನು! ಜನರಲ್ಲಿ ಈಗ ವಚನಕ್ಕೆ ಮಹತ್ವವು ಉಳಿದಿಲ್ಲ. ಭಗವದವತಾರಿಕರಾದ ಶ್ರೀಮದ್ವೇದವ್ಯಾಸರು ಹದಿನೆಂಟು ಪುರಾಣಗಳನ್ನು ರಚಿಸಿ ಸತ್ಯವಚನದ ಮಹತ್ವವನ್ನು ಎಷ್ಟು ವರ್ಣಿಸಿದ್ದರೂ ಅದೆಲ್ಲ ಈಗಿನ ಜನರಿಗೆ ನಿರರ್ಥಕವಾಯಿತು. ಆದರೂ ಆ ಮಹನೀಯರ ಸದ್ಬೋಧದಂತೆ ನಡೆಯುವ ಮಹಾತ್ಮರು ಅನೇಕರುಂಟು; ಆದರೆ ಅವರು ಕೇವಲ ಬೀಜಭೂತರೆಂದು ಅರಿಯಬೇಕು. ಮುಖ್ಯವಾಗಿ ಅಸತ್ಯವಚನಗಳೇ ಈಗ ಹೆಚ್ಚಿರುವವು. ಅದ್ದರಿಂದ ಹೀಗೆ ಅನರ್ಥವಾಗುತ್ತ ನಡೆದಿರುವದು. ಒಬ್ಬರಿಗೆ ಒಂದು ಪದಾರ್ಥವನ್ನು ಕೊಡುತ್ತೇನೆಂದು ಹೇಳಿದ ಬಳಿಕ ಸತ್ಯವಾದಿಯಾದವನು ಆ ಪದಾರ್ಥವನ್ನು ಅವನಿಗೆ ಕೊಟ್ಟೇ ತೀರಬೇಕು. ಇಲ್ಲದಿದ್ದರೆ ಆ ಪದಾರ್ಥದ ಮೇಲೆ ಆ ಮನುಷ್ಯನ ಆಶೆಯುಳಿಯುವದು. ಈತನಿಗೆ ವಚನಭ್ರಷ್ಟದೋಷವು ತಟ್ಟುವದು. ವಿಚಾರವಂತನಾದವನು ಮೂಲತಃ ವಿಚಾರವಿಲ್ಲದೆ ಯಾರಿಗೂ ಅವಿಚಾರದಿಂದ ವಚನಕೊಡಬಾರದು. ಕೊಟ್ಟ ಮೇಲೆ ತಪ್ಪಿಸಕೂಡದು. ಈಗಿನ ಕಾಲದಲ್ಲಿ ಇಂಥ ಸತ್ಯಧರ್ಮವನ್ನು ಕಾಣುವದೇ

ಆಪರೂಪವಾಗಿದೆ. ವಚನವನ್ನು ತಪ್ಪಿಸುವದು ಈಗಿನ ಜನರಿಗೆ ಮೇಲೆ ಮೇಲೆ ಸಾಮಾನ್ಯವಾಗಿ ತೋರಿದರೂ ಅದರ ಪರಿಣಾಮವು ಎಷ್ಟು ಭಯಂಕರವಾಗುವದೆಂಬದನ್ನು ಈ ಸ್ತ್ರೀಯ ಉದಾಹರಣೆಯಿಂದಲೇ ನೀವು ಮನಗಾಣಬಹುದು. ಸಾಮಾನ್ಯಪದಾರ್ಥಗಳನ್ನು ಕೊಡುತ್ತೇನೆಂದು ಹೇಳಿ ಕೊಡದಿದ್ದರೆ ಬಹುದೊಡ್ಡ ಅನರ್ಥಗಳುಂಟಾಗುತ್ತಿರಲು, ಕನ್ಯಾದಾನದಂಥ ಮಹತ್ವದ ಕೆಲಸದಲ್ಲಿ ವಚನಕ್ಕೆ ತಪ್ಪಿದರೆ ಏನಾಗುವದೆಂಬದನ್ನು ಯಾರು ಹೇಳಬೇಕು? ಅಂತೇ ಈ ವಿಷಯದಲ್ಲಿ ಧರ್ಮಶಾಸ್ತ್ರವು ಬಹುದೊಡ್ಡ ಪ್ರಾಯಶ್ಚಿತ್ತವನ್ನು ವಿಧಿಸಿರುತ್ತದೆ. ಧರ್ಮಲಂಡರಾದ ಮೂರ್ಖರು ಧರ್ಮಶಾಸ್ತ್ರದ ಪ್ರಾಯಶ್ಚಿತ್ತವನ್ನೂ ಲೆಕ್ಕಿಸದೆ ಮನಬಂದಂತೆ ಆಚರಿಸುವರು. ಒಬ್ಬನಿಗೆ ಕನ್ನಿಕೆಯನ್ನು ಕೊಡುತ್ತೇನೆಂದು ವಾಗ್ದಾನಮಾಡಿ, ಏನಕೇನ ಪ್ರಕಾರದಿಂದ ಮುಂದೆ ಆ ವಾಗ್ದಾನವನ್ನು ತಿರುಗಿತಕ್ಕೊಳ್ಳುವದು ನ್ಯಾಯವಲ್ಲ. ಈ ಸ್ತ್ರೀಯ ತಂದೆಯು ಹೀಗೆ ಮಾಡಿದ್ದರಿಂದ ಆ ಬ್ರಾಹ್ಮಣದ್ವಯರಲ್ಲಿ ಇವಳ ವಿಷಯಕವಾದ ವಾಸನೆಯು ಸ್ಥಿರವಾಗಿನಿಂತು ಅದು ಅವರನ್ನು ಬ್ರಹ್ಮಪಿಶಾಚ್ಚಸ್ಥಾನದವರೆಗೆ ಒಯ್ದಿತು. ಹಾಯ್! ಹಾಯ್! ವಾಸನೆಯೆನ್ನುವದು ಎಷ್ಟು ಭಯಂಕರವು; ತಿಳಿದವರು ಸದಾ ವಾಸನಾರಹಿತರಾಗಿಯೇ ಇರುತ್ತಾರೆ. ಜನ್ಮಕ್ಕೆ ಮೂಲವು ಈ ವಾಸನೆಯೇ ಇರುತ್ತದೆ. ಯಾವನು ವಿವೇಕದಿಂದ ನಡೆದು ವಾಸನಾಕ್ಷಯವನ್ನು ಮಾಡಿಕೊಳ್ಳುವನೋ ಅವನೇ ಜ್ಞಾನಿಯು; ಅವನೇ ಮೋಕ್ಷಸುಖಕ್ಕೆ ಪಾಲುಗಾರನಾಗತಕ್ಕವನು. ಇದನ್ನರಿತು ನೀವು ಯಾವಾಗಲೂ ಎಚ್ಚರದಿಂದ ನಡೆಯಬೇಕು.''

ಈ ರೀತಿಯಾಗಿ ಪ್ರಭುಗಳು ಮಾತನಾಡಲು ಸಮಸ್ತರೂ ಹರುಷನಿರ್ಭರರಾದರು. ಕೂಡಿದ ಆ ಜನರಲ್ಲಿ ಎಷ್ಟೋ ಜನರು ಒಬ್ಬರಿಗೆ ವಾಗ್ದಾನಮಾಡಿದ ಹೆಣ್ಣನ್ನು ಬಿಡಿಸಿಕೊಂಡು ಮತ್ತೊಬ್ಬರಿಗೆ ಧಾರೆಯೆರೆದು ಕೊಟ್ಟವರಿದ್ದರು. ಅವರೆಲ್ಲರ ಮನಸ್ಸಿಗೆ ಪ್ರಭುಗಳ ಸದ್ಬೋಧವು ಚನ್ನಾಗಿ ಹತ್ತಿತು. ಅವರು ಬಹಳ ಪಶ್ಚಾತ್ತಾಪವನ್ನು ಹೊಂದಿದರು. ಇಷ್ಟೊತ್ತಿನವರೆಗೆ ಪ್ರಭುಗಳು ಒದ್ದೆಯಿಂದ ಹಾಗೇ ನಿಂತುಕೊಂಡಿದ್ದರು. ಬಳಿಕ ಅವರು ಸ್ನಾನಕ್ಕಾಗಿ ಹೋದರು. ಕೂಡಿದ ಜನರು ಸ್ನಾನಕ್ಕಾಗಿ ತಮ್ಮ ತಮ್ಮ ಮನೆಗಳಿಗೆ ಹೋದರು. ಸಚೇವಳಾದ ಆ ಸ್ತ್ರೀಯನ್ನು ಆಕೆಯ ಮನೆಯವರು ಕರಕೊಂಡುಹೋಗಿ ಮಂಗಲಸ್ನಾನವನ್ನು ಮಾಡಿಸಿದರು. ಆಕೆಯ ಗಂಡನೂ ಮಂಗಲಸ್ನಾನವನ್ನುಮಾಡಿ ಶುಚಿರ್ಭೂತನಾಗಿ ಹೆಂಡತಿಯೊಡನೆ ಪುನಃ ಪ್ರಭುಗಳ ಬಳಿಗೆ ಬಂದನು. ಅಷ್ಟೊತ್ತಿಗೆ ಪ್ರಭುಗಳು ತಮ್ಮ

ಅನುಷ್ಠಾನವನ್ನು ತೀರಿಸಿ ಆಸನದಮೇಲೆ ಕುಳಿತುಕೊಂಡಿದ್ದರು. ಈ ದಂಪತಿಗಳು ಪೂಜಾಸಾಹಿತ್ಯಗಳನ್ನು ತಕ್ಕೊಂಡು ತಮ್ಮ ಬಳಿಗೆ ಬರಲು, ಪ್ರಭುಗಳು ಅವರ ಮನೋಭಿಪ್ರಾಯವನ್ನು ತಿಳಿದು ಮೊದಲು ಅವರಿಂದ ಶ್ರೀ ಮಾರುತಿಯ ಪೂಜೆಯನ್ನು ಮಾಡಿಸಿದರು. ಬಳಿಕ ಆ ದಂಪತಿಗಳು ಅತ್ಯಂತ ಪ್ರೀತಿಯಿಂದ ಪ್ರಭುಗಳ ಪಾದಪೂಜೆಯನ್ನುಮಾಡಿದರು. ಆ ದಿನ ಅವರು ಪ್ರಭುಗಳ ಬಳಿಯಲ್ಲಿಯೇ ಪ್ರಸಾದವನ್ನು ಸ್ವೀಕರಿಸಿ ಕೃತಕೃತ್ಯರಾದರು. ಮರುದಿನ ಆ ಗೃಹಸ್ಥನು ಪ್ರಭುಗಳಿಗೋಸ್ಕರ ನೈವೇದ್ಯವನ್ನು ಮಾಡಿಸಿ ಬ್ರಾಹ್ಮಣರ ಬಹುದೊಡ್ಡ ಸಂತರ್ಪಣೆಯನ್ನು ನೆರವೇರಿಸಿದನು.

ಈ ಮೇರೆಗೆ ಪ್ರಭುಗಳು ಪಹಾಡಗಾವದ ಜನರಿಗೆ ತಮ್ಮ ಅದ್ಭುತ ಸಾಮರ್ಥ್ಯವನ್ನು ತೋರಿಸಲು ಆ ಊರ ಜನರೆಲ್ಲರು ಪ್ರಭುಗಳ ದಾಸಾನುದಾಸರಾದರು. ಅವರೆಲ್ಲರು ಸತ್ಯವಚನವನ್ನು ನುಡಿಯುವ ಮತ್ತು ಕೊಟ್ಟವಚನವನ್ನು ಪಾಲಿಸುವ ನಿಶ್ಚಯವನ್ನು ಮಾಡಿದರು. ಪಿಶಾಚ್ಚವಿಮೋಚನೆಯನ್ನು ಹೊಂದಿದ ಆ ಸ್ತ್ರೀಯೂ ಆಕೆಯ ಗಂಡನೂ ಪ್ರಭುಗಳನ್ನು ಆಮರಣಪರ್ಯಂತರವಾಗಿ ಭಜಿಸಿ ಮುಕ್ತರಾದರು.

## ೧೧ನೆಯ ಪ್ರಕರಣ.

### ಗಾದೀ ಪೂಜೆಯ ಮಹತ್ವ.

ಪ್ರಭುಗಳು ತಾವು ಹೋದ ಹೋದಲ್ಲೆಲ್ಲ ಭಕ್ತಜನರ ಆಗ್ರಹವಿಶೇಷದಿಂದ ಒಂದೊಂದು ಗಾದಿಯನ್ನು ಸ್ಥಾಪಿಸಿ ಆ ಗಾದಿಯೇ ತಮ್ಮ ಸ್ವರೂಪವೆಂದೂ ಅದನ್ನೇ ಪೂಜಿಸಿಕೊಂಡಿರಬೇಕೆಂದೂ ಭಕ್ತರನ್ನು ಆಜ್ಞಾಪಿಸುವ ಪದ್ಧತಿಯನ್ನಿಟ್ಟುಕೊಂಡಿದ್ದರು. ಅದರಂತೆ ಅವರು ಬೇದರಗ್ರಾಮದಲ್ಲಿ ಒಂದು ಗಾದಿಯನ್ನು ಸ್ಥಾಪಿಸಿದ್ದರು. ಆ ಊರ ಸಮಸ್ತ ಭಕ್ತರು ಗಾದಿಯ ಅರ್ಚನಾದಿ ವಿಧಿಗಳಲ್ಲಿ ತತ್ಪರರಾಗಿದ್ದರು. ಬ್ರಾಹ್ಮಣರು-ಮುಸಲ್ಮಾನರು-ಇತರ ಹಿಂದುಗಳು ಸಮಸ್ತರೂ ಪ್ರತಿನಿತ್ಯ ಗಾದಿಯ ದರ್ಶನಕ್ಕೆ ಬರುತ್ತಿದ್ದರು. ಆ ಗಾದಿಯ ಬಳಿಯಲ್ಲಿ ದಿನಾಲು ಪುರಾಣ-ಪುಣ್ಯ ಕಥೆಗಳೂ ಭಜನ-ಪಾರಾಯಣಾದಿಗಳೂ ತಪ್ಪದೇ ನಡೆಯುತ್ತಿದ್ದವು. ಹೀಗಿರಲು ಆ ಊರಿಗೆ ಮುಸಲ್ಮಾನರಲ್ಲಿ ಪ್ರತಿಷ್ಠಿತನೂ, ವಿದ್ವಾಂಸನೂ, ಬಹು ಗೌರವ

ಶಾಲಿಯೂ ಆದ ಲುಕಮಾನಶಹಾನೆಂಬ ಒಬ್ಬ ಫಕೀರನು ಬಂದನು. ಆತನು ಅತ್ಯಂತದುರಭಿಮಾನಿಯಾಗಿದ್ದನು. ಅವನಿಗೆ ಆ ಊರ ಮುಸಲ್ಮಾನರು ಬ್ರಾಹ್ಮಣ ಸತ್ಪುರುಷನ ಭಜನೆಯನ್ನು ಮಾಡುವರೆಂಬ ಸಂಗತಿಯು ತಿಳಿಯಲು, ಅವನು ಸಂತಪ್ತನಾದನು. ತನ್ನ ಜಾತಿಯವರು ಅನ್ಯ ಜಾತಿಯವರಿಗೆ ಶರಣುಹೋದರೇ? ಎಂಬ ದುರಭಿಮಾನವು ಅಗ್ನಿರೂಪವನ್ನುಹೊಂದಿ ಪ್ರಜ್ವಲಿಸಿತು. ಕೂಡಲೆ ಅವನು ಪ್ರಭುಗಳ ಗಾದಿಯು ಸ್ಥಾಪಿತವಾದ ಸ್ಥಳಕ್ಕೆ ಹೋದನು. ಅಲ್ಲಿ ನೂರಾರು ಜನ ಬ್ರಾಹ್ಮಣರೂ-ನೂರಾರುಜನ ಮುಸಲ್ಮಾನರೂ ಭಜನಮಾಡುತ್ತಿದ್ದರು. ಆಗ ಆತನು ಅಲ್ಲಿದ್ದ ಮುಸಲ್ಮಾನರನ್ನು ಕರೆದು ಅವರಿಗೆ ಸ್ವಧರ್ಮಾಭಿಮಾನವು ಹುಟ್ಟುವಂತೆ ಮಾತಾಡಿ, ಈಗಿಂದೀಗಲೇ ಪ್ರಭುಗಳ ಗಾದಿಯನ್ನು ಕಿತ್ತು ಒಗೆಯಬೇಕೆಂದು ಆಜ್ಞಾಪಿಸಿದನು. ಆದರೆ ಪ್ರಭುಗಳಲ್ಲಿ ಸ್ಥಿರಚಿತ್ತರಾದ ಆ ಮುಸಲ್ಮಾನರು ಲುಕಮಾನಫಕೀರನ ಮಾತುಗಳನ್ನು ಅಲ್ಲಗಳೆದರು. ಮೊದಲೇ ಮೂರ್ತಿಮಂತ ದುರಭಿಮಾನಿಯಾಗಿದ್ದ ಆ ಫಕೀರನಿಗೆ ಈ ಅಪಮಾನದಿಂದ ಮತ್ತಿಷ್ಟು ಕ್ರೋಧವುಂಟಾಯಿತು. ಅವನು ಆ ಕೂಡಲೆ ಹಿಂದು ಮುಂದಿನ ವಿಚಾರಮಾಡದೆ ಶಸ್ತ್ರಪಾಣಿಗಳಾದ ತನ್ನಶಿಷ್ಯರಿಗೆ-ಒಳನುಗ್ಗಿ ಗಾದಿಯನ್ನು ಕಿತ್ತೊಗೆಯಬೇಕೆಂದು ಆಜ್ಞಾಪಿಸಿದನು. ಗುರುವಿನಂತೆ ಆ ಶಿಷ್ಯರೂ ಉದ್ದಾಮತನದಿಂದ ಮಠದಲ್ಲಿ ಕಾಲಿಟ್ಟರು. ಬಳಿಕ ಕೇಳುವದೇನು? ಗಾದಿಯ ಅಭಿಮಾನಿಗಳಾದ ಬ್ರಾಹ್ಮಣ-ಮುಸಲ್ಮಾನರಿಗೂ ಫಕೀರನ ಶಿಷ್ಯರಿಗೂ ಕೈಗೆಕೈಹತ್ತಿತು. ಆತನ ಶಿಷ್ಯರ ಸಂಖ್ಯೆಯಾದರೂ ಐವತ್ತಕ್ಕೆ ಏರಿತ್ತು. ಆದರೆ ಫಕೀರನ ಶಿಷ್ಯರು ಶಸ್ತ್ರಧಾರಿಗಳು; ಗಾದಿಯ ಅಭಿಮಾನಿಗಳು ನಿಃಶಸ್ತ್ರರು. ಹೀಗಾಗಿ ಒಂದು ಕ್ಷಣದಲ್ಲಿ ಎಷ್ಟೋ ಹೆಣಗಳನ್ನು ಫಕೀರನ ಶಿಷ್ಯರು ಕೆಡವಿದರು. ಈ ಗಲಭೆಯು ಹಾಹಾ ಅನ್ನುವಷ್ಟರಲ್ಲಿ ನಬಾಬನ ಕಿವಿಯವರೆಗೆ ಮುಟ್ಟಲು, ಆತನು ತನ್ನ ಸೈನ್ಯವನ್ನು ಕಳಿಸಿದನು. ನಬಾಬನ ದಂಡು ಗಾದಿಯ ಸಂರಕ್ಷಣಾರ್ಥವಾಗಿ ಬರಲು ಫಕೀರನು ಓಡಿದನು. ಆತನ ಶಿಷ್ಯರೂ ಓಡಿದರು. ಈ ಗಾದಿಯ ದ್ವೇಷದಿಂದ ಫಕೀರನಿಗೆ ತಾತ್ಕಾಲದಲ್ಲಿ ಹುಚ್ಚು ಹಿಡಿಯಿತು. ಅವನು ಓಣಿ-ಓಣಿಗಳಲ್ಲಿಯ ಕಶ್ಮಲವನ್ನು ಮೈಮೇಲೆ ಹಾಕಿಕೊಳ್ಳುತ್ತ ತಿರುಗಾಡಹತ್ತಿದನು.

ಈ ಮೇರೆಗೆ ಫಕೀರನ ದುರ್ದೆಶೆಯಾಗಲು, ಆತನ ಶಿಷ್ಯರು ಈರ್ಷೆಗೆಬಿದ್ದು ಹೈದರಾಬಾದಕ್ಕೆ ಹೋಗಿ ಅಲ್ಲಿ ಫಕೀರನ ಅಭಿಮಾನಿಗಳನ್ನು ಹುರಿದುಂಬಿಸಿ ಈ ಸಂಗತಿಯನ್ನು ನಿಜಾಮನ ಕಿವಿಯಮೇಲೆ ಹಾಕಿದರು. ಅವರು ಆ ಸಂಗತಿಯನ್ನು ಹೇಳುವಾಗ ನಿಜಾಮನಿಗೆ ಬ್ರಾಹ್ಮಣರ ಮೇಲೆ ಕೋಪಬರುವಹಾಗೆ ಕೃತ್ರಿಮ ರಚ

ನೆಯನ್ನು ಮಾಡಿಕೊಂಡಿದ್ದರು. ಪಾಪ! ಯಾವದನ್ನೂ ಅರಿಯದ ನಿಜಾಮನು ತಮ್ಮ ಜಾತಿಯವರು ಹೇಳುವ ಮಾತೇ ನಿಜವೆಂದು ನಂಬಿ ಬೇದರದೊಳಗಿನ ಪ್ರಭುಗಳ ಗಾದಿಯ ಆಚಾರನೆಯನ್ನು ನಡಿಸುವ ಬ್ರಾಹ್ಮಣರನ್ನು ಗಡಿಪಾರುಮಾಡಿ ಅವರ ಸ್ಥಳದಲ್ಲಿ ಬೇರೆ ಮುಸಲ್ಮಾನರನ್ನು ನೇಮಿಸಬೇಕೆಂದು ಕಟ್ಟಪ್ಪಣೆಮಾಡಿದನು. ಹೇಜೇಬನು ಈ ಅಪ್ಪಣೆಯ ಪತ್ರಿಕೆಯನ್ನು ತಕ್ಕೊಂಡು ಹೊರಡಲು ಇತ್ತ ನಿಜಾಮನ ಜನಾನಖಾನೆಯಲ್ಲಿ ಅನಾಹೂತಕ್ಕೆ ಪ್ರಾರಂಭವಾಯಿತು. ನಿಜಾಮನಿಗೆ ಬಹು ಜನ ಸ್ತ್ರೀಯರಿದ್ದರು. ಅವರೆಲ್ಲರು ಒಂದೇ ಕಾಲದಲ್ಲಿ ಹೊಟ್ಟೆಯುಬ್ಬಿ ನಿಶ್ಚೇಷ್ಟಿತರಾದರು. ದೊಡ್ಡ ದೊಡ್ಡ ಹಕೀಮರು ಶಕ್ತಿಮೀರಿ ಔಷಧೋಪಚಾರಮಾಡಿದರು. ಆದರೆ ಅದೆಲ್ಲ ವ್ಯರ್ಥವಾಯಿತು. ಆ ಎಲ್ಲ ಸ್ತ್ರೀಯರು ಈಗ ಸಾಯುವರೋ ಇನ್ನೊಂದು ಕ್ಷಣಕ್ಕೆ ಸಾಯುವರೋ ಎನ್ನುವ ಹಾಗಾದರು. ನಿಜಾಮನು ಬಹು ಆಳವಾದ ಚಿಂತಾಕೂಪದಲ್ಲಿ ಮುಣುಗಿದನು. ಆಗ ಭಾವಿಕರಾದ ಕೆಲಜನ ಮುಸಲ್ಮಾನರು ನಿಜಾಮನ ಮುಂದೆ ಕೈಜೋಡಿಸಿ ಅರಿಕೆಮಾಡಿಕೊಂಡರೇನಂದರೆ,—ಹುಜೂರ, ತಾವು ಈಗ ಶ್ರೀ ಪ್ರಭುಗಳ ಗಾದಿಯ ಅವಹೇಲನವನ್ನು ಮಾಡಿದ್ದರಿಂದ ತಮಗೆ ಈ ರೀತಿಯಾದ ಸಂಕಟವು ಪ್ರಾಪ್ತವಾಗಿರುತ್ತದೆ. ಆದ್ದರಿಂದ ಮೊದಲಿನಂತೆ ಗಾದಿಯ ವ್ಯವಸ್ಥೆಯು ಸಾಗುವಂತೆ ಅಪ್ಪಣೆಕೊಡಿಸಿದರೆ ನಿಮ್ಮ ಪ್ರಸ್ತುತದ ಸಂಕಟವು ನಿವಾರಣೆಯಾಗಬಹುದಾಗಿ ತೋರುತ್ತದೆ.''

ಚಿಂತೆಯಿಂದ ನಿರ್ವಿಣ್ಣನಾದ ನಿಜಾಮನು ಆ ಭಾವಿಕರ ಮಾತಿಗೆ ಒಡಂಬಟ್ಟು ಕೂಡಲೆ ಸರ್ವಜನರ ಸಮಕ್ಷಮವಾಗಿ ಪ್ರಭುಗಳಿಗೆ ಕ್ಷಮೆಯನ್ನು ಬೇಡಿಕೊಂಡನು. ಮತ್ತು ಗಾದಿಯ ವ್ಯವಸ್ಥೆಯು ಮೊದಲಿನಂತೆಯೇ ಇರುವ ಬಗ್ಗೆ ಮತ್ತೊಂದು ಹುಕುಮನ್ನು ಬರೆದು ಅದನ್ನು ಹೇಜಿಬನಿಂದ ಸಾಗಿಸಿದನು. ಚಮತ್ಕಾರವೇನಂದರೆ—ಆತನ ಈ ಹೊಸ ಹುಕುಮು ಹೊರಟ ಕೂಡಲೆ ಜನಾನಖಾನೆಯೊಳಗಿನ ಸ್ತ್ರೀಯರ ಹೊಟ್ಟೆಯುಬ್ಬುವದು ನಿಂತುಹೋಯಿತು. ಅವರೆಲ್ಲರು ಮೊದಲಿನಂತೆ ನಿರಾಮಯರಾದರು. ಆಗ ನಿಜಾಮನು ಪ್ರಭುಗಳಲ್ಲಿ ಭಯಭಕ್ತಿಯುಳ್ಳವನಾಗಿ ತನ್ನ ರಾಜ್ಯದಲ್ಲಿ ಅವರನ್ನು ಯಾರೂ ಹಿಂಸೆಪಡಿಸಬಾರದೆಂದು ಪ್ರಸಿದ್ಧಪತ್ರಿಕೆಯನ್ನು ಹೊರಡಿಸಿದನು.

ಈ ರೀತಿ ಬೇದರದ ಗಾದಿಯ ವಿಷಯವಾಗಿ ಪ್ರಸಂಗವು ಸಂಭವಿಸಿ ಕೆಲವು ದಿವಸಗಳು ಕಳೆಯಲು ಪ್ರಭುಗಳು ಅಲ್ಲಿಗೆ ದಯಮಾಡಿಸಿದರು. ಆಗ ಶಿಷ್ಯರು ನಡೆದ ಎಲ್ಲ ವೃತ್ತಾಂತವನ್ನು ಅವರ ಮುಂದೆ ನಿವೇದಿಸಿದರು. ಸರ್ವಜ್ಞರಾದ ಅವರು

ಶಿಷ್ಯರು ಹೇಳುವ ಸಂಗತಿಯನ್ನು ಉತ್ಸುಕತೆಯಿಂದ ಕೇಳಿ ದತ್ತಪ್ರಭುವಿನ ಆಟವು ಯಾರಿಗೂ ತಿಳಿಯದು ಎಂದು ನುಡಿದರು. ಬಳಿಕ ಪ್ರಭುಗಳು ನೆರೆದ ಶಿಷ್ಯರ ಮುಂದೆ ಗಾದಿಯ ಮಾಹಾತ್ಮ್ಯವನ್ನು ವಿಸ್ತರಿಸಿದರು. ಅವರು ಹೇಳಿದ್ದೇನಂದರೆ—"ಸಜ್ಜನರು ಸಗುಣೋಪಾಸನೆಯ ಅಭಿವೃದ್ಧಿಗೋಸ್ಕರ ಪ್ರತಿಮಾದಿಗಳನ್ನು ಪ್ರತಿಷ್ಠೆಗೊಳಿಸುವರು. ಆದರಂತೆ ನಮ್ಮ ಗಾದಿಯಾದರೂ ಸಗುಣೋಪಾಸನೆಯ ವೃದ್ಧಿಗೆ ಕಾರಣವಾಗಿರುವದು. ಇದು ವಿಶೇಷವಾಗಿ ನಮ್ಮ ಅವತಾರದ ಕುರುಹನ್ನು ಜಗತ್ತಿನಲ್ಲಿ ಸ್ಥಿರಪಡಿಸುವದು. ನಾವು ಸ್ಥಾಪಿಸಿದ ಅಥವಾ ನಮ್ಮ ಹೆಸರಿನಿಂದ ಸ್ಥಾಪಿಸಲ್ಪಟ್ಟ ಗಾದಿಯನ್ನು ಭಕ್ತಿಯಿಂದ ಪೂಜಿಸುವವನು ಆತ್ಮಜ್ಞಾನವನ್ನು ಪಡೆಯುವನು. ಅವನಿಗೆ ಇಹದಲ್ಲಿಯೂ ಪರತ್ರದಲ್ಲಿಯೂ ಸೌಖ್ಯವಾಗುವದು."

ಬಳಿಕ ಕೆಲಜನರು ಆ ಉಕಮಾನಶಹಾಫಕೀರನನ್ನು ಕರೆತಂದು ಪ್ರಭುಗಳ ಚರಣಕ್ಕೆರಗಿಸಿದರು. ಆಗ ಆತನ ಸ್ಥಿತಿಯು ಬಹುಶೋಚನೀಯವಾಗಿತ್ತು. ಅವನು ತಲೆಗೊಂದು ಚಿಂದಿಯನ್ನು ಸುತ್ತಿದ್ದನು. ಒಂದು ಲಂಗೋಟಿಯಿಂದ ಆತನ ಮರ್ಯಾದೆಯು ಸಂರಕ್ಷಿಸಲ್ಪಟ್ಟಿತ್ತು. ಇಷ್ಟರ ಹೊರತು ಆತನ ಮೈಮೇಲೆ ಬೇರೆ ವಸ್ತ್ರಗಳೇ ಇದ್ದಿಲ್ಲ. ಅವನು ಜನರನ್ನು ಮಿಕಿ ಮಿಕಿನೋಡುತ್ತಿದ್ದನು ಮಾತ್ರ; ಅವನ ಜ್ಞಾನವೆಲ್ಲ ನಷ್ಟವಾಗಿತ್ತು. ಚಳಿ-ಗಾಳಿಗಳಿಂದಲೂ, ಹೊಟ್ಟೆಗೆ ಕೂಳು ಇಲ್ಲದ್ದರಿಂದಲೂ ಅವನ ದೇಹವೆಲ್ಲ ಕೃಶವಾಗಿ ಹೋಗಿತ್ತು. ಆತನು ಚನ್ನಾಗಿ ಇದ್ದಾಗ ನೂರಾರುಜನ ಶಿಷ್ಯರು ಆತನನ್ನು ಹಿಂಬಾಲಿಸುತ್ತಿದ್ದರು. ಆದರೆ ಪ್ರಭುಕ್ಷೋಭದಿಂದ ಈ ರೀತಿಯಾಗಿ ಅವನಿಗೆ ವಿಪತ್ತು ಬರಲು ಆ ಶಿಷ್ಯರಲ್ಲಿ ಒಬ್ಬನೂ ಆತನ ಬಳಿಯಲ್ಲಿ ನಿಂತುಕೊಳ್ಳಲಿಲ್ಲ. ಎಲ್ಲರೂ ಒಂದೊಂದು ನೆವದಿಂದ ಹೊರಟು ಹೋಗಿದ್ದರು. ಇಂಥ ಹೀನಸ್ಥಿತಿಗೆ ಮುಟ್ಟಿದ ಫಕೀರನನ್ನು ನೋಡಿ, ಪ್ರಭುವಿಗೆ ಸ್ವಲ್ಪ ದಯವುಂಟಾಯಿತು. ಆತನು ಕೃಪಾದೃಷ್ಟಿಯಿಂದ ನೋಡಿದ ಕೂಡಲೆ ಫಕೀರನ ಹುಚ್ಚು ಹಾಳಾಗಿಹೋಗಿ ಅವನು ಮೊದಲಿನಂತೆ ಶುದ್ಧಿಯಮೇಲೆ ಬಂದನು. ಆದರೆ ಮೊದಲಿನಂತೆ ಉನ್ಮತ್ತಾವಸ್ಥೆಯು ಮಾತ್ರ ಆತನಲ್ಲಿ ಉಳಿಯಲಿಲ್ಲ. ಹೀಗೆ ಅವನು ಪೂರ್ವಸ್ಥಿತಿಗೆ ಬರಲು ಅವನಲ್ಲಿ ಪಶ್ಚಾತ್ತಾಪವು ಹುಟ್ಟಿತು. ಕೂಡಲೆ ಅವನು ಪ್ರಭುಚರಣಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ಕೃತಕರ್ಮಕ್ಕೆ ಕ್ಷಮೆಯನ್ನು ಬೇಡಿಕೊಂಡನು. ದಯಾಘನರಾದ ಪ್ರಭುಗಳು ಆತನನ್ನು ಸಮಾಧಾನೋಕ್ತಿಗಳಿಂದ ಸಂತುಷ್ಟಗೊಳಿಸಿದರು. ಅಂದಿನಿಂದ ಆ ಫಕೀರನು ಪ್ರಭುಗಳ ಶಿಷ್ಯಕೋಟಿಯಲ್ಲಿ ಪ್ರವಿಷ್ಟನಾಗಿ ಅವರ ನಾಮಗಾನವನ್ನು ಮಾಡತೊಡಗಿದನು.

ಈ ಮೇರೆಗೆ ಶ್ರೀ ಮಾಣಿಕಪ್ರಭುಗಳು ತಮ್ಮ ನಿಗ್ರಹಾನುಗ್ರಹಶಕ್ತಿಯನ್ನು ಪ್ರಕಟಮಾಡುತ್ತ ಆದರಿಂದ ನಿಂದಕರ ಮದವನ್ನು ಭಂಗಿಸುತ್ತ ಇರುತ್ತಿರಲು, ಅವರಿಗೆ ಪಂಢರೀಯಾತ್ರೆಗೆ ಹೋಗಬೇಕೆಂಬ ಇಚ್ಛೆಯಾಯಿತು. ಕಲಿಯುಗದಲ್ಲಿ ಪಾಂಡುರಂಗನು ಪ್ರತ್ಯಕ್ಷ ಸಗುಣರೂಪದಿಂದ ಪಂಢರಿಯಲ್ಲಿ ವಾಸಮಾಡಿರುವನೆಂಬದನ್ನೂ ಸಜ್ಜನರಿಗೂ ಪಾಂಡುರಂಗನಿಗೂ ಭೇದವಿಲ್ಲೆಂಬದನ್ನೂ ಲೀಲಾಮಾತ್ರದಿಂದ ಜಗತ್ತಿಗೆ ತೋರಿಸಬೇಕೆಂಬ ವಿಚಾರವು ಅವರಲ್ಲಿ ಹುಟ್ಟಿತು. ಆ ಇಚ್ಛಾಗಾಮಿಗಳಾದ ಅವರಿಗೆ ಈ ಕೆಲಸವನ್ನು ನೆರವೇರಿಸಲು ಕೊಂಚವೂ ವಿಲಂಬವಾಗಲಿಲ್ಲ. ಅವರು ಸಂಗಡ ವೆಂಕಮ್ಮನನ್ನು ಕರೆದುಕೊಂಡು ಮನೋವೇಗದಿಂದ ಪಂಢರಿಯನ್ನು ಪ್ರವೇಶಮಾಡಿದರು. ಪ್ರಭುಗಳು ಪಂಢರಿಯನ್ನು ಪ್ರವೇಶಮಾಡಿದಾಗ ಬೆಳಗಿನ ನಾಲ್ಕುಗಂಟೆಯಾಗಿತ್ತು. ಪಾಂಡುರಂಗನ ಗುಡಿಯಲ್ಲಿ ಅರ್ಚಕರು ಕಾಕಡಾರತಿಯನ್ನು ಪ್ರಾರಂಭಿಸಿದ್ದರು. ನಗಾರಿ ಹಾಗು ಸನಾದಿಗಳ ಮಂಜುಳಧ್ವನಿಯು ಕರ್ಣಾನಂದಕರವಾಗಿತ್ತು. ಸಾವಿರಾರು ಜನ ಪ್ರೇಕ್ಷಕರು ಬಹುದಟ್ಟವಾಗಿ ನಿಂತುಕೊಂಡಿದ್ದರು. ಇಂಥ ಸಮಯದಲ್ಲಿ ಪ್ರಭುಗಳು ಗುಡಿಯನ್ನು ಹೊಕ್ಕರು. ಅವರು ಅಲ್ಲಿಯೇ ಮುಂದುಗಡೆಯಲ್ಲಿ ವೆಂಕಮ್ಮನಿಗೆ ನಿಲ್ಲಹೇಳಿ, ತಾವು ಈಗ ಬರುತ್ತೇವೆಂದು ಎಲ್ಲಿಯೋ ನಡೆದುಬಿಟ್ಟರು.

ಇತ್ತ ಗರ್ಭಗುಡಿಯ ಬಾಗಿಲ ಬಳಿಯಲ್ಲಿ ಕಾಕಡಾರತಿಯು ಭರಕ್ಕೆ ಬಂದಿತ್ತು. ಪದಗಳನ್ನೂ ಸ್ತೋತ್ರಗಳನ್ನೂ ಅನ್ನುವದರಲ್ಲಿ ಜನರು ತಲ್ಲೀನರಾಗಿದ್ದರು. ಅಷ್ಟರಲ್ಲಿ ಒಬ್ಬ ಹುಚ್ಚನು ಗುಡಿಯನ್ನು ಪ್ರವೇಶಮಾಡಿದನು. ಆತನು ಅತ್ಯಂತ ಕಶ್ಮಲನಾಗಿದ್ದನು. ಅವನ ಮೈಮೇಲೆ ಗೋಮಾತೆಯ ಹಸೀ ಚರ್ಮದ ಆಚ್ಛಾದನವಿತ್ತು. ಅದು ದಶದಿಕ್ಕುಗಳಲ್ಲಿ ದುರ್ಗಂಧವನ್ನು ಬೀರುತ್ತಿತ್ತು. ಕಾವಲುಗಾರರು ಅವನಿಗೆ ಹಚ್ಯಾಹುಚ್ಯಾ ಮಾಡಿದರು. ಆದರೂ ಆ ಹುಚ್ಚನು ಅದನ್ನು ಲೆಕ್ಕಿಸದೆ ಮುಂದಕ್ಕೆ ಹೆಜ್ಜೆಯನ್ನಿಕ್ಕುತ್ತ ಮಧ್ಯಗುಡಿಯವರೆಗೆ ಬಂದನು. ಗುಡಿಯಲ್ಲಿದ್ದ ಬೇರೆಜನರು ಅವನ ದುರ್ಗಂಧಕ್ಕೆ ಹೇಸಿ ಮೂಗು ಮುಚ್ಚಿಕೊಂಡು ದೂರಸರಿದು ನಿಂತರು. ಅವನನ್ನು ಪ್ರತಿಬಂಧಿಸುವದು ಯಾರಿಂದಲೂ ಸಾಧ್ಯವಾಗದೇ ಹೋಯಿತು. ಇದನ್ನೆಲ್ಲ ಕಣ್ಣುಮುಟ್ಟನೋಡಿದ ಪೂಜಾರಿಯು ಸಂತಪ್ತನಾದನು; ಯಾವನೋ ಒಬ್ಬ ಚಾಂಡಾಲನು ಗುಡಿಯನ್ನು ಹೊಕ್ಕು ದೇವರನ್ನು ಭ್ರಷ್ಟಗೊಳಿಸಬೇಕೆಂದು ಮಾಡಿರುವನೆಂದು ಬಗೆದು ಕೈಯೊಳಗೆ ದೊಡ್ಡದೊಂದು ಡೊಣ್ಣೆಯನ್ನು ತಕ್ಕೊಂಡು ಬಂದು ಆ ಹುಚ್ಚನನ್ನು ಒಳಿತಾಗಿ ಥಳಿಸಿದನು. ಚಮತ್ಕಾರವೇನಂದರೆ ಪೂಜಾರಿಯು

ಹುಚ್ಚನನ್ನು ಹೊಡೆ ಹೊಡೆದಂತೆ ಗರ್ಭಗುಡಿಯಲ್ಲಿದ್ದ ಪಾಂಡುರಂಗನು ನಡುಗಹತ್ತಿದನು. ಆ ಪಾಷಾಣಮೂರ್ತಿಯ ಮೈಮೇಲೆ ಬಾಸಾಳಗಳು ಸ್ಪಷ್ಟವಾಗಿ ಕಾಣತೊಡಗಿದವು. ಇದನ್ನು ಕಂಡು ಕಾಕಡಾರತಿಯನ್ನು ಮಾಡುವ ಪೂಜಾರಿಯು ಬೆದರಿದನು. ಹೊರಗೆ ಹುಚ್ಚನ ವೇಷದಿಂದ ಬಂದವನು ನಿಜವಾದ ಹುಚ್ಚನಿರದೆ ಯಾವನೋ ಒಬ್ಬ ಮಹಾತ್ಮನಿರುವನೆಂದು ತರ್ಕಿಸಿದನು. ವಿಚಾರಾಂತ್ಯದಲ್ಲಿ ತನ್ನ ತರ್ಕವು ಸರಿಯಾದದ್ದೆಂದು ನಂಬಿ ಆ ಪೂಜಾರಿಯು ಆರತಿಯನ್ನು ಕೆಳಗಿಳಿಸಿ ಓಡಿ ಬಂದು ಆ ಹುಚ್ಚನ ಚರಣಗಳನ್ನು ಗಟ್ಟಿಯಾಗಿ ಹಿಡಿದುಕೊಂಡನು. ತಮ್ಮನ್ನು ಒಬ್ಬನಾದರೂ ಗುರ್ತಿಸಿದನೆಂದು ತಿಳಿದು ಪ್ರಭುಗಳು ತಾತ್ಕಾಲದಲ್ಲಿ ಹುಚ್ಚವೇಷವನ್ನು ನೀಗಲಾಡಿ ನಿಜರೂಪವನ್ನು ಪ್ರಕಟಿಸಿದರು. ಆಗ ಕೂಡಿದ ಆ ಪರಿಶಿಯಲ್ಲಿ ಎಷ್ಟೋ ಜನರು ಪ್ರಭುಗಳ ಗುರುತು ಹಿಡಿದರು. ಅವರನ್ನು ಹೊಡೆದ ಪೂಜಾರಿಯು ಗದಗದನೆ ನಡುಗಲಾರಂಭಿಸಿದನು. ಬಳಿಕ ಪ್ರಭುಗಳು ಅವನನ್ನು ಸಮಾಧಾನಗೊಳಿಸಿ ಗರ್ಭಗುಡಿಯನ್ನು ಹೊಕ್ಕು ಪಾಂಡುರಂಗನಿಗೆ ಆಲಿಂಗನವನ್ನು ಕೊಟ್ಟರು. ಒಂದು ಗಳಿಗೆ ಕಾಲದವರೆಗೆ ಪ್ರಭುಗಳು ಪಾಂಡುರಂಗನನ್ನು ಆಲಿಂಗಿಸಿದ್ದರು. ಪ್ರಭುಗಳೂ ಹಾಗು ಪಾಂಡುರಂಗನೂ ಚನ್ನಾಗಿ ಬೆವೆತರು. ಇಬ್ಬರು ಮನುಷ್ಯರು ಒಬ್ಬರನ್ನೊಬ್ಬರು ಬಹಳ ಹೊತ್ತಿನವರೆಗೆ ಆಲಿಂಗಿಸಿದರೆ ಉಷ್ಣತೆಯಿಂದ ಹ್ಯಾಗೆ ಅವರಿಬ್ಬರಲ್ಲಿ ಬೆವರು ಬರುವದೋ ಹಾಗೆ ಕಲ್ಲಿನವಿಗ್ರಹಕ್ಕೂ ಮನುಷ್ಯ ದೇಹಕ್ಕೂ ಆದ ಆಲಿಂಗನದಲ್ಲಿ ಬೆವರು ಬಂದಿತು. ಅದನ್ನು ಕಂಡು ಪೂಜಾರಿಗಳು ಪಾಂಡುರಂಗನು ಪಾಷಾಣಮೂರ್ತಿಯಾಗಿರದೆ ಪ್ರತ್ಯಕ್ಷ ಸಗುಣಮೂರ್ತಿಯಿರುವನೆಂದೂ ಪ್ರಭುಗಳಲ್ಲಿಯೂ ಪಾಂಡುರಂಗನಲ್ಲಿಯೂ ಭೇದವಿಲ್ಲೆಂದೂ ನೆರೆದಜನರಿಗೆಹೇಳಿದರು.

ಅನಂತರ ಜನರು ಪ್ರಭುಗಳ ಜಯ ಜಯಕಾರವನ್ನು ಮಾಡುತ್ತಿರಲು, ಸೂರ್ಯೋದಯವಾಗಿ ಸುತ್ತಲೂ ಹೂಬಿಸಿಲು ಬಿದ್ದಿತು. ಪೂಜಾರಿಗಳು ಪ್ರಭುಗಳನ್ನು ತಮ್ಮಲ್ಲಿಗೇ ಭೋಜನಕ್ಕೆ ಬರಬೇಕೆಂದು ಕೇಳಿಕೊಳ್ಳತೊಡಗಿದರು. ಅದಕ್ಕೆ ಪ್ರಭುಗಳು ಪ್ರತ್ಯುತ್ತರವನ್ನು ಕೊಡದೆ ಚಂದ್ರಭಾಗಾತೀರಕ್ಕೆ ಹೋಗಿಬರೋಣವೆಂದು ಪೂಜಾರಿಗಳೊಡನೆ ನಡೆದರು. ಅವರು ಆ ನದೀತೀರಕ್ಕೆ ಹೋಗುವಷ್ಟರಲ್ಲಿ ಬೇದರದ ದೇಶಮುಖರು ತಮ್ಮ ಸರಂಜಾಮುದೊಡನೆ ಅದೇ ಬಂದು ಅಲ್ಲಿ ಇಳಿದಿದ್ದರು. ಅವರು ಪ್ರಭುಗಳ ಶೋಧಕ್ಕಾಗಿ ತಮ್ಮ ಜನರನ್ನು ಕಳಿಸಿದ್ದರು. ಅಷ್ಟರಲ್ಲಿ ಪ್ರಭುಗಳೇ ಅಕಸ್ಮಾತ್ತಾಗಿ ಬಂದದ್ದರಿಂದ ಅವರು ತುಂಬಾ ಸಂತೋಷಪಟ್ಟು ಪ್ರಭುಗಳನ್ನೂ ಪೂಜಾರಿಗಳನ್ನೂ ಉತ್ಸವದಿಂದ ತಮ್ಮಲ್ಲಿಗೆ ಕರೆದುಕೊಂಡುಹೋ

ದರು. ಮುಂದೆ ದೇಶಮುಖರ ಆಮಂತ್ರಣವಿರುವದೆಂದೇ ಬೆಳಿಗ್ಗೆ ಪ್ರಭುಗಳು ನಮ್ಮ ಆಮಂತ್ರಣಕ್ಕೆ ಒಪ್ಪಿಕೊಳ್ಳಲಿಲ್ಲವೆಂದು ಪೂಜಾರಿಗಳು ಮನಸ್ಸಿನಲ್ಲಿ ಗುರ್ತುಮಾಡಿಕೊಂಡರು.

## ೧೨ನೆಯ ಪ್ರಕರಣ.

### ಸನ್ಮಾರ್ಗ ದರ್ಶನ.

ಹಿಂದಿನ ಪ್ರಕರಣದಲ್ಲಿ ಹೇಳಿದಂತೆ ಪ್ರಭುಗಳು ಪಂಢರಿಯಲ್ಲಿ ಲೀಲೆಗಳನ್ನು ತೋರಿಸಿ ತಾಯಿ ಹಾಗು ಅಣ್ಣಂದಿರ ದರ್ಶನಕ್ಕಾಗಿ ಕಲ್ಯಾಣಕ್ಕೆಬಂದರು. ಅವರು ಮೊದಲು ತಾಯಿಯನ್ನು ನಮಸ್ಕರಿಸಿ ಅಣ್ಣಂದಿರಿದ್ದ ಕೋಣೆಯನ್ನು ಹೊಕ್ಕರು. ಮೂರು ದಿವಸಗಳವರೆಗೆ ಹೊರಗೆ ಬರಲಿಲ್ಲ. ಶೌಚ-ಮುಖಮಾರ್ಜನಾದಿ ಕಾರ್ಯಗಳಿಗೆ ಸಹ ಅವರು ಹೊರಗೆ ಬಾರದ್ದನ್ನು ನೋಡಿ ಜನರಿಗೆ ಆಶ್ಚರ್ಯವಾಯಿತು. ಅಣ್ಣಂದಿರಾದ ದಾದಾಸಾಹೇಬರಂತೂ ಸದಾಬ್ರಹ್ಮಾನಂದದಲ್ಲಿ ಮಗ್ನರಾಗಿರುತ್ತಿದ್ದರು. ಅವರಿಬ್ಬರು ಆ ಏಕಾಂತವಾಸದಲ್ಲಿ ಏನು ಮಾತಾಡಿದರೆಂಬದು ಅನ್ಯರಿಗೆ ತಿಳಿಯುವಹಾಗಿದ್ದಿಲ್ಲ. ನಾಲ್ಕನೆಯ ದಿವಸ ಪ್ರಭುಗಳೊಬ್ಬರು ಹೊರಗೆ ಬಂದರು. ಮುಂದೆ ಸ್ವಲ್ಪ ದಿವಸಗಳಲ್ಲಿ ತಾತ್ಯಾಸಾಹೇಬನ ಹೆಂಡತಿಯು ಗಂಡುಮಗುವನ್ನು ಹೆತ್ತಳು. ಈ ಪುತ್ರೋತ್ಸವವು ಹದಿನೈದು ದಿವಸಗಳವರೆಗೆ ಸಾಗಿತು. ಆಗ ಒಂದು ದಿನ ಪ್ರಭುಗಳು ತಮ್ಮನನ್ನು ಕರೆದು,—ತಾತ್ಯಾ, ನೀನು ಲಗ್ನಮಾಡಿಕೊಂಡು ವಂಶರಕ್ಷಣಕ್ಕಾಗಿ ಪುತ್ರನನ್ನು ಹೊಂದಿದೆ. ಇನ್ನು ನಿನ್ನ ಪಿತೃಋಣವು ವಿಮೋಚನೆಯಾದಂತಾಯಿತು. ಮನುಷ್ಯನಿಗೆ ಇರತಕ್ಕ ನಾಲ್ಕು ಋಣಗಳಲ್ಲಿ ಈ ಪಿತೃಋಣವು ಬಹಳ ಘನವಾದದ್ದು. ಅದು ಈಗ ನಿನ್ನಿಂದ ತೀರಿದ ಹಾಗಾಯಿತು. ಉಳಿದ ಮೂರು ಋಣಗಳಂತೂ ಈ ಮೊದಲೇ ನಿನ್ನಿಂದ ತೀರಿಸಲ್ಪಟ್ಟಿವೆ. ಆದ್ದರಿಂದ ನೀನು ಇನ್ನುಮುಂದೆ ಮೋಹಾಡಂಬರದಲ್ಲಿ ಸಿಕ್ಕು ಭ್ರಾಂತಿಗೀಡಾಗಬೇಡ; ಅಣ್ಣಂದಿರು ಸಾಧುಗಳಿರುವರೆಂದು ದೊಡ್ಡಿಸ್ತನಕ್ಕೆ ಬೀಳಬೇಡ; ಮತ್ತು ಅವರ ಹೆಸರಿನಿಂದ ಬರುವ ಕಾಣಿಕೆಗಳನ್ನು ಸ್ವೀಕರಿಸಿ ವೈಭವವನ್ನು ಹೆಚ್ಚಿಸಿಕೊಳ್ಳುವ ಆಶೆಗೆ ಬೀಳಬೇಡ. ಯಾವ ಕಾರ್ಯವ ಮಾಡಿದರೂ ಆಶೆಯಿಲ್ಲದೆ ಮಾಡಬೇಕು. ಇದೇ ಬ್ರಹ್ಮ

ತ್ವದ ಮುಖ್ಯ ಲಕ್ಷಣವು ಎಂದು ನುಡಿದು ಆತನಿಗೆ ಜ್ಞಾನೋಪದೇಶಮಾಡಿ ವರದ ಹಸ್ತವನ್ನು ತಲೆಯಮೇಲಿಟ್ಟರು. ಆದರಿಂದ ಆತನಿಗೆ ತತ್‍ಕ್ಷಣದಲ್ಲಿ ಯೋಗಸಮಾಧಿಯು ಹತ್ತಿತು. ಮುಂದೆ ತಾತ್ಯಾಸಾಹೇಬನು ಪ್ರಭುಗಳು ಉಪದೇಶಮಾಡಿದಂತೆ ಸಂಸಾರದಲ್ಲಿದ್ದು ಮೋಕ್ಷವನ್ನು ಸಾಧಿಸಿಕೊಂಡನು. ಇದೇ ಮೇರೆಗೆ ಪ್ರಭುಗಳು ತಮ್ಮ ತಾಯಿಗೆ ಆತ್ಮಾನುಭವವನ್ನು ತಂದುಕೊಟ್ಟು ಆಕೆಯ ದೇಹಬುದ್ಧಿಯನ್ನು ನಾಶಗೊಳಿಸಿದರು.

ಈ ರೀತಿಯಾಗಿ ಪ್ರಭುಗಳು ತಮ್ಮನಿಗೂ ತಾಯಿಗೂ ಬ್ರಹ್ಮಾನುಭವವನ್ನುಂಟುಮಾಡಿ ಕೆಲವು ದಿನಗಳವರೆಗೆ ಅಲ್ಲಿಯೇ ಇರುತ್ತಿರಲು, ಒಬ್ಬ ಗೃಹಸ್ಥನು ಸಂಗಡ ತನ್ನ ಕುಟುಂಬದ ಜನರನ್ನೂ ಬೇರೆ ನಾಲ್ಕೆಂಟು ಕುಟುಂಬಗಳ ಜನರನ್ನೂ ಕರಕೊಂಡು ಪ್ರಭುದರ್ಶನಕ್ಕೆಂದು ಹೊರಟು ಹುಮನಾಬಾದಕ್ಕೂ ಗಡವಂತಿ ಎಂಬ ಗ್ರಾಮಕ್ಕೂ ಮಧ್ಯದಲ್ಲಿರುವ ಅರಣ್ಯದವರೆಗೆ ಬಂದನು. ಆ ಅರಣ್ಯವು ಬಹು ದೊಡ್ಡದಿದ್ದು ಅತ್ಯಂತ ಭಯಾನಕವಿರುವದು. ಅಲ್ಲಿ ಕಳ್ಳಕಾಕರ ಉಪದ್ರವ ಬಹಳ. ರೋಹಿಲರು-ಕಾಡುಜನರು ಅಲ್ಲಿ ವಾಸಮಾಡುತ್ತಿದ್ದು, ದಾರಿಕಾರರ ವಿತ್ತಪ್ರಾಣಗಳನ್ನು ಕೂಡಿಯೇ ಹರಣಮಾಡುತ್ತಿದ್ದರು. ಆದ್ದರಿಂದ ಅಲ್ಲಿಗೆ ಬಂದ ಪ್ರತಿಯೊಬ್ಬ ಮನುಷ್ಯನ ಇಹಲೋಕಯಾತ್ರೆಯು ಮುಗಿಯಿತೆಂತಲೇ ಭಾವಿಸಬೇಕಾಗುತ್ತಿತ್ತು. ಹೀಗಿರಲು ಮೇಲಿನ ನಮ್ಮ ದಾರಿಕಾರರು ಆ ಅಡವಿಗೆ ಬಂದು ಅಲ್ಲಿಯೊಂದು ಕಡೆಯಲ್ಲಿ ಒಂದು ಶಿವಾಲಯವೂ ಒಂದು ಸಣ್ಣ ಪುಷ್ಕರಿಣಿಯೂ ವಿಪುಲವಾದ ನೆರಳೂ ಇರುವದನ್ನು ಕಂಡು ಅಲ್ಲಿಯೇ ಇಳಿದುಕೊಂಡರು. ಪಾಪ, ಅವರಿಗೆ ಆ ಅರಣ್ಯದ ಮಾಹಾತ್ಮ್ಯವು ಗೊತ್ತಿದ್ದಿಲ್ಲ. ಹೆಣ್ಣುಮಕ್ಕಳು ನೀರನ್ನು ನೋಡಿ ಸಂಭ್ರಮಪಟ್ಟು ಬಟ್ಟೆಗಳನ್ನು ಒಗೆದು ಒಣಗಹಾಕುವ ಕೆಲಸದಲ್ಲಿ ತೊಡಗಿದರು. ಕೆಲವರು ಊಟದ ಸಾಹಿತ್ಯಗಳನ್ನು ಸಿದ್ಧಪಡಿಸತೊಡಗಿದರು. ಗಂಡಸರು ಸಂಗಡ ತಂದಿದ್ದ ಕುದುರೆಗಳ ಮೇಲಿನ ಸಾಮಾನುಗಳನ್ನು ಇಳಿಸಿ ಅವುಗಳ ಥಡಿಯನ್ನು ತೆಗೆದು ಅವಕ್ಕೆ ದಾಣಿಯನ್ನು ಕಟ್ಟುತ್ತಿದ್ದರು. ಸಣ್ಣ ಹುಡುಗರು ಟಣ-ಪುಣ ಹಾರಾಡುತ್ತ ಉಲ್ಲಾಸವನ್ನು ವ್ಯಕ್ತಪಡಿಸುತ್ತಲಿದ್ದವು. ಹೀಗೆ ಆ ಯಾತ್ರಿಕ ಪರಿವಾರದಲ್ಲಿ ಆನಂದವು ತುಂಬಿ ಹೊರಸೂಸುತ್ತಿರಲು, ಶ್ವಾಪದಗಳಂತೆ ಹೊಂಚುಹಾಕಿದ್ದ ರೋಹಿಲರದೊಂದು ಗುಂಪು ಆ ಜನರಮೇಲೆ ಬಿದ್ದಿತು. ಕಳ್ಳರು ಐವತ್ತು ಜನರಿದ್ದರು. ಅವರಲ್ಲಿ ಪ್ರತಿಯೊಬ್ಬರು ಆಯುಧಪಾಣಿಗಳಾಗಿದ್ದರು. ನಮ್ಮ ಯಾತ್ರಿಕ ಪರಿವಾರದಲ್ಲಿ ಹುಡುಗರು-ಹೆಂಗಸರು-ಗಂಡಸರು ಒಟ್ಟುಗೂಡಿ

ಶಿಂ ಜನರಾಗಬಹುದಾಗಿತ್ತು. ಕಳ್ಳರು ಬಂದವರೇ ಕೈಗೆ ಸಿಕ್ಕವರನ್ನು ಥಳಿಸ ಹತ್ತಿದರು. ಈ ಆಕಸ್ಮಿಕ ಸಂಕಟವನ್ನು ನೋಡಿ ಆ ಯಾತ್ರಿಕರೆಲ್ಲರೂ ಗಾಬರಿ ಯಾಗಿಹೋದರು. ಹೆಂಗಸರಂತೂ ಹಾಹಾರಿ ಕುಳಿತರು. ತಮ್ಮ ಪ್ರಾಣಕ್ಕಿಂತಲೂ ಪ್ರಿಯವಾದ ಮಾನವು ಹ್ಯಾಗೆ ಸುರಕ್ಷಿತವಾಗಿ ಉಳಿದೀತೆಂದು ಅವರು ಚಿಂತಿಸತೊಡಗಿದರು. ಈ ಕಾಲಕ್ಕೆ ನಮ್ಮನ್ನು ಶ್ರೀ ಮಾಣಿಕಪ್ರಭುವೇ ಸಂರಕ್ಷಿಸಬೇಕೆಂದು ಗಂಡಸರೂ ಹೆಂಗಸರೂ ಪ್ರಾರ್ಥನೆ ಮಾಡತೊಡಗಿದರು. ಹುಡುಗರಂತೂ ಕಳ್ಳರ ಹೊಡತಗಳನ್ನು ತಾಳಲಾರದೆ ಗೋಳಿಡಹತ್ತಿದವು. ಬರಬರುತ್ತ ಗಂಡಸರೂ ಹೆಂಗಸರೂ ಕಪಾಳಮೋಕ್ಷವನ್ನು ಹೊಂದಿ ಹಾಯ್, ಹಾಯ್, ಎಂದು ದುಃಖೋದ್ಗಾರಗಳನ್ನು ತೆಗೆಯಹತ್ತಿದರು. ಸ್ವಲ್ಪಹೊತ್ತಿನ ಕೆಳಗೆ ಅವರಲ್ಲಿದ್ದ ಆನಂದದ ನೂರು ಮಡಿ ದುಃಖವು ಅವರನ್ನು ಈಗ ಹೊಂದಿಕೊಂಡಿತು.

ತಮ್ಮ ದರ್ಶನಕ್ಕೆಂದು ಹೊರಟ ಭಕ್ತರ ವಿಟಂಬನೆಯು ಈ ರೀತಿಯಾಗಿ ಆಗುತ್ತಿದ್ದುದನ್ನು ಪ್ರಭುಗಳು ಜ್ಞಾನದೃಷ್ಟಿಯಿಂದ ತಿಳಿದು ಕಳವಳಗೊಂಡರು, ಮತ್ತು ಭಕ್ತರಕ್ಷಣಾರ್ಥವಾಗಿ ಒಂದು ವಿಲಕ್ಷಣ ರೂಪವನ್ನು ಧರಿಸಿಕೊಂಡು ಅಲ್ಲಿ ಪ್ರಕಟರಾದರು. ಆ ಕಾಲಕ್ಕೆ ಪ್ರಭುಗಳು ತಲೆಗೆ ಜರತಾರಿಯ ಪಾಗೋಟಿಯನ್ನು ಹಾಕಿದ್ದರು. ಕೈಗಳಲ್ಲಿ ಬಂಗಾರದ ಕಡೆಗಳನ್ನೂ ಉಂಗುರಗಳನ್ನೂ ಧರಿಸಿದ್ದರು. ಕಿವಿಯಲ್ಲಿ ಬಹು ಬೆಲೆಯುಳ್ಳ ಮುತ್ತುಗಳಿದ್ದವು. ಅವರ ಮೈಮೇಲಿನ ಬಟ್ಟೆಗಳು ಬಹು ಅಮೂಲ್ಯವಿದ್ದವು. ಒಟ್ಟಿಗೆ ಅವರು ಆಗ ದೊಡ್ಡ ಶ್ರೀಮಂತನಂತೆ ತೋರುತ್ತಿದ್ದರು. ಈ ಪ್ರಕಾರ ರೂಪಧರಿಸಿದ ಪ್ರಭುಗಳು ಆ ಶಿವಾಲಯದಲ್ಲಿ ಕುಳಿತು ಗುಡಗುಡಿಯನ್ನು ಸೇದುತ್ತಿರುವಂತೆ ಕಳ್ಳರಿಗೆ ಕಾಣಿಸಿಕೊಂಡರು. ದ್ರವ್ಯದ ಆಶೆಗಾಗಿ ಯಾತ್ರಿಕರನ್ನು ಮೈಮುರಿ ಥಳಿಸುತ್ತಿದ್ದ ಕಳ್ಳರು ಶಿವಾಲಯದಲ್ಲಿದ್ದ ಶ್ರೀಮಂತ ಗೃಹಸ್ಥನನ್ನು ಕಂಡು ಎಲ್ಲರೂ ಅಲ್ಲಿಗೆ ನಡೆದರು. ಹೀಗೆ ಒಮ್ಮಿಂದೊಮ್ಮೆ ಕಳ್ಳರೆಲ್ಲರೂ ಗುಡಿಯ ಕಡೆಗೆ ಓಡಿದ್ದಕ್ಕಾಗಿ ಯಾತ್ರಿಕರಿಗೆ ಆಶ್ಚರ್ಯವಾಯಿತು. ಸದ್ಯಕ್ಕೆ ಮೈಮೇಲೆ ಬೀಳುತ್ತಿದ್ದ ಹೊಡತಗಳು ತಪ್ಪಿದ್ದರಿಂದ ಅವರೊಂದು ಬಗೆಯಿಂದ ಸಮಾಧಾನಪಟ್ಟು ಪ್ರಭುಗಳನ್ನು ಗಟ್ಟಿಯಾಗಿ ಸ್ಮರಿಸಹತ್ತಿದರು.

ಇತ್ತ ಗುಡಿಯನ್ನು ಮುತ್ತಿದ ಕಳ್ಳರು ಒಳಗೆ ಕುಳಿತ ಶ್ರೀಮಂತನನ್ನು ಹೊಡೆಯಬೇಕೆಂದು ಕೈಗಳನ್ನು ಮೇಲಕ್ಕೆತ್ತಲು, ಅವು ಕೆಳಕ್ಕೆ ಬಗ್ಗದ ಹಾಗೆ ಅಲ್ಲಿಯೇ ಸೆಟೆದು ನಿಂತವು; ಕೆಲವರ ಕಾಲುಗಳು ಓಡಾಡಲಿಕ್ಕೆ ಬಾರದಂತಾದವು.

ಅವರ ಮುಖ್ಯನಾಯಿಕನಿಗೆ ಅಸಾಧ್ಯವಾದ ಹೊಟ್ಟೆಕಪತವು ಎದ್ದಿತು. ಈ ರೀತಿ ಪ್ರಭುಗಳು ಕಳ್ಳರಿಗೆ ಪ್ರತೀಕಾವರನ್ನು ಉಂಟುಮಾಡಿ ಒಂದು ಭಯಂಕರ ರೂಪವನ್ನು ಧರಿಸಿ ಅವರ ಅರ್ಧ-ಅರ್ಧಗಡ್ಡಮೀಶೆಗಳನ್ನು ಬೋಳಿಸಹತ್ತಿದರು. ಆಗ ನಿಶ್ಚೇತನರಾದ ಆ ಕಳ್ಳರೆಲ್ಲರು ಭಯಪಟ್ಟು ಆ ಭಯಂಕರ ಪುರುಷನನ್ನು ಕುರಿತು ದೈನ್ಯದಿಂದ ಬೇಡಿಕೊಳ್ಳಲಾರಂಭಿಸಿದರು.—ಇತಃಪರ ಕಳವು ಮಾಡಲಿಕ್ಕಿಲ್ಲೆಂದೂ ಜನರನ್ನು ಬಡಿಯಲಿಕ್ಕಿಲ್ಲವೆಂದೂ ಪ್ರತಿಜ್ಞೆಮಾಡಿದರು. ಹೊಟ್ಟೆನೋವನ್ನು ತಾಳಲಾರದೆ ಆ ನಾಯಿಕನಂತೂ ಅಂಗಲಾಚಿ ಬೇಡಿಕೊಳ್ಳಲಾರಂಭಿಸಿದನು. ಅವರ ಆ ದೈನ್ಯಾವಸ್ಥೆಯನ್ನು ನೋಡಿ ದಯಾಳುಗಳಾದ ಪ್ರಭುಗಳ ಅಂತಃಕರುಣವು ಕರಗಿತು. ಅವರು ಕೂಡಲೆ ಆ ಭಯಂಕರ ರೂಪವನ್ನು ಉಪಸಂಹರಿಸಿ ನಿಜರೂಪವನ್ನು ತಾಳಿದರು. ಆ ಕಳ್ಳರಲ್ಲಿ ಕೆಲವರು ಶ್ರೀ ಪ್ರಭುವಿನ ಗುರುತು ಬಲ್ಲವರಾಗಿದ್ದರು. ಆದ್ದರಿಂದ ಅವರೆಲ್ಲರಿಗೂ ತಮ್ಮನ್ನು ನಿರ್ಬಂಧಪಡಿಸಿದವರು ಶ್ರೀ ಮಾಣಿಕಪ್ರಭುಗಳೇ ಎಂದು ಗೊತ್ತಾಯಿತು. ಆಗ ಕೇಳುವದೇನು? ಸಮಸ್ತರೂ ಪ್ರಭುಗಳ ಮುಂದೆ ಅಡ್ಡಬಿದ್ದು ಅಪರಾಧವನ್ನು ಕ್ಷಮಿಸಬೇಕೆಂದು ಬೇಡಿಕೊಳ್ಳಹತ್ತಿದರು. ದೂರಿನಿಂದ ಕಳ್ಳರ ಈ ಎಲ್ಲ ಕೃತಿಗಳನ್ನು ನೋಡುತ್ತಿದ್ದ ಆ ಯಾತ್ರಿಕರು ವಿಸ್ಮಯಭಯಗಳಿಗೆ ಗುರಿಯಾಗಿದ್ದರು. ಮುಂದೆ ಸ್ವಲ್ಪ ಹೊತ್ತಿನಲ್ಲಿ ಅವರಿಗೆ ಕಲ್ಯಾಣಕರ ಶ್ರೀ ಮಾಣಿಕಪ್ರಭುಗಳೇ ಕಳ್ಳರ ದಂಡನೆಗೆ ದಯಮಾಡಿಸಿರುವರೆಂಬದು ಗೊತ್ತಾಯಿತು. ಆಗ ಆ ಜನರ ಸಂತೋಷಾಂಬುಧಿಗೆ ಆಳತೆಯೇ ಉಳಿಯಲಿಲ್ಲ. ಹೆಂಗಸರಂತೂ ಪ್ರಭುವನ್ನು ಬಹಳವಾಗಿ ಕೊಂಡಾಡಿದರು. ಬಳಿಕ ಎಲ್ಲರೂ ಶಿವಾಲಯಕ್ಕೆ ಹೋಗಿ ಪ್ರಭುಚರಣಗಳನ್ನು ಕಂಡು ಭಕ್ತಿಯಿಂದ ವಂದಿಸಿದರು. ಆ ಸಮಯಲ್ಲಿ ಪ್ರಭುಗಳು ಕಳ್ಳರನ್ನು ಕುರಿತು ಬಹು ಚನ್ನಾಗಿ ಉಪದೇಶಮಾಡಿದರು. ಅವರ ಉಪದೇಶದಿಂದ ಕಳ್ಳರ ದುರ್ವೃತ್ತಿಯು ಸಮೂಲ ನಷ್ಟವಾಯಿತು. ಅವರು ಪ್ರಭುವನ್ನು ಕುರಿತು— "ಮಹಾತ್ಮರೇ, ಇಂದಿನಿಂದ ದಾರಿಬಟ್ಟೆಗಳನ್ನು ಬಡಿಯುವದಿಲ್ಲ. ನಿಮ್ಮ ಉಪದೇಶದಂತೆ ಉದ್ಯೋಗಮಾಡಿ ಉಪಜೀವಿಕೆಯನ್ನು ಸಾಗಿಸಿಕೊಳ್ಳುವೆವು. ನಾವು ಒಂದು ಸಾವಿರ ಜನರಿರುವೆವು. ನಮ್ಮನ್ನು ನೀವು ಇಂದು ಸತ್ಕರ್ಮಕ್ಕೆ ಹಚ್ಚಿದ ಹಾಗಾಯಿತು. ಮಹಾತ್ಮರಾದ ನಿಮ್ಮ ದರ್ಶನದಿಂದ ನಮ್ಮ ಪಾಪಗಳೆಲ್ಲ ಪರಿಹಾರವಾದವು. ನಾವು ಇನ್ನು ಮುಂದೆ ನಿಮ್ಮ ಭಕ್ತರಾದ್ದರಿಂದ ನಿಮ್ಮ ಭಕ್ತರನ್ನು ಕಂಡರೆ ಸಹೋದರರಂತೆ ನಡಕೊಳ್ಳುವೆವು. ಇದಕ್ಕೆ ತಪ್ಪಿದರೆ

ನಮಗೆ ಸೂರ್ಯ-ಚಂದ್ರರಿರುವವರೆಗೂ ಯಮಯಾತನೆಗಳುಂಟಾಗಲಿ,'' ಎಂದು ನುಡಿದರು. ಬಳಿಕ ಪ್ರಭುಗಳು ಆ ಯಾತ್ರಿಕರಿಂದ ಅಡಿಗೆ ಮಾಡಿಸಿ ತಾವು ಉಂಡು ಎಲ್ಲರನ್ನೂ ತೃಪ್ತಪಡಿಸಿದರು. ಕಳ್ಳರೂ ಗುರುಪ್ರಸಾದವನ್ನು ಸೇವಿಸಿ ಧನ್ಯರಾದರು. ಅನಂತರ ಪ್ರಭುಗಳು ಆ ಯಾತ್ರಿಕರನ್ನು ಕಲ್ಯಾಣಕ್ಕೆ ಮುಟ್ಟಿಸುವ ಭಾರವನ್ನು ಆ ಕಳ್ಳರಿಗೇ ಒಪ್ಪಿಸಿ, ತಾವು ಅದೃಶ್ಯರಾದರು. ಇತ್ತ ಆ ಕಳ್ಳರು ಪಯಣದಮೇಲೆ ಪಯಣಮಾಡುತ್ತ ಕೆಲವು ದಿವಸಗಳ ಮೇಲೆ ಆ ಯಾತ್ರಿಕರನ್ನು ಕಲ್ಯಾಣಕ್ಕೆ ಮುಟ್ಟಿಸಿ ಗುರುಕೃಪೆಯನ್ನು ಕಾಯ್ದುಕೊಂಡರು. ಮುಂದೆ ಆ ಕಳ್ಳರು ಕೃಷಿ-ವಾಣಿಜ್ಯ ಮೊದಲಾದ ಉದ್ಯೋಗಗಳನ್ನು ಕೈಕೊಂಡು ಸನ್ಮಾರ್ಗಿಗಳಾಗಿ ಶೇಷಾಯುಷ್ಯವನ್ನು ಸುಖದಿಂದ ಕಳೆದರು.

ಈ ಮೇರೆಗೆ ಪ್ರಭುಗಳು ಆ ಪ್ರಾಂತದಲ್ಲಿ ಹಲವು ಬಗೆಯ ಅಮಾನುಷಕೃತ್ಯಗಳನ್ನು ಜನರಿಗೆ ತೋರ್ಪಡಿಸಿ ಅಡ್ಡಹಾದಿಯನ್ನು ಹಿಡಿದ ಜನರಿಗೆ ಸನ್ಮಾರ್ಗವನ್ನು ತೋರಿಸಿಕೊಟ್ಟರು. ಕುಮಾರ್ಗಿಗಳು ಬಹುತರ ಅವರ ಮುಂದೆ ಹೋಗಲಿಕ್ಕೆ ಅಂಜುತ್ತಿದ್ದರು. ಯಾಕಂದರೆ ದುರಾಚರಣೆಯೂ ದುರ್ವೃತ್ತಿಯೂ ಪ್ರಭುಗಳಿಗೆ ಕಿಂಚಿತ್ತಾದರೂ ಸರಿಬರುತ್ತಿದ್ದಿಲ್ಲ. ಅಂಥ ಜನರು ಎದುರಿಗೆ ಬಂದರೆ ಅವರನ್ನು ತಿರಸ್ಕರಿಸದೆ ಬಿಡುತ್ತಿದ್ದಿಲ್ಲ,; ಇಷ್ಟೇ ಅಲ್ಲ; ಅವರಿಗೆ ಹಲವು ಬಗೆಯಿಂದ ಸದ್ಬೋಧ ಮಾಡಿ ಅವರನ್ನು ಸನ್ಮಾರ್ಗಕ್ಕೆ ಹಚ್ಚದೆ ಬಿಡುತ್ತಿದ್ದಿಲ್ಲ. ಆದ್ದರಿಂದ ಅವರ ಕೈಯಲ್ಲಿ ಸಿಕ್ಕ ಮನುಷ್ಯನು ಸದಾಚಾರಿಯಾಗಿ ನಡೆದೇ ತೀರಬೇಕಾಗುತ್ತಿತ್ತು. ಧರ್ಮದ ಅವಹೇಲನವಾಗಿ ಅಧರ್ಮದ ಪ್ರವೃತ್ತಿಯು ಹೆಚ್ಚಿದಾಗ ಮಹಾತ್ಮರು ಹುಟ್ಟಿಬಂದು ಜನರ ಕಣ್ಣಿಗೆ ಚನ್ನಾಗಿ ಅಂಜನ ಹಚ್ಚುವರೆಂಬದು ಪ್ರಭುಗಳ ಉದಾಹರಣೆಯಿಂದ ಚನ್ನಾಗಿ ಸಿದ್ಧವಾಯಿತು. ಇಂಥ ಮಹಾತ್ಮರ ತಪಃಪ್ರಭಾವವೇ ಇದು ವರೆಗೂ ಭರತಭೂಮಿಯಲ್ಲಿ ಧರ್ಮವನ್ನು ಕಾಯ್ದಿರುವದೆಂದು ಹೇಳಬಹುದು.

# ೧೩ ನೆಯ ಪ್ರಕರಣ

## ಮಾಣಿಕ ಪುರ ನಿರ್ಮಾಣ.

ಈ ರೀತಿಯಾಗಿ ಪ್ರಭುಗಳು ಅನ್ಯರಿಗೆ ಸನ್ಮಾರ್ಗವನ್ನು ಬೋಧಿಸುತ್ತ ಪ್ರಸಂಗವಶಾತ್ ಅವರನ್ನು ದಂಡಿಸಿ ಹಾದಿಗೆ ತರುತ್ತ ಇರುತ್ತಿರಲು ಅವರ ಕೀರ್ತಿಯು ದಿಗಂತವಾಗಿ ಪಸರಿಸಿತು. ಸಣ್ಣವರೂ ದೊಡ್ಡವರೂ ಅವರನ್ನು ಆತುರದಿಂದ ಕಾಣತೊಡಗಿದರು. “ ಇದು ಕಲಿಯುಗವು; ವಿಶೇಷವಾಗಿ ಪ್ರಕಟವಾದರೆ, ಜನರು ಹರಕೊಂಡು ತಿನ್ನುವರು” ಎಂದು ಪ್ರಭುಗಳು ಅನ್ನುತ್ತಿದ್ದ ಮಾತು ವ್ಯಕ್ತವಾಗತೊಡಗಿತು. ಸಕ್ಕರೆಯ ಕರಣಿಯನ್ನು ಇರುವೆಗಳು ಹ್ಯಾಗೆ ಮುತ್ತುವವೋ ಹಾಗೆ ಅವರನ್ನು ಕಾಮುಕ ಜನರು ಮುತ್ತಿದರು. ಇಂಥ ಈ ಪ್ರಚಂಡ ಜನ ಸಮುದಾಯದಲ್ಲಿ ಇಷ್ಟು ದಿವಸಗಳಲ್ಲಿ ಒಬ್ಬನಾದರೂ ಅಧ್ಯಾತ್ಮಿಕ ವೈಭವವನ್ನು ಅಪೇಕ್ಷಿಸುವವನು ಹುಟ್ಟಲಿಲ್ಲವೆಂದು ಪ್ರಭುಗಳಿಗೆ ವ್ಯಸನವಾಯಿತು. ಅವರು ಒಂದು ದಿನ ಮನಸಿನಲ್ಲಿ ಏನೋ ಒಂದು ಸಂಗತಿಯನ್ನು ಯೋಚಿಸಿ, ತಾವಿದ್ದ ಗ್ರಾಮತ್ಯಾಗವನ್ನು ಮಾಡಿ ಗಡವಂತಿಗೆಗೂ ಹುಮನಾಬಾದಕ್ಕೂ ನಡುವೆ ಇರುವ ಅರಣ್ಯದಲ್ಲಿ ಪ್ರವೇಶಮಾಡಿದರು. ಮತ್ತು ಅಲ್ಲಿಯೊಂದು ಮುರುಕ ಶಿವಾಲಯವನ್ನು ನೋಡಿ ವಸತಿಯನ್ನು ಮಾಡಿದರು. ಈ ಸಂಗತಿಯು ಜನರಿಗೆ ಹ್ಯಾಗೆ ಗೊತ್ತಾಯಿತೋ ತಿಳಿಯದು! ಅವರು ಪ್ರಭುವನ್ನು ಹುಡುಕುತ್ತ ಆ ಮುರುಕ ಶಿವಾಲಯಕ್ಕೇ ಬಂದರು. ಹೀಗೆ ತಾವಿದ್ದಲ್ಲಿಗೇ ಜನರು ಬಂದು ಗಂಟು ಬಿದ್ದದರಿಂದ ಕೇವಲ ಲೋಕಹಿತಾರ್ಥವಾಗಿಯೇ ಅವತರಿಸಿದ ಆ ಪ್ರಭುಗಳು ಮತ್ತೆ ವಾತ್ಸಲ್ಯದಿಂದ ಅವರನ್ನು ಕಾಣಬೇಕಾಯಿತು.

ಆ ಶಿವಾಲಯದ ಬಳಿಯಲ್ಲಿ ಒಂದು ಬಿಲ್ವವೃಕ್ಷವಿತ್ತು. ಪ್ರಭುಗಳು ಪ್ರತಿನಿತ್ಯ ಹಗಲು ರಾತ್ರಿಗಳನ್ನು ಆ ಗಿಡದಡಿಯಲ್ಲಿಯೇ ಕಳೆಯುತೊಡಗಿದರು. ಭಕ್ತಮಂಡಲಿಯು ಕೂಡಿದ ಹಾಗೆ ಯಾರು ಸೀದಾ–ಸಾಮುಗ್ರಿಗಳನ್ನು ತಂದರು; ಯಾರು ಪಾತ್ರೆಗಳನ್ನು ತಂದರು, ನಿತ್ಯ ಸಂತರ್ಪಣೆಯು ನಡೆಯಿತು. ಭಾವಿಕರು ಪ್ರಭುಗಳ ಅಪ್ಪಣೆಯಂತೆ ಶಿವಾಲಯದ ಜೀರ್ಣೋದ್ಧಾರವನ್ನು ಮಾಡಿದರು. ಬಳಿಕ ಈಶ್ವರ ಪ್ರೀತ್ಯರ್ಥವಾಗಿ ರುದ್ರಾನುಷ್ಠಾನವು ನಡೆಯಿತು. ಅನ್ನ ಛತ್ರವಂತೂ ಮುಕ್ತದ್ವಾರವಾಯಿತು. ಈ ರೀತಿ ಭೂತಸಂತೃಪ್ತಿಯು ಆಗುವದರಿಂದ ಈ ಸ್ಥಾ

ನದ ಮಹಿಮೆಯು ಏನಿರುವದೋ ಎಂದು ಜನರು ಆಶ್ಚರ್ಯಪಡಲಾರಂಭಿಸಿದರು.

ಈ ಮೇರೆಗೆ ಎಷ್ಟೋ ತಿಂಗಳುಗಳ ವರೆಗೆ ಆ ಅರಣ್ಯದಲ್ಲಿ ಪ್ರಭುಗಳ ನಿಶ್ಯೋತ್ಸವವು ನಡೆಯಲು ಈ ಸುದ್ದಿಯು ಕಲ್ಯಾಣಕ್ಕೆ ಹತ್ತಿತು. ಆ ಕೂಡಲೆ ತಾತ್ಯಾಸಾಹೇಬ ಹಾಗೂ ಪ್ರಭುಗಳ ಮಾತೃಶ್ರೀಯವರೂ ಅಲ್ಲಿಗೆ ದಯಮಾಡಿಸಿದರು. ಮುಂದೆ ಮಳೆಗಾಲವು ಸಮೀಪಿಸಿದ್ದರಿಂದ ಇಷ್ಟು ಜನರು ಈ ಅರಣ್ಯದಲ್ಲಿ ಹ್ಯಾಗೆ ಕಾಲಹರಣ ಮಾಡಬೇಕೆಂಬ ಚಿಂತೆಯು ಸರ್ವರಿಗೂ ಉತ್ಪನ್ನವಾಯಿತು. ಯಾಕಂದರೆ, ಪ್ರಭುಗಳು ಬಯಲಲ್ಲಿ; ಕೂಡಿದ ಪರಿಸಿಯು ಬೈಲಲ್ಲಿ; ಅಡಿಗೆ-ಊಟಗಳು ಬೈಲಲ್ಲಿ; ಕೂಡ್ರುವದು-ನಿಲ್ಲುವದು ಸಹ ವೃಕ್ಷಗಳ ಬುಡದಲ್ಲಿ; ಅಂದಬಳಿಕ ಮಳೆ ಬಂದರೆ ಹ್ಯಾಗೆ ಮಾಡಬೇಕೆಂಬ ಪ್ರಶ್ನೆಯು ದೇಹದೃಷ್ಟಿಯ ಪ್ರತಿಯೊಬ್ಬನಲ್ಲಿ ಹುಟ್ಟಿಯೇ ತೀರುವದು ಸ್ವಾಭಾವಿಕವಾಗಿದೆ. ಆದರೆ ಈ ಸಂಗತಿಯನ್ನು ಪ್ರಭುಗಳ ಮುಂದೆ ಹೇಳಲಿಕ್ಕೆ ಯಾರಿಗೂ ಧೈರ್ಯವಿರಲಿಲ್ಲ. ಅವರು ಈ ವಿಚಾರಣೆಗೋಸ್ಕರ ತಾತ್ಯಾಸಾಹೇಬನನ್ನು ಮುಂದೆ ಮಾಡಿದರು. ಆತನು ಒಂದು ದಿವಸ ಪ್ರಭುಗಳು ಏಕಾಂತವಾಗಿದ್ದ ಸಮಯವನ್ನು ಸಾಧಿಸಿ, ನುಡಿದನೇನಂದರೆ "ಪ್ರಭೂ, ಇಷ್ಟು ದಿವಸ ಮಳೆಗಾಲವಿಲ್ಲದ್ದರಿಂದ ಕೂಡಿದ ಜನರ ನಿರ್ವಾಹವು ಈ ಬೈಲಲ್ಲಿಯೇ ಆಗಿ ಹೋಯಿತು. ಇನ್ನು ಮುಂದೆ ಹ್ಯಾಗೆ? ಒಂದು ಮಳೆ ಹೊಡೆದರೆ ಜನರು ನಡುಗಿ ಹೋಗುವರು. ಪ್ರಭುವಿಗೂ ಬೆಚ್ಚಗಿನ ಸ್ಥಳವಿಲ್ಲ!"

ತಾತ್ಯಾಸಾಹೇಬನ ಈ ಮಾತುಗಳನ್ನು ಕೇಳಿ ಪ್ರಭುಗಳು ಯಾವ ಉತ್ತರವನ್ನೂ ಕೊಡಲಿಲ್ಲ. ಆತನು ಬಹಳವಾಗಿ ಪ್ರಾರ್ಥಿಸಿದ್ದರಿಂದ ಕೊನೆಗೆ ಅವರು ಮೌನವನ್ನು ತ್ಯಜಿಸಿ, ತಾತ್ಯಾ, ಹಾಗಾದರೆ ಏನು ಮಾಡಬೇಕೆನ್ನುತ್ತೀ, ಎಂದರು. ಅವನು ಅಂಜುತ್ತಂಜುತ್ತ ಪ್ರಭುವಿಗೆ ವಾಸಕ್ಕಾಗಿ ಇಮಾರತನ್ನು ಕಟ್ಟಿಸಬೇಕೆನ್ನುತ್ತೇನೆ, ಎಂದನು. ಅದಕ್ಕೆ ಪ್ರಭುಗಳು ಪ್ರತ್ಯುತ್ತರವಾಗಿ— ನಮಗೆ ಇರಲಿಕ್ಕೆ ಇಮಾರತು ಬೇಡ; ಒಂದು ಹುಲ್ಲು ಗುಡಿಸಲವಾದರೆ ಸಾಕು; ಸುಮ್ಮನೆ ಇಮಾರತಿಗೆ ಯಾಕೆ ದುಡ್ಡು ಹಾಳುಮಾಡುತ್ತೀ; ಎಂದು ಹೇಳಿದರು. ಹುಲ್ಲು ಗುಡಿಸಲಕ್ಕೆ ಪರವಾನಿಗೆಯು ಸಿಕ್ಕದ್ದೊಂದೇ ತಡ; ತಾತ್ಯಾಸಾಹೇಬನು ಸುಂದರವಾದ ಮನೆಯನ್ನು ಕಟ್ಟಿಸಿ, ಅದರ ಮೇಲೆ ದುಮ್ಮಜಲು ಮಾಡಿ, ಅದಕ್ಕೆ ಹುಲ್ಲಿನ ಹೊಚ್ಚಿಗೆಯನ್ನು ಮಾಡಿಸಿದನು. ತಾತ್ಯಾಸಾಹೇಬನು ಈ ಹಂಚಿಕೆ ಮಾಡಿದ್ದನ್ನು ನೋಡಿ ಪ್ರಭುಗಳು ನಕ್ಕರು. ಬಳಿಕ ಭಕ್ತಮಂಡಲಿಯು ಸಲುವಾಗಿ ಏನು ಮಾಡಬೇಕೆಂದು ತಾತ್ಯಾಸಾಹೇಬನು ಯೋಚಿಸುತ್ತಿರಲು ಕುಷ್ಟರೋಗಿಯಾದ ಒಬ್ಬ

ಗೋಸಾವಿಯು ಪ್ರಭುಗಳನ್ನು ಹುಡುಕುತ್ತ ಬಂದನು. ಆತನು ತನ್ನ ಆಪನ್ನಿವಾರಣಕ್ಕಾಗಿ ಪ್ರಾರ್ಥಿಸಲು ಪ್ರಭುಗಳು ಆತನನ್ನು ಕುರಿತು ನುಡಿದರೇನಂದರೆ,—"ಗೋಸಾವೀ, ನಿನಗೆ ಹಿತವಾಗಬೇಕೆಂದು ಇಚ್ಛಿಸುತ್ತಿದ್ದರೆ ಈ ನಮ್ಮ ಸಾವಿರಾರು ಜನ ಭಕ್ತರಿಗೆ ಸಾಕಾಗುವಷ್ಟು ಈ ಸ್ಥಳದಲ್ಲಿ ಗುಡಿಸಲುಗಳನ್ನು ಕಟ್ಟಿಸು. ನಿನ್ನ ದಾತೃತ್ವ ಬುದ್ಧಿಯಿಂದ ಈ ಸಂಸಾರಿಕರನ್ನು ಸಂತೋಷಗೊಳಿಸಿದೆಯೆಂದರೆ, ನಿನ್ನ ರೋಗವು ಹೇಳಹೆಸರಿಲ್ಲದೆ ಹೋಗುವದು."

ತೂಕಡಿಸುವವನಿಗೆ ಹಾಸಿಗೆ ಹಾಸಿ ಕೊಟ್ಟ ಹಾಗಾಯಿತು. ಗೋಸಾವಿಯು ಕೋಟ್ಯಾಧೀಶನಿದ್ದನು. ಇಂದಿನ ವರೆಗೆ ನೀರಿನಂತೆ ದ್ರವ್ಯವನ್ನು ವೆಚ್ಚಮಾಡಿದ್ದರೂ ಅವನ ರೋಗವು ಪರಿಹಾರವಾಗಿದ್ದಿಲ್ಲ. ಆ ರೋಗದ ಪ್ರಾಬಲ್ಯದಿಂದ ಎಷ್ಟು ವೈಭವವಿದ್ದರೂ ಅದೆಲ್ಲ ಅವನಿಗೆ ವ್ಯರ್ಥವಾಗಿತ್ತು. ದೇಹವೇ ರೋಗಗ್ರಸ್ತವಾದ ಬಳಿಕ ಅವನಿಗೆ ಐಶ್ವರ್ಯದಿಂದ ಸುಖವಾದರೂ ಹ್ಯಾಗೆ ದೊರೆಯಬೇಕು? ಆದ್ದರಿಂದಲೇ ಆತನು ಪ್ರಭುಗಳ ಕೀರ್ತಿಯನ್ನು ಕೇಳಿ ಅವರಿಗೆ ಶರಣು ಬಂದಿದ್ದನು. ಬಂದ ಕೂಡಲೆ ತನ್ನ ಮೇಲೆ ಗುರುಗಳ ಕೃಪೆಯಾದದ್ದನ್ನು ನೋಡಿ ಅವನು ತಾನು ಧನ್ಯನಾದೆನೆಂದು ತಿಳಿದು ಪ್ರಭುಗಳ ಹೇಳಿಕೆಯಂತೆ ಅವರ ಭಕ್ತಮಂಡಲಿಗೆ ಸಾಲುವಷ್ಟು ಗುಡಿಸಲುಗಳನ್ನು ಹಾಕಿಸಿದನು. ಪ್ರಭುಗಳು ಹೀಗೆ ಆ ಅರಣ್ಯದಲ್ಲಿ ಜನವಸತಿಗೆ ಆಸ್ಪದವನ್ನು ಕೊಡಲು ಅವರ ಅಭಿಪ್ರಾಯವನ್ನು ಕಂಡು ಹಿಡಿದು ಕೆಲ ಜನ ಸದ್ಭಕ್ತರು ತಾವೂ ಪ್ರಭುವಿನ ಸನ್ನಿಧಿಯಲ್ಲಿ ವಾಸಮಾಡಿಕೊಂಡಿರಬೇಕೆಂದು ಇಚ್ಛಿಸಿ ಪ್ರಭುಗಳ ಅಪ್ಪಣೆಯನ್ನು ಕೇಳಿದರು. ಹೀಗೆ ಬಹು ಜನರು ದುಂಬಾಲ ಬೀಳಲು, ಪ್ರಭುಗಳು ಮುಗುಳು ನಗೆ ನಗುತ್ತ—"ಅಪ್ಪಗಳಿರಾ, ಈ ಅಡವಿಯಲ್ಲಿ ಇಷ್ಟು ದಿವಸ ಸಂತರ್ಪಣೆ ನಡೆದಿರುವದರಿಂದ ಇದು ಅತ್ಯಂತ ಪವಿತ್ರಸ್ಥಳವಾಗಿದೆ. ಇಲ್ಲಿ ನೀವು ಮನೆ ಕಟ್ಟಿಕೊಂಡು ವಾಸಮಾಡಿದರೆ, ನಿಮ್ಮ ಕೋಟಿ ಕಲ್ಯಾಣವಾಗುವದು. ಯಾರು ಯಾರಿಗೆ ಇಲ್ಲಿ ಇರಬೇಕೆಂಬ ಇಚ್ಛೆಯಿದೆಯೋ ಅವರವರು ಒಂದೊಂದು ಬಿಡಾರವನ್ನು ಮಾಡಿಕೊಳ್ಳಬೇಕು. ಹೀಗೆ ನೀವೆಲ್ಲರೂ ಬಿಡಾರವನ್ನು ಕಟ್ಟಿಸಿದ ಬಳಿಕ ಈ ಸ್ಥಳವು ಗ್ರಾಮವೆಂಬ ಹೆಸರನ್ನು ಹೊಂದುವದು. ಇದಕ್ಕೆ 'ಮಾಣಿಕಪುರ' ವೆಂದು ಕರೆಯಬೇಕು" ಎಂದು ಅಪ್ಪಣೆಕೊಟ್ಟರು.

ಪ್ರಭುಗಳು ಹೇಳುವದೊಂದೇ ತಡ; ಭಕ್ತರು ನಾಮುಂದೆ ನಾಮುಂದೆ ಎಂದು ಕೈಗೆ ಬಂದಹಾಗೆ ದ್ರವ್ಯ ವ್ಯಯಮಾಡಿ ದಟ್ಟವಾಗಿ ಬೆಳೆದ ಗಿಡಗಳನ್ನೂ ಕಿರಿಗಂಟೆಗಳನ್ನು ಕಡಿಸಿದರು. ಗ್ರಾಮದ ಅಸ್ತಿಭಾರವನ್ನು ಹಾಕಲಿಕ್ಕೆ

ಭೂಮಿಯು ಸಿದ್ಧವಾಯಿತು. ಬಳಿಕ ಪ್ರಭುಗಳ ಮುಖದಿಂದ ಹೊರಟ ಸುಮುಹೂರ್ತದಲ್ಲಿ ಎಲ್ಲರೂ ಮನೆಗಳನ್ನು ಕಟ್ಟಿಸಲಿಕ್ಕೆ ಪ್ರಾರಂಭಿಸಿದರು. ಸ್ವಲ್ಪ ದಿವಸಗಳಲ್ಲಿ ಕಾಡು ಮರಗಳು ಬೆಳೆದ ಆ ಅರಣ್ಯದಲ್ಲಿ ಉಪ್ಪರಿಗೆಯ ಮನೆಗಳು ಕಂಗೊಳಿಸತೊಡಗಿದವು. ವಾಸ್ತು ಶಾಂತಿ ಪೂರ್ವಕವಾಗಿ ಜನರು ಪುರ ಪ್ರವೇಶವನ್ನು ಮಾಡಿದರು. ಅಂದಿನಿಂದ ಆ ಸ್ಥಳವು ಶ್ರೀ ಮಾಣಿಕಪುರವೆಂಬ ನಾಮಕರಣದಿಂದ ಭಕ್ತರಿಗೆ ಪುಣ್ಯಸ್ಥಳವೆನಿಸಿತು. ವಾಸ್ತುಕ್ರಮವಿಡಿದು ಕಟ್ಟಲ್ಪಟ್ಟ ಆ ಗ್ರಾಮವು ಸಮಸ್ತರಿಗೂ ತುಂಬಾ ಪ್ರೀತಿಯ ಸ್ಥಾನವಾಯಿತು. ಪ್ರಭುಗಳ ಮನೆಯು ಊರ ಮಧ್ಯದಲ್ಲಿ ಆಗುವ ಹಾಗೆ ಪುರ ರಚನೆಯು ಮಾಡಲ್ಪಟ್ಟಿತ್ತು. ಪುರವು ಆಧುನಿಕ ವೈಭವ ಸಂಪನ್ನವಾಗದಿದ್ದರೂ ಆಧ್ಯಾತ್ಮಿಕ ವೈಭವಕ್ಕೆ ಬೇಕಾದ ಪವಿತ್ರತೆಯಿಂದ ಯುಕ್ತವಾಗಿತ್ತು.

ಈ ನೂತನ ಗ್ರಾಮದಲ್ಲಿ ಪ್ರಭುಗಳು ಭಕ್ತಹಿತಾರ್ಥವಾಗಿ ನಟನೆ ಮಾಡತೊಡಗಿದರು. ಪ್ರತಿನಿತ್ಯದಲ್ಲಿಯೂ ಭಜನೆಯ ಮೇಳಗಳೂ ಅವರ ಸೇವೆಗೆ ತಪ್ಪದೆ ಬರುತ್ತಿದ್ದವು. ಬ್ರಾಹ್ಮಣರು, ಮುಸಲ್ಮಾನರು, ಬ್ರಾಹ್ಮಣೇತರರು ಆ ಮಹಾತ್ಮನನ್ನು ಭಜಿಸುತ್ತಿದ್ದರು. ಒಂದೊಂದು ಕಾಲಕ್ಕೆ ಪ್ರಭುಗಳ ಉತ್ಸವವನ್ನು ಒಂದೊಂದು ಪಂಗಡದವರು ಮಾಡಬೇಕೆಂದು ಗೊತ್ತಾಯಿತು. ಶ್ರೀದತ್ತ ಜಯಂತಿಗೆ ಬ್ರಾಹ್ಮಣರು ಸೇರಿ ಪ್ರಭುವಿನ ಪ್ರಸಾದವನ್ನು ಸೇವಿಸಿ ತಮ್ಮ ಸೇವೆಯಿಂದ ಪ್ರಭುವನ್ನು ಸಂತೋಷಗೊಳಿಸಬೇಕು. ಮಕರಸಂಕ್ರಮಣದಲ್ಲಿ ಲಿಂಗವಂತಭಕ್ತರೆಲ್ಲರು ಬಂದು ಪ್ರಭುವಿನ ಉತ್ಸವ ಮಾಡಬೇಕು. ಮತ್ತು ಮೊಹರಮ್ಮದಲ್ಲಿ ಮುಸಲ್ಮಾನ ಭಕ್ತರೆಲ್ಲರೂ ಸೇರಿ, ಪ್ರಭುವಿನ ಸೇವೆಯನ್ನು ಮಾಡಬೇಕು. ಈ ರೀತಿಯಾಗಿ ಪ್ರಭುವಿನ ಭಕ್ತರ ಸಂಖ್ಯೆಯು ದಿನೇ ದಿನೇ ಅಭಿವೃದ್ಧಿಯನ್ನು ಹೊಂದತೊಡಗಲು ಹೊಸ ಹೊಸ ಸುಧಾರಣೆಗಳು ಆಗತೊಡಗಿದವು. ಸಮಸ್ತ ಜಾತಿಯ ಭಕ್ತರನ್ನು ಪ್ರಭುವು ಪ್ರೀತಿಸುತ್ತಿದ್ದದರಿಂದ ಜಾತಿ ಮಾತ್ಸರ್ಯಕ್ಕೆ ಆಸ್ಪದವುಳಿಯಲಿಲ್ಲ.

ಸಮಸ್ತ ಜಾತಿಯ ಭಕ್ತರು ತಮ್ಮ ಸೇವೆಗೆ ಬರುತ್ತಿದ್ದರೂ ಪ್ರಭುಗಳು ವರ್ಣಾಶ್ರಮ ಧರ್ಮಕ್ಕೆ ಒಬ್ಬರಿಂದಲೂ ವ್ಯತ್ಯಯವನ್ನುಂಟು ಮಾಡಗೊಡುತ್ತಿದ್ದಿಲ್ಲ. ಸಮಾಜದ ಸುಸ್ಥಿತಿಗಾಗಿಯೇ ಸಾಮಾಜಿಕ-ಹಾಗು ಕುಲದ ನಿರ್ಬಂಧಗಳನ್ನು ಪಾಲಿಸಬೇಕೆಂದು ಅವರು ತಮ್ಮ ಭಕ್ತರನ್ನು ಪದೇಪದೇ ಬೋಧಿಸುತ್ತಿದ್ದರು. ಭಕ್ತಿ ಪಂಥಕ್ಕೆಸೇರಿದವರು ಉಚ್ಛೃಂಖಲ ವೃತ್ತಿಯವರೂ, ಜಾತಿ-ಕುಲಗಳ ತಾರತಮ್ಯವಿಲ್ಲದವರೂ ಆಗುವರೆಂದು ಆಡಿಕೊಳ್ಳುವ ಕರ್ಮಠರು ಮೇಲಿನ

ಪ್ರಭುಗಳ ಬೋಧವನ್ನು ಲಕ್ಷ್ಯದಲ್ಲಿಡಬೇಕು. ಸಜ್ಜನರು ಧರ್ಮ ಸಂರಕ್ಷಣಕ್ಕೆ ಕಾರಣರಾದ್ದರಿಂದ ಅವರ ಭಕ್ತಿ ಪಂಥದಿಂದ ವರ್ಣ ಸಂಕರಕ್ಕೆ ಮಾರ್ಗವಾಗುತ್ತದೆಂದು ತಿಳಿಯುವದು ಸಾಹಸದ ಮಾತಾಗಿರುತ್ತದೆ. ಸತ್ಪುರುಷರು ವರ್ಣ ಸಂಕರಕ್ಕೆ ಎಂದಿಗಾದರೂ ಆಸ್ಪದ ಕೊಡಬಹುದೇ? ವಸ್ತು ಸ್ಥಿತಿಯು ಹೀಗಿದ್ದು ಅಪ್ಪಿತಪ್ಪಿ ಎಲ್ಲಿಯಾದರೂ ಭಕ್ತಿ ಪಂಥದ ನಿಜವಾದ ರಹಸ್ಯವನ್ನು ತಿಳಿಯದವರು ವರ್ಣ ಸಂಕರದಂಥ ದೋಷವನ್ನು ಮಾಡಿದರೆ ಆ ತಪ್ಪು ಇಡೀ ಭಕ್ತಿ ಮಾರ್ಗಾವಲಂಬಿಗಳ ಮೇಲೆಯೇ ಬೀಳುತ್ತದೆಂಬದು ಹಾಸ್ಯಾಸ್ಪದವಿರುತ್ತದೆ. ನಮ್ಮ ಮಾಣಿಕ ಪ್ರಭುಗಳಂತೂ ಈ ವಿಷಯದಲ್ಲಿ ಬಹು ದಕ್ಷತೆಯನ್ನು ತೋರಿಸುತ್ತಿದ್ದರು. ಅವರ ಸಮೀಚೀನವಾದ ಬೋಧದಿಂದ ಜನರ ಅಜ್ಞಾನವು ನಿವಾರಣವಾಗಿ ಅವರಲ್ಲಿ ಸ್ವಧರ್ಮ ಪಾಲನೆಯ ಶ್ರದ್ಧೆಯು ಸಹಜವಾಗಿ ಪಸ್ಫುರಣವಾಗುತ್ತಿತ್ತು. "ಸ್ವಧರ್ಮೇನಿಧನಂ ಶ್ರೇಯಃ ಪರಧರ್ಮೋ ಭಯಾವಹಃ" ಎಂಬ ಗೀತಾ ಶ್ಲೋಕಾರ್ಥವನ್ನು ಅವರು ಜನರಿಗೆ ಸಾರವತ್ತಾಗಿ ಹೇಳಿಕೊಡುತ್ತಿದ್ದರು. ಅವರ ಉಪಾಸನಾ ಮಾರ್ಗವಂತೂ ಬಲು ಸುಲಭವಿತ್ತು. ಪರಮ ಗಹನವಾದ ಆಧ್ಯಾತ್ಮ ವಿಚಾರವನ್ನು ಅವರು ಬಲು ಸರಳವಾಗಿ ಭಕ್ತರ ಹೃದಯದಲ್ಲಿ ಸ್ಥಿರಗೊಳ್ಳುವ ಹಾಗೆ ನಿರೂಪಿಸುತ್ತಿದ್ದರು. ಈ ರೀತಿಯಾಗಿ ಶ್ರೀ ಮಾಣಿಕ ಪ್ರಭುಗಳು ಮಾಣಿಕ ಪುರದಲ್ಲಿ ನೆಲಿಸಿ ಅಸಂಖ್ಯ ಭಕ್ತರಿಂದ ಸೇವೆಗೊಳ್ಳಲಾರಂಭಿಸಿದರು. ಈ ಮಾಣಿಕಪುರವು ಇಂದಿನ ವರೆಗೂ ನಿಜಾಮು ಇಲಾಖೆಯಲ್ಲಿ ಪ್ರಭುಗಳ ಸ್ಮರಣೆಯನ್ನು ಭಕ್ತರಲ್ಲುಂಟು ಮಾಡುತ್ತ ಸ್ಥಿರವಾಗಿ ನೆಲೆಗೊಂಡಿರುವದು

---

## ೧೪ ನೆಯ ಪ್ರಕರಣ.

### ಭಕ್ತ ವಿಷ ಬಾಧಾ ನಿವಾರಣ.

ಹುಮನಾಬಾದದಲ್ಲಿ ವಿಠ್ಠಲರಾಯನೆಂಬ ಒಬ್ಬ ಭಕ್ತನಿದ್ದನು. ಆತನಿಗೆ ಪ್ರಭುವಿನಲ್ಲಿ ಪ್ರೇಮ ಬಹಳ; ಪ್ರಭುವಾದರೂ ಆತನನ್ನು ಪ್ರೀತಿಸುತ್ತಿದ್ದನು. ಆತನು ಬಹಳ ಬಡವನು; ಅವನಿಗೆ ಆ ಊರಲ್ಲಿ ಶೇಕದಾರಿಯ ಕೆಲಸವಿತ್ತು. ಬರತಕ್ಕ ಅಲ್ಪ ವೇತನದಲ್ಲಿಯೇ ಆತನು ಕಷ್ಟದಿಂದ ಸಂಸಾರವ ಸಾಗಿಸುತ್ತಿದ್ದನು.

ಮನೆಯಲ್ಲಿ ಕುಟುಂಬ ದೊಡ್ಡದು; ಉದರ ನಿರ್ವಾಹ ಸಾಗಿಸಬೇಕಾದರೇ ಅವನಿಗೆ ಸಾಕು ಸಾಕಾಗಿ ಹೋಗುತ್ತಿತ್ತು. ಇಂಥದರಲ್ಲಿ ಆತನ ಮಲತಾಯಿಯು ತನ್ನ ಮಗನ ಲಗ್ನ ಮಾಡೆಂದು ದುಂಬಾಲಬಿದ್ದಳು. ವಿಠ್ಠಲರಾಯನು ಅಂತಃಕರುಣ ವುಳ್ಳವನು; ಮಲತಾಯಿ-ಮಲತಮ್ಮಂದಿರನ್ನು ಭೇದಭಾವವಿಲ್ಲದೇ ಪ್ರೀತಿಸುತ್ತಿದ್ದನು. ಕೋಮಲಮನಸ್ಸಿನವರಿಗೆ ದುರ್ಜನರಿಂದ ಹಿಂಸೆಯಾಗುವದು ಬಹಳ; ವ್ಯವಹಾರದಲ್ಲಿ ದುಷ್ಟರ ಕಾಟವು ತಮಗೆ ತಟ್ಟಬಾರದೆಂದು ತಿಳಿಯುವವರು ಇಷ್ಟು ಮೆತ್ತನ್ನ ಸ್ವಭಾವದವರಾದರೆ ಸಾಗುವದಿಲ್ಲ. ವಿಠ್ಠಲರಾಯನು ಈ ತರದ ಸ್ವಭಾವದವನಿದ್ದನು. ಅವನು ಮಲತಾಯಿಯ ಹಿಂಸೆಯನ್ನು ತಾಳಲಾರದೆ ಮಾಣಿಕ ಪುರಕ್ಕೆ ಗುರುಗಳ ಬಳಿಗೆ ಬಂದನು. ಪ್ರಭುಗಳು ಆತನ ಮನೋಭಿಪ್ರಾಯವನ್ನು ತಿಳಿದು ಆ ಕ್ಷಣದಲ್ಲಿ ಆತನ ಪದರಿನಲ್ಲಿ ಎರಡು ನೂರು ರೂಪಾಯಿಗಳನ್ನು ಹಾಕಿದರು. ಬಳಿಕ ಅವರು ಆ ಶೇಕದಾರನನ್ನು ಕುರಿತು— "ಈ ರೂಪಾಯಿಗಳನ್ನು ನಿನಗೆ ಯಾಕೆ ಕೊಟ್ಟಿರುವೆವೆಂಬದು ತಿಳಿಯಿತೇನು?" ಎಂದು ಕೇಳಿದರು. ಅದಕ್ಕೆ ವಿಠ್ಠಲರಾಯನು—"ಸ್ವಾಮಿ, ತಾವು ಸರ್ವಜ್ಞರು; ತಮಗೆ ತಿಳಿಯದ್ದು ಯಾವದೂ ಇಲ್ಲ. ನಾನು ಮಲತಮ್ಮನ ಲಗ್ನವನ್ನು ಹ್ಯಾಗೆ ಮಾಡಲೆಂದು ದೀರ್ಘಯೋಚನೆಯಲ್ಲಿ ಬಿದ್ದದ್ದರಿಂದ ಪ್ರಭುಗಳು ನನ್ನ ಮನಸ್ಸಿನಲ್ಲಿಯ ತಳಮಳವನ್ನು ತಿಳಿದು ಈ ರೂಪಾಯಿಗಳನ್ನು ಕೊಟ್ಟಹಾಗೆ ಕಾಣುತ್ತದೆ," ಎಂದು ನುಡಿದನು.

ವಿಠ್ಠಲರಾಯನ ಈ ತರ್ಕವು ಸಮರ್ಪಕವಿತ್ತು. ಆದ್ದರಿಂದ ಪ್ರಭುಗಳು ಮುಗುಳು ನಗೆನಕ್ಕು—"ವತ್ಸಾ, ನೀನು ತರ್ಕಿಸಿದ್ದು ನಿಜವು; ನೀನು ಇವನ್ನು ತಕ್ಕೊಂಡು ಹೈದರಾಬಾದಕ್ಕೆ ಹೋಗಿ ತಮ್ಮನ ಲಗ್ನ ಮಾಡಿ, ಕೂಡಲೆ ಹಿಂದಿರಿಗಿ ಬಾ; ಅಲ್ಲಿ ಬಹಳ ದಿವಸ ನಿಲ್ಲಬೇಡ; ಮಲತಾಯಿಯ ಸವಿಮಾತಿಗೆ ಮರುಳಾಗಿ ವೃಥಾ ಕಾಲಹರಣ ಮಾಡುತ್ತ ಅಲ್ಲಿ ನಿಲ್ಲಬೇಡ; ಪ್ರಸಂಗವು ಕಠಿಣವಾದೀತು. ಜೋಕೆ"ಎಂದು ಹೇಳಿದರು. ಪ್ರಭುಗಳ ನಿರೂಪ ತಕ್ಕೊಂಡು ಆತನು ಸ್ವಗ್ರಾಮಕ್ಕೆ ನಡೆದನು.

ಹೈದರಾಬಾದದಲ್ಲಿ ವಿಠ್ಠಲರಾಯನಿಗೆ ಪಿತ್ರಾರ್ಜಿತವಾದದ್ದೊಂದು ಮನೆಯಿತ್ತು. ಅಲ್ಲಿಯೇ ಆತನ ಮಲತಾಯಿ-ಮಲತಮ್ಮಂದಿರು ಇರುತ್ತಿದ್ದರು. ಆದ್ದರಿಂದ ಆತನು ತನ್ನ ಕುಟುಂಬದೊಡನೆ ಅಲ್ಲಿಗೆ ಹೋದನು. ಕೈಯಲ್ಲಿ ಹಣವಿದ್ದದ್ದರಿಂದ ಕನ್ಯಾ ನಿಶ್ಚಯಕ್ಕೆ ತಡವಾಗಲಿಲ್ಲ. ಒಂದು ಸುಮುಹೂರ್ತದಲ್ಲಿ ಲಗ್ನ ಕಾರ್ಯವು ಸಾಂಗವಾಯಿತು. ಅಗ್ಗಳತೆಯ ಕಾಲವಿದ್ದದರಿಂದಲೋ ಅಥವಾ ಪ್ರಭು

ವಿನ ಆಶೀರ್ವಾದದಿಂದಲೋ ಆ ಎರಡು ನೂರು ರೂಪಾಯಿಗಳೇ ಆತನಿಗೆ ಸಾಕಾಗಾದವು. ಇನ್ನು ಮುಂದೆ ಆತನು ನೌಕರಿಯ ಗ್ರಾಮಕ್ಕೆ ಹೊರಡತಕ್ಕವನು. ಅಷ್ಟರಲ್ಲಿ ಮಲತಾಯಿಯು ಆತನನ್ನು ರಮ್ಮಿಸಿ ಇನ್ನೆರಡು ದಿನಗಳಿದ್ದು ಹೋಗೆಂದು ಅನ್ನತೊಡಗಿದಳು. ಗುರುಗಳು ಹೆಚ್ಚು ದಿನ ನಿಲ್ಲಬೇಡನೆಂದು ಹೇಳಿದ್ದರೂ ಆತನು ಮಲತಾಯಿಯ ಭಿಡೆಗೆ ಬಿದ್ದು ನಿಂತುಕೊಂಡನು. 'ಪಿಸುಣಂಗುಪಕಾರ ಮಾಡೆ ತಪ್ಪದು ಕೇಡು' ಎಂದು ಕನ್ನಡ ಕವಿಗಳ ಅನುಭವದ ಉಕ್ತಿಯು ಇಲ್ಲಿ ನಿದರ್ಶನಕ್ಕೆ ಬಂದಿತು; ವಿಠ್ಠಲರಾಯನ ಮಲತಾಯಿಯು ಕೇವಲ ಮಾತ್ಸರ್ಯದ ಮೂರ್ತಿಯಾಗಿದ್ದಳು. ಆಕೆಗೆ ಮಲಮಗನು ಸಂಸಾರ ಮಾಡಿಕೊಂಡಿದ್ದದ್ದನ್ನು ನೋಡುವದು ಕಷ್ಟವಾಗಿತ್ತು. ತನ್ನ ಮಕ್ಕಳು ಧಡ್ಡರಿದ್ದು, ತನ್ನ ಸವತಿಯ ಮಗನು ನೌಕರಿ ಮಾಡುವನೆಂದು ಆಕೆಯು ತಳಮಳಿಸುತ್ತಿದ್ದಳು. ವಿಠ್ಠಲರಾಯನು ಸಂಭಾವಿತನಿದ್ದು, ತನ್ನ ಮಾತನ್ನು ಕೇಳುತ್ತಿದ್ದರೂ ಆ ಮೂರ್ಖ ಸ್ತ್ರೀಯು ಮನಸ್ಸಿನಲ್ಲಿ ಸುಮ್ಮಸುಮ್ಮನೆ ಆತನನ್ನು ದ್ವೇಷಿಸುತ್ತಿದ್ದಳು. ತನ್ನ ಮಗನ ಲಗ್ನವಾದದ್ದೊಂದೇ ತಡ; ಆಕೆಯು ಮಲಮಗನನ್ನು ವಿಷಹಾಕಿ ಕೊಲ್ಲಬೇಕೆಂದು ದುರ್ಬುದ್ಧಿಯನ್ನು ತಾಳಿದಳು.

ಒಂದು ದಿನ ವಿಠ್ಠಲರಾಯನು ಉಂಡು ಮಲಗಿದ್ದನು. ತಿರುಗಿ ಏಳುವಷ್ಟರಲ್ಲಿ ಅವನ ಪ್ರಕೃತಿಯು ಜಡವಾಗಿತ್ತು. ಹೀಗೆ ಯಾಕೆ ಆಯಿತೆಂಬದರ ಕಾರಣವು ಅವನಿಗೆ ತಿಳಿಯಲಿಲ್ಲ. ಮುಂದೆ ಬರಬರುತ್ತ ಅವನ ಪ್ರಕೃತಿಯು ಅಸ್ವಸ್ಥವಾಗುತ್ತ ನಡೆಯಿತು. ಯಾವ ದಿವಸ ಅವನಿಗೆ ಮೈಯಲ್ಲಿ ಜಾಡ್ಯವು ಉತ್ಪನ್ನವಾಯಿತೋ ಆ ದಿವಸವೇ ಊಟದಲ್ಲಿ ಅವನಿಗೆ ಆತನ ಮಲತಾಯಿಯು ವಿಷಪ್ರಯೋಗ ಮಾಡಿದ್ದಳು. ಹಾಯ್! ಹಾಯ್! ಎಂಥ ರಾಕ್ಷಸಿಯುವಳು! ಇಂಥ ರಾಕ್ಷಸರು ಇನ್ನೂ ಭೂತಲದಲ್ಲಿ ಇರುವರಲ್ಲವೇ? ತಾವು ನೆಟ್ಟಗಿರದೇಕು. ಅನ್ಯರು ಹಾಳಾಗಿ ಹೋಗಬೇಕು. ಎಂದು ಈಶ್ವರೀ ಸೃಷ್ಟಿಗೆ ದ್ರೋಹವನ್ನು ಬಗೆಯುವ ಪಾಪಿಗಳು ಸತ್ತಬಳಿಕ ಯಾವ ಯಾತನೆಗಳನ್ನು ಅನುಭವಿಸುವರೋ ತಿಳಿಯದು. ವಿಷಬಾಧೆಯಿಂದ ವಿಠ್ಠಲರಾಯನು ಮರಣೋನ್ಮುಖನಾದನು. ಆತನ ಹೆಂಡತಿಯೂ, ಮಕ್ಕಳೂ ಗೋಳಿಡಲಾರಂಭಿಸಿದರು. ಪಾಪ! ಆ ಸಾಧ್ವಿಗೆ ತವರು ಮನೆಯ ಆಶ್ರಯವಿದ್ದಿಲ್ಲ. ಗಂಡನ ಮನೆತನದಲ್ಲಿ ವತನವೃತ್ತಿಯಿಲ್ಲ. ಸಣ್ಣ ಸಣ್ಣ ನಾಲ್ಕಾರು ಮಕ್ಕಳು; ಗಂಡನು ಅತ್ಯಾವಸ್ಥೆಗೆ ಬಂದನು; ಆಗ ಆಕೆಗೆ ಆಕಾಶವೇ ಮೈಮೇಲೆ ಕಳಚಿ ಬಿದ್ದಹಾಗಾಯಿತು. ಇನ್ನೊಂದು ಕ್ಷಣದಲ್ಲಿ ಗಂಡನು ಕೈ

ಬಿಟ್ಟು ಹೋಗುವದರಿಂದ ಮುಂದೆ ಸಂಸಾರದ ಗತಿಯೇನು! ಅಯ್ಯೋ ದೈವವೇ ಏನಾಗುವ ಹೊತ್ತು ಬಂತಲ್ಲ! ಎಂದು ಅವಳು ಹಂಬಲಿಸಲಾರಂಭಿಸಿದಳು. ಅವಳ ಶೋಕವನ್ನು ನೋಡಿ ನೆರೆಹೊರೆಯವರು ದುಃಖಿಸಿದರು. ವಿಠ್ಠಲರಾಯನು ಅತ್ಯಾವಸ್ಥೆಯಲ್ಲಿಯೇ ಹೆಂಡತಿಯ ದುಃಖವನ್ನು ನೋಡಿ, ಕಣ್ಣು ತುಂಬ ನೀರು ತಂದನು. ಅಲ್ಲಿ ನೆರೆದ ಜನರಿಗೆ ಇನ್ನು ಮುಂದೆ ಸಂಸಾರವ ಮಾಡಬಾರದೆಂಬ ಸ್ಮಶಾನ ವೈರಾಗ್ಯವು ಪ್ರಾಪ್ತವಾಯಿತು. ಮಲಮಗನ ಈ ಮರಣೋನ್ಮುಖತೆಯನ್ನು ನೋಡಿ, ಆ ದುಷ್ಟ ಸ್ತ್ರೀಗೆ ಮನಸಿನಲ್ಲಿ ಹಾಲು ಕುಡಿದಷ್ಟು ಸಂತೋಷವಾಗಿತ್ತು. ಆದರೆ ಬಹಿರಂಗದಲ್ಲಿ ಅವಳೂ ಹತ್ತು ಮಂದಿಯಂತೆ ವಿಷಾದಪರ ಉದ್ಗಾರಗಳನ್ನು ತೆಗೆಯುತ್ತ ದುಃಖಿಸುತ್ತಿದ್ದಳು.

ವಿಠ್ಠಲರಾಯನ ಕುಟುಂಬದವರ ದುಃಖವು ಮಿತಿಮೀರಿತು. ಇನ್ನ ಆತನ ಪ್ರಾಣೋತ್ಕ್ರಮಣವಾಗುವ ಸಮಯವು; ಅಷ್ಟರಲ್ಲಿ ಹೊರಗೆ ಒಬ್ಬ ಬೈರಾಗಿಯು ಬಂದು "ಜಯ ಗುರುದೇವದತ್ತ" ಎಂದು ಗರ್ಜಿಸಿದನು. ಹೀಗೆ ದತ್ತ ನಾಮ ಘೋಷವು ಕಿವಿಗೆ ಬೀಳಲು, ವಿಠ್ಠಲರಾಯನ ಹೆಂಡತಿಯು ಎಚ್ಚತ್ತಳು. ಆಗ ಅವಳಿಗೆ ಶ್ರೀಮಾಣಿಕ ಪ್ರಭುವಿನ ಸ್ಮರಣವಾಯಿತು. ಈ ಸಂಕಟದಲ್ಲಿ ಸಂರಕ್ಷಿಸಲು ಶ್ರೀಗುರುವು ಸಮರ್ಥನಿರುವನೆಂದು ಆಕೆಗೆ ನಂಬಿಗೆ ಹುಟ್ಟಿತು. ಆದರಿಂದ ಅವಳಿಗೆ ಸ್ವಲ್ಪ ಧೈರ್ಯವು ಬಂದು ಬಾಗಿಲಲ್ಲಿ ನಿಂತಿದ್ದ ಬೈರಾಗಿಯ ಜೋಳಿಗೆಯಲ್ಲಿ ಧಾನ್ಯದ ಭಿಕ್ಷೆಯನ್ನು ಹಾಕಿದಳು. ಆಗ ಬೈರಾಗಿಯು ಆ ಸಾಧ್ವಿಯ ಮುಖಚರ್ಯವನ್ನು ನೋಡಿ,—"ಅಮ್ಮಾ, ನಿಮಗೆ ಈಗ ಒಂದು ದೊಡ್ಡ ಸಂಕಟ ಬಂದ ಹಾಗೆ ಕಾಣುತ್ತದೆ. ಆದರೂ ಚಿಂತೆಯಿಲ್ಲ ಹೆದರಬೇಡಿರಿ. ಈ ಭಸ್ಮವನ್ನು ಒಯ್ದು ಯಾರಿಗೆ ಜಡ್ಡಾಗಿದೆಯೋ ಅವರ ಬಾಯಲ್ಲಿ ಹಾಕಿರಿ, ಅಂದರೆ ಗುಣವಾಗುವದು" ಎಂದು ಹೇಳಿ ನಡೆದನು. ಭಾವಿಕಳಾದ ಆ ಸ್ತ್ರೀಯು ಆಶ್ಚರ್ಯಪಟ್ಟು ಆ ಭಸ್ಮವನ್ನು ಗಂಡನ ಬಾಯಲ್ಲಿ ಹಾಕಿದಳು. ಕೂಡಲೆ ವಿಠ್ಠಲರಾಯನ ವಿಷ ಬಾಧೆಯು ನಿವಾರಣವಾಯಿತು. ಅವನು ನಿರಾಮಯನಂತೆ ಎದ್ದು ಕುಳಿತನು. ಯಾವ ಬೈರಾಗಿಯ ಭಸ್ಮದಿಂದ ತನಗೆ ಗುಣವಾಯಿತೋ ಆ ಬೈರಾಗಿಯು ಸಾಮಾನ್ಯನಲ್ಲವೆಂದು ತರ್ಕಿಸಿ ಅವನನ್ನು ಊರತುಂಬ ಹುಡುಕಿಸಿದನು. ಆದರೆ ಬೈರಾಗಿಯು ಇದ್ದರಷ್ಟೇ ಆತನಿಗೆ ಸಿಗುವದು? ವಿಠ್ಠಲರಾಯನು ಬದುಕಿದ್ದಕ್ಕೆ ಆ ಊರವರಿಗೆ ತುಂಬಾ ಸಂತೋಷವಾಯಿತು. ಆತನ ಹೆಂಡರು ಮಕ್ಕಳಿಗಾದ ಆನಂದವನ್ನಂತೂ ಬಣ್ಣಿಸಲಿಕ್ಕೆ ಶಬ್ದಸೃಷ್ಟಿಯಲ್ಲಿ ಅವಕಾಶವೇ ಇರುವದಿಲ್ಲ.

ಬಳಿಕ ವಿಠ್ಠಲರಾಯನು ಹುಮನಾಬಾದಕ್ಕೆ ಹೋಗಿ ಅಲ್ಲಿಂದ ಮಾಣಿಕನಗರಕ್ಕೆ ಬಂದನು. ಆತನು ಬರುವದರೊಳಗೆ ಇತ್ತ ಮಾಣಿಕಪುರದಲ್ಲಿ ಪ್ರಭುಗಳಿಗೆ ಅತಿಶಯ ಜಡ್ಡಾಗಿತ್ತು. ಅವರ ಮೈಯು ಹಚ್ಚಗಾಗಿತ್ತು. ಒಮ್ಮಿಂದೊಮ್ಮೆ ಪ್ರಭುಗಳಿಗೆ ಹೀಗೇಕೆ ಆಯಿತೆಂದು ಜನರು ನಾಲ್ಕೈದು ದಿನಗಳಿಂದ ಚಡಪಡಿಸುತ್ತಿದ್ದರು. ಯಾರಿಗೂ ಸಮಾಧಾನವಿರಲಿಲ್ಲ. ಇಂಥ ಸ್ಥಿತಿಯಲ್ಲಿ ವಿಠ್ಠಲರಾಯನು ಪ್ರಭುಗಳ ದರ್ಶನಕ್ಕೆ ಬಂದನು. ಆತನನ್ನು ನೋಡಿದ ಕೂಡಲೆ ಪ್ರಭುಗಳು ಎದ್ದು ಕುಳಿತು "ನಿನಗೆ ವಿಷಬಾಧೆಯಾದಾಗ ಯಾವ ಬೈರಾಗಿಯು ವಿಭೂತಿಯನ್ನು ಕೊಟ್ಟು ಹೋದನೋ ಆ ಬೈರಾಗಿಯನ್ನು ತೋರಿಸಬಾರದೇ; ಯಾಕಂದರೆ ಈಗ ನನಗೂ ವಿಷಬಾಧೆಯಾಗಿದೆ'' ಎಂದು ನುಡಿದರು. ವಿಠ್ಠಲರಾಯನು ಬೆಚ್ಚಿಬಿದ್ದನು. ತನಗೆ ವಿಭೂತಿಯನ್ನು ಕೊಟ್ಟ ಬೈರಾಗಿಯು ಬೇರೆಯಾಗಿರದೆ ಶ್ರೀಪ್ರಭುವೇ ಬೈರಾಗಿಯಾಗಿ ಬಂದಿದ್ದನೆಂದು ಆತನು ತಿಳಿದನು; ಮತ್ತು ಈ ಸಂಗತಿಯನ್ನು ಜನರ ಮುಂದೆ ಹೇಳಿದನು. ಈ ಚಮತ್ಕಾರವನ್ನು ಕೇಳಿ ಜನರಿಗೆ ಆಶ್ಚರ್ಯವಾಯಿತು. ಪ್ರಭುಗಳಿಗೆ ವಿಷಬಾಧೆಯಾಗಿದೆಯೆಂಬದನ್ನು ಕೇಳಿ, ಒಬ್ಬ ವೈದ್ಯನು ಉತ್ತಮವಾದ ಔಷಧವನ್ನು ಕಳಿಸಿದನು. ಅದನ್ನು ಪ್ರಭುಗಳು ಕುಡಿದರು. ಕೂಡಲೆ ಆ ಔಷಧವನ್ನು ಕಳಿಸಿದ ವೈದ್ಯನಿಗೆ ಆ ವಿಷಬಾಧೆಯು ತಗುಲಿಕೊಂಡಿತು. ಅವನು ಗಾಬರಿಯಾಗಿ ತನಗೆ ಜೀವದಾನ ಕೊಡಬೇಕೆಂದು ಬೇಡಿಕೊಂಡನು. ಆಗ ಪ್ರಭುಗಳು ವೈದ್ಯನಿಗೆ ಜೀವದಾನ ಕೊಟ್ಟರು. ಮುಂದೆ ಸ್ವಲ್ಪ ಹೊತ್ತಿನಲ್ಲಿ ಪ್ರಭುಗಳ ಪ್ರಕೃತಿಯೂ ಪೂರ್ವವತ್ ಆಯಿತು. ಈ ಅದ್ಭುತಕಾರ್ಯವನ್ನು ನೋಡಿ, ಮಾಣಿಕ-ಪುರದೊಳಗಿನ ಜನರು ದಂಗಾಗಿಹೋದರು. ವಿಠ್ಠಲರಾಯನಂತೂ ಪ್ರಭುಚರಣಗಳನ್ನು ಗಟ್ಟಿಯಾಗಿ ಹಿಡಿದುಕೊಂಡನು. ಆಗ ಪ್ರಭುಗಳು ಆತನನ್ನು ಕುರಿತು—ನಿನಗೆ ನಾವು ಹೈದರಾಬಾದದಲ್ಲಿ ಹೆಚ್ಚಿಗೆ ದಿವಸ ನಿಲ್ಲಬೇಡವೆಂದು ಹೇಳಿದ್ದಿಲ್ಲವೇ; ಹೀಗೇಕೆ ಮಾಡಿದೆ? ಆದದ್ದಾಯಿತು. ಇನ್ನು ಮುಂದೆ ಜೋಕೆಯಿಂದಿರು. ಇದು ಕಲಿಯುಗವು; ಯಾರು ಯಾವ ಕಾಲಕ್ಕೆ ಹ್ಯಾಗೆ ತಿರುಗಿ ಬೀಳುವರೆಂಬ ನಿಯಮವಿಲ್ಲ, ಎಂದು ಉಪದೇಶಿಸಿದರು. ಅವನು ಗುರುಗಳನ್ನು ಅಭಿವಂದಿಸಿ ಅಪ್ಪಣೆಪಡೆದು ತನ್ನ ಕೆಲಸಕ್ಕೆ ಹೊರಟುಹೋದನು.

# ೧೫ನೆಯ ಪ್ರಕರಣ.

## ವಂಧ್ಯಾ-ಪುತ್ರಪ್ರದಾನ.

ಹುಮನಾಬಾದದಲ್ಲಿ ಒಬ್ಬ ವೃದ್ಧಬ್ರಾಹ್ಮಣನಿದ್ದನು. ಆತನ ಹೆಂಡತಿಗೆ ಅರವತ್ತು ವರುಷಗಳು ತುಂಬಿದ್ದವು. ಆ ದಂಪತಿಗಳ ಮೇಲೆ ಪ್ರಭುಗಳ ಪ್ರೇಮ ಬಹಳ. ಆ ವೃದ್ಧ ಬ್ರಾಹ್ಮಣನಾದರೂ ಅತ್ಯಂತ ಸುಶೀಲನಿದ್ದನು. ಅವನಂಥ ಕರ್ಮನಿಷ್ಠ ಜನರೇ ದುರ್ಲಭವೆಂದು ಹೇಳಬಹುದು. ಈ ಕರ್ಮಶೀಲ ಬ್ರಾಹ್ಮಣನು ಬಂದರೆ ಪ್ರಭುಗಳು ಆತನ ಚರಣ ತೀರ್ಥವನ್ನು ತಕ್ಕೊಳ್ಳುತ್ತಿದ್ದರೆಂದ ಬಳಿಕ ಆತನ ಘನತರವಾದ ಯೋಗ್ಯತೆಯನ್ನೇನು ಬಣ್ಣಿಸಬೇಕು? ಹೀಗಿರಲು ಒಂದು ದಿನ ಆ ಬ್ರಾಹ್ಮಣನು ಹೆಂಡತಿಯೊಡನೆ ಪ್ರಭು ದರ್ಶನಕ್ಕೆ ಬಂದನು. ಪ್ರಭುಗಳು ತಮ್ಮ ಪದ್ಧತಿಯಂತೆ ಆತನ ಚರಣತೀರ್ಥವನ್ನು ಸೇವಿಸಿ ಧನ್ಯತೆಯನ್ನು ಪ್ರಕಟಿಸಿದರು. ಬ್ರಾಹ್ಮಣನೂ, ಆತನ ಹೆಂಡತಿಯೂ ದಿನಾಲು ಪ್ರಭು ಸೇವೆಯನ್ನು ತಪ್ಪದೆ ಮಾಡುತ್ತಿದ್ದರು. ಬ್ರಾಹ್ಮಣನು ಸಾಹಿತ್ಯ ಧುರೀಣನಿದ್ದದರಿಂದ ಆತನಲ್ಲಿ ವಾಚಾಮಾಧುರ್ಯವು ಬಹು ಚನ್ನಾಗಿತ್ತು. ಆತನ ಬಾಯಿಂದ ಯಾವದಾದರೊಂದು ವಿಷಯವನ್ನು ಕೇಳಲಿಕ್ಕೆ ಪ್ರಭುಗಳಿಗೆ ಬಹಳೇ ಸಂತೋಷವೆನಿಸುತ್ತಿತ್ತು. ಬ್ರಾಹ್ಮಣನಾದರೂ ತನ್ನ ಅಧ್ಯಯನದ ಜಾಣತನವನ್ನು ಪ್ರಭುಚರಣಗಳಲ್ಲಿ ನಿವೇದಿಸಿ ಕೃತಕೃತ್ಯತೆಯನ್ನು ಪಡೆಯುತ್ತಿದ್ದನು.

ಬ್ರಾಹ್ಮಣನು ಸಾಂಸಾರಿಕ ವ್ಯಾಮೋಹದಿಂದ ಅಲಿಪ್ತನಿದ್ದರೂ ಆತನ ಹೆಂಡತಿಗೆ ಸಂಸಾರದ ಅಪೇಕ್ಷೆ ಬಹಳವಿತ್ತು. ಅರವತ್ತು ವರುಷದ ಮುದುಕಿಯಾಗಿದ್ದರೂ ಮಕ್ಕಳಾಗಬೇಕೆಂಬ ಆಕೆಯ ಆಶೆಯು ಹಿಮ್ಮೆಟ್ಟಿದ್ದಿಲ್ಲ. ಗಂಡನು ಕೋಲು ಹಿಡಿದಿದ್ದನು. ಆಕೆಯ ಋಷಿಪಂಚಮಿಯ ವ್ರತವು ಸಂಪೂರ್ಣವಾಗಿತ್ತು ಆದರೂ ಅವಳ ಪುತ್ರಕಾಮೇಚ್ಛೆಯು ಸಜೀವವಾಗಿತ್ತೆಂದಬಳಿಕ ಆಕೆಗೆ ಆಯುಷ್ಯವನ್ನು ಕಲ್ಪಿಸುವ ಹಾಗಿಲ್ಲವೆಂದೇ ಒಪ್ಪಬೇಕಾಗುವದು. ಆಕೆಯು ಲೋಕ ಲಜ್ಜೆಗೆ ಹೆದರಿ ಮಂದಿಯ ಮುಂದೆ ತನ್ನ ಇಚ್ಛೆಯನ್ನು ಪ್ರಕಟಿಸದೆ ಆ ತನ್ನ ಮನೋಬಯಕೆಯನ್ನು ಅಚ್ಛಾದಿಸಿಕೊಂಡು ಪ್ರಭು-ಸೇವೆಯನ್ನು ಮಾಡುತ್ತಿದ್ದಳು. ಅವಳು ಪ್ರಭುವೇ ತನ್ನ ಮಗನೆಂದು ತಿಳಿದು ಆತನ ಮೇಲೆ ಮಾಯಾ-ಮಮತೆಗಳನ್ನು

ಮಾಡುತ್ತಿದ್ದಳು. ಸರ್ವಜ್ಞನಾದ ಪ್ರಭುವು ಆಕೆಯ ಇಚ್ಛೆಯನ್ನು ತಿಳಿದು ಪ್ರಸಂಗವು ಬಂದಾಗ ನೋಡೋಣವೆಂದು ಸುಮ್ಮನಿದ್ದನು.

ಒಂದು ದಿನ ಆ ದಂಪತಿಗಳಿಬ್ಬರು ಭೋಜನೋತ್ತರದಲ್ಲಿ ಪ್ರಭುಗಳ ಬಳಿಗೆ ಬಂದರು. ಅವರು ಪ್ರಭುವನ್ನು ನಮಸ್ಕರಿಸಿ ಕುಳಿತುಕೊಳ್ಳುವಷ್ಟರಲ್ಲಿ ವೆಂಕಮ್ಮನು ಬಂದು ನಮಸ್ಕರಿಸಿದಳು. ಆಕೆಯನ್ನು ಕಂಡು ಪ್ರಭುಗಳು ಅರಿಯದವರಂತೆ—ವೆಂಕಮ್ಮಾ, ಈಗ ನಾಲ್ಕು ದಿನಗಳ ವರೆಗೆ ಎಲ್ಲಿಗೆ ಹೋಗಿದ್ದೆ? ನಮ್ಮ ದರ್ಶನಕ್ಕೆ ಬಂದ ಹಾಗೆ ಕಾಣಲಿಲ್ಲವಲ್ಲ! ಎಂದು ಕೇಳಿದರು. ಅದಕ್ಕೆ ವೆಂಕಮ್ಮನು ತುಸ ಲಜ್ಜಿತಳಾಗಿ ನೆಲವನ್ನು ನೋಡುತ್ತ ನುಡಿದಳೇನಂದರೆ— "ಗುರು ಮಹಾರಾಜ, ನಾನು ಪೂರ್ವ ಜನ್ಮದಲ್ಲಿ ಅನಂತ ಪಾಪಗಳನ್ನು ಮಾಡಿ ಈಗ ಸ್ತ್ರೀ ಜನ್ಮಕ್ಕೆ ಬಂದಿರುತ್ತೇನೆ. ಈ ಜನ್ಮದಲ್ಲಾದರೂ ನಿರಂತರ ಪ್ರಭುಸೇವೆಯನ್ನು ಮಾಡಬೇಕೆಂದರೆ ಆ ನನ್ನ ಸಂಚಿತ ಪಾಪಶೇಷದಿಂದ ತಿಂಗಳಿಗೆ ನಾಲ್ಕು ದಿವಸ ಪ್ರಭುಸೇವೆಯಿಂದ ಅಂತರಿಸಬೇಕಾಗುತ್ತದೆ.'' ವೆಂಕಮ್ಮನ ಈ ಪರ್ಯಾಯವಾಚಕ ಭಾಷಣವನ್ನು ಕೇಳಿ ಪ್ರಭುಗಳು ನಕ್ಕರು; ಮತ್ತು ಆಕೆಯನ್ನು ಕುರಿತು—"ವೆಂಕಮ್ಮಾ, ನಿನಗೆ ತಿಂಗಳಿಗೆ ನಾಲ್ಕು ದಿವಸ ಕೂಡುವದು ಬೇಸರ ಬಂದಿದೆಯೇನು? ಹಾಗಿದ್ದರೆ ಅದರ ಅಪೇಕ್ಷೆಯಿದ್ದವರಿಗೆ ಅದನ್ನು ಯಾಕೆ ಕೊಟ್ಟು ಬಿಡಬಾರದು?'' ಎಂದರು. ವೆಂಕಮ್ಮನು ಆಶ್ಚರ್ಯದಿಂದ—ಪ್ರಭುಗಳೇ, ಕೊಟ್ಟುಬಿಡಲಿಕ್ಕೆ ಬರುವ ಹಾಗಿದ್ದರೆ ನಾನು ಅದನ್ನು ಇಟ್ಟುಕೊಳ್ಳುತ್ತಿರಲೇ ಇಲ್ಲ. ಈಗ ಪ್ರಭುಗಳ ದೃಷ್ಟಿ ಬಿದ್ದ ಹಾಗೆ ಕಾಣುತ್ತದೆ. ನನ್ನ ಮುಟ್ಟು ಸುಟ್ಟು ಹೋದರೆ ನನಗೆ ಬಹಳ ಸಂತೋಷವಾಗುವದು. ನಿರಂತರವಾಗಿ ಪ್ರಭು ಸೇವೆಗೈಯ್ಯಲಿಕ್ಕೆ ಅನುಕೂಲವಾಗುವದು, ಎನಲು ಪ್ರಭುಗಳು—ಹಾಗಾದರೆ ಕೈಯಲ್ಲಿ ನೀರು ತಕ್ಕೊಂಡು ನನ್ನ ಮುಟ್ಟನ್ನು ಇಲ್ಲಿ ಕುಳಿತಿರುವ ಈ ಮಹಾತಾಯಿಗೆ ಕೊಟ್ಟಿರುತ್ತೇನೆಂದು ನುಡಿದು ಬಿಡು, ಎಂದು ಆಜ್ಞಾಪಿಸಿದರು. ಕೂಡಲೆ ವೆಂಕಮ್ಮನು ಸಂತೋಷಭರಿತಳಾಗಿ ಪ್ರಭುಗಳ ಅಪ್ಪಣೆಯಂತೆ ಉಚ್ಚರಿಸಿ ಎದುರಿಗೆ ಕುಳಿತಿರುವ ಆ ವೃದ್ಧ ಸ್ತ್ರೀಯ ಮುಂದೆ ನೀರುಬಿಟ್ಟಳು. ಸತ್ಪುರುಷರ ಶಕ್ತಿಯು ಅತರ್ಕ್ಯವಿರುವದು. ಅವರ ಕೈಯಲ್ಲಿ ಈಶ್ವರೀ ಸಾಮರ್ಥ್ಯವಿರುವದು. ಅಂತೇ ಅವರು ಇಂಥ ಅಘಟಿತ ಘಟನೆಗಳನ್ನು ಮಾಡುವರು. ಕೆಲವರು ನಾಸ್ತಿಕರು ಸತ್ಪುರುಷರಿಂದಾಗುವ ಇಂಥ ಅದ್ಭುತ ಕೃತಿಗಳೇ ಸುಳ್ಳೆಂದು ವಾದಿಸುವರು. ಇಂಥ ಎಷ್ಟು ಜನ ನಾಸ್ತಿಕರು ನಿಜವಾದ ಸತ್ಪುರುಷರ ಮುಂದೆ ಗಲ್ಲಗಲ್ಲ ಬಡಿದುಕೊಂಡಿರುತ್ತಾರೆಂಬದನ್ನು ಕೂಡಾ ಅವರು

ಮರೆತುಬಿಡುತ್ತಾರೆ. ಇಂಥ ಅಭಾವಿಕ ಜನರಿಗೋಸ್ಕರವಾಗಿಯೇ ಸತ್ಪುರುಷರು ತಮ್ಮ ದೈವೀ ಸಾಮರ್ಥ್ಯವನ್ನು ಪ್ರಕಟಿಸಬೇಕಾಗುತ್ತದೆ. ಇಲ್ಲದಿದ್ದರೆ ಅವರಿಗೆ ಈ ಮಾಯಾವ್ಯವಹಾರದಿಂದ ಏನೂ ಪ್ರಯೋಜನವಿಲ್ಲ. ತಾವು ಮಾಯಾತೀತರಿರುವದರಿಂದಲೂ, ತಮ್ಮಂತೆ ಜನರೂ ಮಾಯಾತೀತರಾಗಲೆಂದೂ ಅವರ ಇಚ್ಛೆಯಿರುವದು. ಆದರೆ ಬಹು ದಿವಸ ವಿಷಯಸುಖಕ್ಕೆ ಮೆಚ್ಚಿದ ಜನರು ಒಮ್ಮೆಲೆ ಅದನ್ನು ಬಿಡಲಿಕ್ಕೆ ಒಪ್ಪದ್ದರಿಂದ ನಿದಾನ ಸತ್ಪುರುಷರಲ್ಲಿಯಾದರೂ ಅಥವಾ ಈಶ್ವರೀ ಶಕ್ತಿಯಲ್ಲಾದರೂ ಅವರ ಚಿತ್ತವು ಸ್ಥಿರವಾಗಲೆಂದು ಸಜ್ಜನರು ಅವರಿಗೆ ಇಂಥ ಚಮತ್ಕಾರಗಳನ್ನು ತೋರಿಸುತ್ತಿರುತ್ತಾರೆ. ಈಗಿನ ಕಾಲದಲ್ಲಿ ಸತ್ಪುರುಷರ ಸೋಗಿನಿಂದ ದುರ್ಜನರು ಜನರನ್ನು ಠಕ್ಕಿಸಹತ್ತಿರುವರು. ಇದನ್ನು ಮಾತ್ರ ನಮ್ಮ ಭೋಳೇ ಜನರು ಮರೆಯತಕ್ಕದ್ದಲ್ಲ. ನಿಜವಾದ ಸತ್ಪುರಷರು ಯಾರು? ಸತ್ಪುರುಷರ ವೇಷ ಹಾಕಿಕೊಂಡು ಬಂದವರು ಯಾರು? ಎಂಬದನ್ನು ಪರೀಕ್ಷಿಸಲೇಬೇಕು. ಸತ್ಪುರುಷರನ್ನು ಪರೀಕ್ಷಿಸುವ ಒಂದು ಸಾಧನವನ್ನು ಸುಭಾಷಿತಕಾರರು ಲೋಕಕ್ಕೆ ಉಪದೇಶಿಸಿರುತ್ತಾರೆ. ಸತ್ಪುರುಷರ ನಿಜವಾದ ಸತ್ಪುರುಷತ್ವವನ್ನು ಯಾರು ಕಂಡು ಹಿಡಿಯಲು ಹವಣಿಸುವರೋ, ಅವರು ಆ ಉಪದೇಶದಂತೆ ಪರೀಕ್ಷೆ ಮಾಡಿ ನೋಡಬೇಕು. "ಉಪಕಾರಿಷು ಯಃ ಸಾಧುಃ ಸಾಧುತ್ವೇ ತಸ್ಯ ಕೋ ಗುಣಃ|| ಅಪಕಾರಿಷು ಯಃ ಸಾಧುಃ ಸ ಸಾಧುಃ ಸದ್ಭಿರುಚ್ಯತೇ||" ಅಂದರೆ ಯಾವನು ಉಪಕಾರ ಮಾಡಿದವರಿಗೆ ಪ್ರತ್ಯುಪಕಾರ ಮಾಡುವನೋ, ಮತ್ತು ಅವರ ವಿಷಯವಾಗಿ ಸಾಧುವಾಗಿರುವನೋ ಅವನ ಸಾಧುತ್ವದಲ್ಲಿ ವಿಶೇಷ ಮಹತ್ವವಿಲ್ಲ; ಆದರೆ ಯಾವನು ಪ್ರತ್ಯಕ್ಷ ಶತ್ರುಗಳಿಗೆ ಸಹ ಉಪಕಾರ ಮಾಡುವನೋ, ಮತ್ತು ಅವರ ಕಲ್ಯಾಣಚಿಂತನವನ್ನು ಮಾಡುವನೋ ಅವನೇ ನಿಜವಾದ ಸತ್ಪುರುಷನು!!

ಇಂಥ ಸತ್ಪುರುಷರಲ್ಲಿಯೇ ನಿಜವಾದ ಸಾಮರ್ಥ್ಯವಿರುತ್ತದೆ. ನಮ್ಮ ಮಾಣಿಕ ಪ್ರಭುಗಳು ಇಂಥ ಶ್ರೇಷ್ಠ ವರ್ಗದ ಸತ್ಪುರುಷರಲ್ಲಿ ಪರಿಗಣಿಸಲ್ಪಡುತ್ತಿದ್ದರು. ಅವರ ದೈವೀ ತೇಜಸ್ಸಿನ ಪ್ರಭಾವದಿಂದ ವೆಂಕಮ್ಮನ ಮುಟ್ಟು ನಷ್ಟವಾಗಿ ಅದು ಅರವತ್ತು ವರುಷದ ಮುದುಕಿಯಾದ ಆ ಬ್ರಾಹ್ಮಣ ಸ್ತ್ರೀಯನ್ನು ಆಶ್ರಯಿಸಿತು. ಮುಂದೆ ಒಂದು ತಿಂಗಳು ಕ್ರಮಿಸಲು ಇದರ ಪ್ರತೀತಿಯು ಜನರಿಗೆ ಬಂದಿತು. ವೆಂಕಮ್ಮನ ಬದಲು ಆ ಬ್ರಾಹ್ಮಣಸ್ತ್ರೀಯು ರಜಸ್ವಲೆಯಾದಳು. ಆಕೆಗೆ ಮುಟ್ಟು ಹೋಗಿ ಹನ್ನೆರಡು ವರುಷಗಳಾಗಿದ್ದವು. ಜನರಿಗೆ ಪರಮಾಶ್ಚರ್ಯವಾಯಿತು. ಶ್ರೀ ಪ್ರಭುಗಳ ದಿವ್ಯ ಚಿತ್ತಕ್ಕೆ ಬಂದರೆ ಒಣಗಿದ ಕಟ್ಟಿಗೆಯು ಕೂಡಾ ಚಿಗಿತು

ಫಲಬಿಡಬಹುದೆಂದು ಕೇಳಿದವರು ಮಾತನಾಡಿದರು. ಆ ಬ್ರಾಹ್ಮಣ ಸ್ತ್ರೀಗೆ ರಜೋದರ್ಶನವನ್ನು ಮಾಡಿಸುವದಕ್ಕೆ ಆಕೆಗಿದ್ದ ಸಂತತಿಯ ಇಚ್ಛೆಯೇ ಕಾರಣವಾದ್ದರಿಂದ ಮುಂದೆ ಒಂದೆರಡು ಮುಟ್ಟುಗಳಲ್ಲಿ ಆ ಸ್ತ್ರೀಯು ಗರ್ಭವತಿಯಾದಳು, ಆಗ ಆ ಸ್ತ್ರೀಗಾದ ಆನಂದವನ್ನು ಏನು ಬಣ್ಣಿಸೋಣ? ಸಾಯುವವನಿಗೆ ಅಮೃತದ ಬಳ್ಳಿಯು ಸಿಕ್ಕ ಹಾಗೆಯೂ, ಜನ್ಮ ದರಿದ್ರನಿಗೆ ವೈಭವ ಸಿಕ್ಕ ಹಾಗೆಯೂ ಆಯಿತೆಂದು ಹೇಳಬಹುದು. ತಲೆ ನಡುಗುತ್ತಿದ್ದ ಆ ವೃದ್ಧ ಬ್ರಾಹ್ಮಣನಂತೂ ಹರುಷನಿರ್ಭರನಾದನು. ಅವನಿಗೆ ಪ್ರಭುವಿನ ಅಗಾಧಲೀಲೆಯ ಬಗ್ಗೆ ಬಹಳ ಕೌತುಕವಾಯಿತು.

ಮುಂದೆ ನವಮಾಸಗಳು ತುಂಬಿ ಹತ್ತನೆಯ ತಿಂಗಳು ಪ್ರಾಪ್ತವಾಯಿತು. ಆ ಸತಿಯು ಲೋಕೋತ್ತರವಾದ ಪುತ್ರ ಮುಖವನ್ನು ಕಂಡಳು. ಆ ಶಿಶುವಿಗೆ ಪ್ರಭುವಿನ ಹೆಸರನ್ನಿಟ್ಟರು. ಹೀಗೆ ಆ ವೃದ್ಧಬ್ರಾಹ್ಮಣನು ಪ್ರಭುಗಳ ಇಚ್ಛೆಯಿಂದ ಪುತ್ರವಂತನಾಗಿ ಮನೆಗೆ ಹೊರಟುಹೋದನು. ವಿಧವೆಯಾದ ವೆಂಕಮ್ಮನಿಗೆ ನಿರರ್ಥಕವಾದ ರಜಸ್ವಲೆಯ ಹೊರೆಯನ್ನಿಳಿಸಿ ಅದನ್ನು ದಯಾಳುಗಳಾದ ಪ್ರಭುಗಳು ಆ ವಂಧ್ಯಾ ಮುತ್ತೈದಿಗೆ ದಯಪಾಲಿಸಿ, ಆಕೆಯ ಇಚ್ಛೆಯನ್ನು ಪೂರ್ಣ ಮಾಡಿದರು. "ಗಂಗಾಪಾಪಂ ಶಶೀತಾಪಂ, ದೈನ್ಯಂ ಕಲ್ಪ ತರುಸ್ತಥಾ|| ಪಾಪಂ, ತಾಪಂಚ ದೈನ್ಯಂಚ ಸದ್ಯಃ ಸಾಧು ಸಮಾಗಮಃ||" ಎಂದು ಸತ್ಪುರುಷರ ಶ್ರೇಷ್ಠತ್ವದ ವರ್ಣನೆಯಿರುವದು. ಆದರೆ ಅದು ಹ್ಯಾಗೆ ಸುಳ್ಳಾದೀತು?

---

## ೧೭ನೆಯ ಪ್ರಕರಣ.

[illegible]

ಪ್ರಭುಗಳು ಲೀಲಾಮೂರ್ತಿಗಳಾದ್ದರಿಂದ ಅವರ ನಿತ್ಯವಿಧಿಯನ್ನು ಇಂಥದೇ ಎಂದು ಖಂಡಿತವಾಗಿ ಹೇಳುವಹಾಗಿಲ್ಲ. ಅವರು ಒಮ್ಮೆ ವೇದಾಂತ ಚರ್ಚೆಯಲ್ಲಿ ಕಾಲ ಕಳೆದರೆ, ಮತ್ತೊಮ್ಮೆ ವಾರವನಿತೆಯರ ಮಧುರ ಗಾಯನವನ್ನು ಕೇಳುತ್ತಾ ಕೂಡುತ್ತಿದ್ದರು. ಒಮ್ಮೆ ಅಡವಿಯಲ್ಲಿ ತರುತಲವಾಸಮಾಡಿದರೆ, ಮತ್ತೊಮ್ಮೆ ಮೇ

ಉಪ್ಪರಿಗೆಯಲ್ಲಿ ವಾಸಮಾಡುತ್ತಿದ್ದರು. ಒಮ್ಮೆ ಕದನ್ನವನ್ನು ಸೇವಿಸಿದರೆ ಮತ್ತೊಮ್ಮೆ ಸುಗ್ರಾಸವನ್ನು ಭುಂಜಿಸುತ್ತಿದ್ದರು. ಸಾರಾಂಶವೇನಂದರೆ ಅವರಿಗೆ ಯಾವ ವಿಷಯುಗಳ ಇಚ್ಛೆಯೂ ಇದ್ದಿಲ್ಲ. ಶರೀರಭೋಗಕ್ಕೆ ಸರಿಯಾಗಿ ಬಂದದ್ದನ್ನು ಅನುಭವಿಸಿಯೇ ತೀರುತ್ತಿದ್ದರು. ಹೀಗೆ ನಿರಿಚ್ಛೆಯಿಂದ ವಿಷಯೋಪಭೋಗಮಾಡುವದೇ ಸನ್ಯಾಸವೆಂದು ತಿಳಿಯಲ್ಪಡುತ್ತದೆ. ಮುಖ್ಯವಾಗಿ ಇಚ್ಛೆ ಅಥವಾ ಆಶೆಯೇ ಬಂಧನಕ್ಕೆ ಕಾರಣವಿರುವದರಿಂದ ಸತ್ಪುರುಷರಿಗೂ ನಮಗೂ ಇದರಲ್ಲಿಯೇ ವ್ಯತ್ಯಾಸವಿರುತ್ತದೆ. ನಮ್ಮ ಭೋಗವು ಆಶಾಮಯವಾದದ್ದು. ಅಂತೇ ಅವರು ನಿಸ್ಪೃಹಿಗಳೆನಿಸಿಕೊಳ್ಳುತ್ತಾರೆ. ಅವರ ವಿಷಯೋಪಭೋಗವು "ಪದ್ಮಪತ್ರಮಿವಾಂಭಸಿ"ದಂತೆ ಅಂದರೆ ಕಮಲದ ಎಲೆಯು ನೀರಿನಲ್ಲಿದ್ದರೂ ನೀರನ್ನು ಅಂಟಿಸಿಕೊಳ್ಳದೇ ಇರುವಂತೆ ಇರುತ್ತದೆ. ಇದನ್ನೇ ಲೋಕಕ್ಕೆ ಕಲಿಸುವದಕ್ಕಾಗಿ ಅವರು ಅವತರಿಸಿರುತ್ತಾರೆ. ಆದ್ದರಿಂದ ಸನ್ಯಾಸಿಗಳಾಗಿ ಅಡವಿಯನ್ನು ಸೇರಿದ ಸತ್ಪುರುಷರಿಗಿಂತ ಸಂಸಾರಿಕರಾಗಿ ಸಮಾಜಕ್ಕೆ ಜ್ಞಾನಪ್ರದರಾದ ಸತ್ಪುರುಷರು ನಮ್ಮ ಹಿತದ ದೃಷ್ಟಿಯಿಂದ ಶ್ರೇಷ್ಠರಿರುತ್ತಾರೆಂದು ಹೇಳಲಾಗುವದು.

ಮೇಲಿನ ಸಜ್ಜನರ ಧರ್ಮವು ಶ್ರೀ ಮಾಣಿಕ ಪ್ರಭುಗಳಲ್ಲಿ ಸ್ಪಷ್ಟವಾಗಿ ಕಂಡುಬರುತ್ತಿತ್ತು. ಅವರ ಸೇವೆಯನ್ನು ಬಹಳ ವೈಭವದಿಂದ ಮಾಡಬೇಕೆಂದು ಇಚ್ಛಿಸುತ್ತಿದ್ದ ಭಕ್ತರು ವಿಶೇಷವಾಗಿ ತಾತ್ಯಾಸಾಹೇಬನಂಥ ಹುರುಪಿನ ಜನರು ಎಷ್ಟು ಅಟ್ಟಹಾಸಗಳನ್ನು ಬೆಳೆಸಿದರೂ ಪ್ರಭುಗಳು ಅದರ ಕಡೆಗೆ ಲಕ್ಷ್ಯಗೊಡುತ್ತಿರಲಿಲ್ಲ. ಅವರು ಮಾಡಿದ್ದಕ್ಕೆ ಬೇಡವೆಂದೂ ಹೇಳುತ್ತಿದ್ದಿಲ್ಲ. "ಭಳಿರೆ" ಎಂದು ಅವರನ್ನು ಪ್ರೋತ್ಸಾಹಿಸಲೂ ಪ್ರಯತ್ನಪಡುತ್ತಿದ್ದಿಲ್ಲ. ಹೀಗಿರಲು, ಒಂದು ದಿನ ಅಕ್ಕಲಕೋಟ ಸಂಸ್ಥಾನದ ಕಾರಭಾರಿಯು ದರ್ಶನಕ್ಕೆಂದು ಬಂದನು. ಆತನಿಗೆ ಮಾಣಿಕನಗರದ ರಚನೆಯನ್ನು ನೋಡಿ ಸಂತೋಷವಾಯಿತು. ಪುರದ ಹೆಬ್ಬಾಗಿಲುಗಳೂ, ಪ್ರಭುಗಳ ಮನೆಯ ಮುಂದಿರುವ ನಗಾರಖಾನೆಯೂ ಆತನ ಮನಸ್ಸನ್ನು ಹರಣಮಾಡಿದವು. ಪ್ರಭುಗಳ ಸೇವೆಯು ತನ್ನಿಂದ ನಿರಂತರ ನಡೆಯಬೇಕೆಂದು ಆತನು ಮನಸ್ಸಿನಲ್ಲಿ ಯೋಚಿಸಿದನು. ನಗಾರಖಾನೆಯು ಆವೇ ಕಟ್ಟಿಸಲ್ಪಟ್ಟಿದ್ದು, ಇನ್ನೂ ಚೌಘಡೆಯ ವ್ಯವಸ್ಥೆಯಾಗದ್ದರಿಂದ ಆ ಸೇವೆಯನ್ನು ತಾನೇ ನಡಿಸಬೇಕೆಂಬ ವಿಚಾರವು ಆತನಲ್ಲಿ ಅಂಕುರಿಸಿತು. ಕೂಡಲೆ ಅವನು ಪ್ರಭು ಸನ್ನಿಧಿಯಲ್ಲಿ ಮಾತು ತೆಗೆದು—"ಪ್ರಭು ಮಹಾರಾಜರೇ, ಈ ದಾಸನಿಂದ ನಿರಂತರ ಸೇವೆಯನ್ನು ಕೈಕೊಳ್ಳಬೇಕು. ನಗಾರಖಾನೆಯಲ್ಲಿ ಚೌಘಡೆಯನ್ನಿಡಿಸುವ ವ್ಯವಸ್ಥೆಯನ್ನು ನಾನು ಮಾಡುವೆನು. ಅದಕ್ಕಾಗಿ ಬರುವ ಖರ್ಚನ್ನು ನಾನು ಪ್ರತಿ ತಿಂಗಳಲ್ಲಿ ಕೊಡು

ವೆನು. ಇದಕ್ಕೆ ಪ್ರಭುಗಳ ಅಪ್ಪಣೆ ದೊರೆಯಬೇಕು,'' ಎಂದು ವಿನಯದಿಂದ ಕೇಳಿಕೊಂಡನು. ಆಗ ಪ್ರಭುಗಳು ಮುಗುಳುನಗೆ ನಕ್ಕು ನುಡಿದರೇನಂದರೆ—''ಅಪ್ಪಾ, ಮಾನವೀ ಪ್ರಾಣಿಗಳ ಚಿತ್ತವು ಬಹು ಚಂಚಲವಿರುತ್ತದೆ. ಇಂದು ಇದ್ದ ಮನಸ್ಸಿನ ಸ್ಥಿತಿಯು ನಾಳಿಗೆ ಇರುವದಿಲ್ಲ. ಒಂದು ಕ್ಷಣ ಮನಸ್ಸು ಸ್ಥಿರವಾಗಿಟ್ಟು, ಭಗವತ್ಸೇವೆಯನ್ನು ಮಾಡುವದಕ್ಕೇ ಅವರಿಂದ ಅಸಾಧ್ಯವಾಗುತ್ತಿರಲು, ನಾನು ನಿರಂತರ ಸೇವೆಯನ್ನು ಮಾಡುತ್ತೇನೆಂದು ನುಡಿಯುವದನ್ನು ಕೇಳಿ ನಮಗೆ ಸಂತೋಷವಾಗುತ್ತದೆ. ಇದರಿಂದ ನೀನೇ ಪುಣ್ಯವಂತನೆಂದು ತಿಳಿಯಬೇಕು. ಭಗವತ್ಸೇವೆಯನ್ನು ಮಾಡುತ್ತೇನೆನ್ನುವದು ಸುಲಭವಲ್ಲ. ಸೇವೆಯಲ್ಲಿ ಚಿತ್ತಲಯವಾದರೆ ಅದು ಸೇವೆಯೆನಿಸುವದು. 'ನಾನು ಮಾಡಿದೆನು, ನನ್ನಲ್ಲಿ ಇಂಥ ಸೇವೆ ಮಾಡುವ ಸಾಮರ್ಥ್ಯವದೆ?' ಎಂದು ಅಹಂಭಾವ ಅಂಕುರಿಸಿದರೆ, ಕೊಡ ಹಾಲಿನಲ್ಲಿ ಹರಳುಪ್ಪು ಚಲ್ಲಿದರೆ ಅದರ ಸ್ಥಿತಿಯು ಹ್ಯಾಗೆ ಆಗುವದೋ ಹಾಗೆ ಆ ಸೇವೆಯ ಗತಿಯಾಗುವದು. ಸೇವಾ ಧರ್ಮವು ಕಠಿಣವಿರುವದು. ಆ ಕಾಠಿಣ್ಯಕ್ಕೆ ಎದೆಗೊಡುವ ಹಾಗಿದ್ದರೇ ಸೇವೆಯನ್ನು ಕೈಕೊಳ್ಳಬೇಕು. ಈಗ ಲೋಕದಲ್ಲಿ ಅನಂತ ಜನರು ಭಗವತ್ಸೇವೆಯನ್ನು ಮಾಡುವರು. ಆದರೂ ಅವರಿಗೆ ಭಗವತ್ಕೃಪೆಯಾಗುವದಿಲ್ಲ. ಇದಕ್ಕೆ ಕಾರಣವೇನಿರಬಹುದು? ಸೇವೆ ಮಾಡುವವರ ದೋಷವೋ ಅಥವಾ ಭಗವಂತನ ದೋಷವೋ? ಚಾಂಚಲ್ಯ ಯುಕ್ತ ಸೇವೆಯು ಫಲಕಾರಿಯಾಗುವದಿಲ್ಲ. ನಿಜವಾಗಿ ಸೇವೆ ಮಾಡಬೇಕೆಂದು ಬಯಸುತ್ತಿದ್ದರೆ ನೀನು ಮಾಡಬೇಕೆನ್ನುವ ಕಾರ್ಯಕ್ಕೆ ಕೈಹಾಕು; ಇಲ್ಲದಿದ್ದರೆ ಬೇಡ. ನಮಗೇನು? ಚೌಘಡೆಯಿಟ್ಟರೂ ಅಷ್ಟೇ. ಇಡದಿದ್ದರೂ ಅಷ್ಟೇ. ಪ್ರಾರಂಭಿಸಿ ನಡೆಸಿದರೂ ಅಷ್ಟೇ; ನಡೆಯಿಸದಿದ್ದರೂ ಅಷ್ಟೇ. ಇಷ್ಟು ಮಾತನ್ನು ಆಡಲಿಕ್ಕೆ ಕಾರಣವಿಷ್ಟೇ; ನಿನಗೆ ಕಲ್ಯಾಣವಾಗಲಿ, ನಿನಗೆ ಸೇವೆಯ ರಹಸ್ಯವು ತಿಳಿಯಲಿ ಎಂಬದು. ನಿನ್ನ ಮನಸ್ಸಿನಲ್ಲಿ ಹುಟ್ಟಿದ ಈ ತಾತ್ಪೂರ್ತಿಕ ಭಕ್ತಿಯು ಎಷ್ಟು ದಿವಸ ಇದ್ದೀತೆಂಬ ಯೋಚನೆಯನ್ನು ಮಾಡು; ಏನು ಮಾಡಿದರೂ ಅದರಿಂದ ನಿನ್ನ ಉತ್ಕರ್ಷಕ್ಕೆ ಸಾಧನವಾಗುವ ಹಾಗೆ ಮಾಡಿಕೋ, ಅಂದರಾಯಿತು.''

ಈ ರೀತಿಯಾಗಿ ಪ್ರಭುಗಳು ಮಾತನಾಡಿದರೂ ಕಾರಭಾರಿಯು ತನ್ನ ಸ್ವಭಾವಕ್ಕನುಸರಿಸಿ, ಅಹಂಭಾವಕ್ಕೆ ಬಿದ್ದನು. ಅವನಿಗೆ ಪ್ರಭುಗಳ ಮಾತಿನ ನಿಜವಾದ ಸ್ವಾರಸ್ಯವು ತಿಳಿಯದೆ ಹೋಯಿತು. ಅವನುನಿಶ್ಚಯದಿಂದ ಸೇವೆ ಮಾಡುತ್ತೇನೆಂದು ಒಪ್ಪಿಕೊಂಡನು. ಪ್ರಭುಗಳು ಆತನ ನಿಶ್ಚಯಕ್ಕೆ ನಕ್ಕು—ಆಗಲಿ, ಎಂದರು.

ಹೊಸ ಹುರುಪಿನಲ್ಲಿ ಕಾರಭಾರಿಯು ಚೌಘಡೆಯನ್ನು ಸ್ಥಾಪಿಸಿದನು. ಆ ಸೇವೆಯು ನಡೆಯಲಿಕ್ಕೆ ತಕ್ಕಷ್ಟು ಚಾಕರರನ್ನು ಇಡಬೇಕಾಯಿತು. ಅದಕ್ಕೆ ಪ್ರತಿ ತಿಂಗಳಿಗೆ ಮೂವತ್ತು ರೂಪಾಯಿ ಖರ್ಚು ಬರತೊಡಗಿತು. ಅದನ್ನು ಕಾರಭಾರಿಯು ಕೊಡಲೊಪ್ಪಿದನು. ಹೀಗೆ ಅತನು ಆ ಸೇವೆಯನ್ನು ಮೂರು ವರುಷಗಳ ವರೆಗೆ ನಡಿಸಿದನು. ನಾಲ್ಕನೆಯ ವರುಷಕ್ಕೆ ಅವನ ಹುರುಪು ಹೋಯಿತು. ತಿಂಗಳಿಗೆ ೩೦ ರೂಪಾಯಿ ವೆಚ್ಚ ಮಾಡಿ ಚೌಘಡೆಯನ್ನಿಟ್ಟರೆ ಆಗುವದೇನು? ಎಂಬ ದುರ್ಬುದ್ಧಿಯು ಹುಟ್ಟಿತು. ದುರ್ಬುದ್ಧಿಯು ಹುಟ್ಟಿದ ಮೇಲೆ ಭಗವತ್ಸೇವೆಯು ಹೇಗೆ ನಡೆಯಬೇಕು? ಆತನು ರೂಪಾಯಿಗಳನ್ನು ಕೊಡುವದನ್ನು ಬಂದು ಮಾಡಿದನು. ಇತ್ತ ಚೌಘಡೆಯ ನೌಕರರು ಪ್ರಭುಗಳಿಗೆ ಸಂಬಳ ಕೊಡಿರೆಂದು ಗಂಟುಬಿದ್ದರು. ಆಗ ಪ್ರಭುಗಳು ಭಕ್ತರನ್ನು ಕುರಿತು—ನೋಡಿದಿರಾ, ಕಾರಭಾರಿಗಳ ನಿಷ್ಠೆಯವನ್ನು! ಈ ಮಾತನ್ನು ನಾವು ಮೊದಲೇ ಹೇಳಲಿಲ್ಲವೇ! ಈಗ ಹ್ಯಾಗೆ ಮಾಡಬೇಕು? ಚೌಘಡೆಯವರಿಗೆ ಸಂಬಳ ಕೊಡಬೇಕಾಯಿತು. ಅನಧಿಕಾರಿಗಳಿಂದ ಭಗವತ್ಸೇವೆಯು ಆಗದೆಂಬದು ಈಗಾದರೂ ನಿಮಗೆ ನಂಬಿಗೆಯಾಯಿತೋ? ಎಂದು ಕೇಳಿದರು. ಭಕ್ತರು ಶ್ರೀಗುರುವಿನ ಚಾಕರಿಯನ್ನು ನಿಲ್ಲಿಸಬಾರದೆಂದು ತಮ್ಮ ತಮ್ಮೊಳಗೆ ಮಾತನಾಡಿಕೊಂಡು ತಿಂಗಳಿಗೆ ಮೂವತ್ತು ರೂಪಾಯಿ ಉತ್ಪನ್ನ ಬರುವಂಥ ಹೊಲವನ್ನು ಕೊಳ್ಳಲಿಕ್ಕೆ ಹತ್ತುವಷ್ಟು ಹಣವನ್ನು ಕೂಡಿಸಿ ಪ್ರಭು ಚರಣಕ್ಕರ್ಪಿಸಿದರು. ಆಗ ಪ್ರಭುಗಳು ಆ ಹಣದಿಂದ ಭಕ್ತರ ಮುಖಾಂತರವಾಗಿಯೇ ಹೊಲವನ್ನು ಖರೀದಿ ಹಿಡಿದು ಅದನ್ನು ಚೌಘಡೆಯ ಖಾತೆಗೆ ಒಪ್ಪಿಸಿದರು. ನಾವು ಚೌಘಡೆಯ ಸೇವೆಯನ್ನು ಮಾಡುತ್ತೇವೆಂದು ಯಾರಿಗೂ ಅಹಂಕಾರವು ಹುಟ್ಟದ್ದರಿಂದ ಆ ಸೇವೆಯು ಭಗವತ್ಪ್ರೀತಿಗೆ ಕಾರಣವಾಗಿ ಬಹುಕಾಲ ಸಾಗಿತು.

ಹೀಗೆ ಪ್ರಭುಗಳು ಜನರ ನಿಷ್ಠೆಯನ್ನು ಪರೀಕ್ಷಿಸುತ್ತ ಇರುತ್ತಿರಲು, ಒಂದು ದಿನ ಒಬ್ಬ ಬ್ರಾಹ್ಮಣನು ಪ್ರಭುದರ್ಶನಕ್ಕೆ ಬಂದನು. ಆತನು ಅತ್ಯಂತ ಭಾವಿಕನಿದ್ದನು. ಸದ್ಭಕ್ತನಲ್ಲಿರಬೇಕಾದ ಗುಣಗಳು ಅವನಲ್ಲಿ ಪೂರ್ಣವಾಗಿದ್ದವು. ಅವನು ಮುಪ್ಪಿನ ತಂದೆಯನ್ನು ಸಂರಕ್ಷಿಸುತ್ತಿದ್ದು, ಪ್ರಭು ದರ್ಶನವು ಹ್ಯಾಗೆ ಆದೀತೆಂದು ಚಡಪಡಿಸುತ್ತಿದ್ದನು. ಆತನು ಪ್ರಭುಗಳ ಬಾಗಿಲಿಗೆ ಬರಲು ದ್ವಾರಪಾಲಕನು ಅವನನ್ನು ಒಳಗೇ ಬಿಡುತ್ತಿದ್ದಿಲ್ಲ. ಬೇರೆ ಜನರು ಬೇಕಾದಷ್ಟು ಸಾರೆ ಒಳಗೆ ಹೋಗಿ ಬರುತ್ತಿದ್ದರೂ ಆ ಬ್ರಾಹ್ಮಣನಿಗೆ ಒಮ್ಮೆಯಾದರೂ ಹೋಗಿ ಬರಲು ಕಾವಲುಗಾರನು ಬಿಡದ್ದನ್ನು ನೋಡಿ ಪರತಿಯವರಿಗೆ ಸಂತಾಪವಾಯಿತು. ಅವರು ಪ್ರಭುಗಳ

ಮುಂದೆ ಸಹ ಈ ಸಂಗತಿಯನ್ನು ಹೇಳುತ್ತಿದರು. ಆದರೆ ಪ್ರಭುಗಳು ಅವರಿಗೆ ಯಾವ ಉತ್ತರವನ್ನೂ ಕೊಡುತ್ತಿದ್ದಿಲ್ಲ. ಬ್ರಾಹ್ಮಣನ ಸುದ್ದಿಯನ್ನು ತೆಗೆದ ಕೂಡಲೆ ಪ್ರಭುಗಳು ಸುಮ್ಮನಾಗುತ್ತಿದ್ದರು. ಈ ಮೇರೆಗೆ ಎಷ್ಟೋ ದಿವಸಗಳು ಕಳೆದವು. ಆದರೂ ಬ್ರಾಹ್ಮಣನು ಕಾವಲುಗಾರನ ಮೇಲೆ ಕೋಪವತಾಳಲಿಲ್ಲ. ದಿನಾಲು ತಪ್ಪದೆ ಪ್ರಭುಗಳ ಮನೆಯವರೆಗೆ ಹೋಗಿಬರುತ್ತಿದ್ದನು. ಆತನ ಈ ಸಮಾಧಾನಗುಣವನ್ನು ಬಹು ಜನರು ಕೊಂಡಾಡಹತ್ತಿದರು. ಇರಇರುತ್ತ ಆತನ ಮುಪ್ಪಿನ ತಂದೆಯು ಸತ್ತನು. ತಂದೆಯ ಸಂರಕ್ಷಣೆಯ ಉಪಾಧಿಯು ಕತ್ತರಿಸಿದ್ದರಿಂದ ಬ್ರಾಹ್ಮಣನು ನಿಶ್ಚಿಂತನಾದನು. ತಂದೆಯ ಔರ್ಧ್ವದೇಹಿಕ ಕಾರ್ಯಗಳು ತೀರಿದ ಬಳಿಕ ಪ್ರಭುದರುಶನವಾದ ಹೊರತು ಊಟ ಮಾಡಲಿಕ್ಕಿಲ್ಲೆಂದು ನಿಶ್ಚಯಿಸಿ ಆಸನದ ಮೇಲೆ ಕುಳಿತುಕೊಂಡನು. ಒಂದು ದಿನವಾಯಿತು, ಎರಡು ದಿನಗಳಾದವು; ಇದರಂತೆ ಕ್ರಮದಿಂದ ಏಳು ದಿನಗಳು ಕಳೆದವು. ನಿರಾಹಾರದಿಂದ ಬ್ರಾಹ್ಮಣನು ತ್ರಸ್ತನಾದನು. ಅವನ ಪ್ರಾಣವು ಕೇವಲ ಕಂಠಗತವಾಯಿತು. ಆದರೂ ಆತನ ನಿಶ್ಚಯವು ಚಲಿಸಲಿಲ್ಲ. ಆತನ ಈ ರೀತಿಯಾದ ನಿಷ್ಠೆಯನ್ನು ನೋಡಿ ಪ್ರಭುಗಳಿಗೆ ಸಂತೋಷವಾಯಿತು. ಅವರು ಅವನ ವಿಷಯವಾಗಿ ಪ್ರಸನ್ನಚಿತ್ತರಾದರು.

ಬಳಿಕ ಪ್ರಭುಗಳು ಏಳನೆಯದಿನ ರಾತ್ರಿಯಲ್ಲಿ ಆತನಿಗೆ ಸ್ವಪ್ನದಲ್ಲಿ ದರ್ಶನವನ್ನು ಕೊಟ್ಟು ನುಡಿದರೇನಂದರೆ—"ಬ್ರಾಹ್ಮಣಾ ಏಳು, ನಾನು ನಿನಗೆ ದರುಶನ ಕೊಡುವೆನು. ಶ್ರೀ ಗುರುಚರಿತ್ರೆಯನ್ನು ಏಳು ದಿವಸಗಳಲ್ಲಿ ಓದಿ ಮುಗಿಸು; ಇನ್ನು ಮುಂದೆ ನಿರಾಹಾರಮಾಡಬೇಡ" ಬ್ರಾಹ್ಮಣನು ಎಚ್ಚತ್ತನು; ಬಳಿಯಲ್ಲಿ ಪ್ರತ್ಯಕ್ಷವಾಗಿ ಶ್ರೀಗುರುಚರಿತ್ರೆ ಇತ್ತು. ಪ್ರಭುಗಳ ಭವ್ಯಮೂರ್ತಿಯೂ ಕಣ್ಣಮುಂದೆ ಕಟ್ಟಿತ್ತು. ಇದನ್ನೆಲ್ಲವನ್ನುಸ್ಮರಿಸಿ ಆತನಿಗೆ ಸಂತೋಷವಾಯಿತು. ಪ್ರಭುಗಳ ದೃಷ್ಟಿಯು ತನ್ನಮೇಲೆ ಬಿತ್ತೆಂದು ತಿಳಿದನು, ಸ್ವಪ್ನದಲ್ಲಿಕಂಡ ಮೂರ್ತಿಯನ್ನೇ ಧ್ಯಾನಿಸುತ್ತ ಪಾರಣೆಯನ್ನು ತೀರಿಸಿದನು, ಮತ್ತು ಮರುದಿನವೇ ಗುರುಚರಿತ್ರೆಯ ಪಾರಾಯಣಕ್ಕೆ ಪ್ರಾರಂಭಿಸಿದನು. ಆ ಏಕನಿಷ್ಠಭಕ್ತನು ಏಳು ದಿನಗಳಲ್ಲಿ ಆ ಪುಸ್ತಕವನ್ನು ಸಂಪೂರ್ಣವಾಗಿ ಪಠಣಮಾಡಿದನು. ಅವನ ನಿರಾಲಸತನ-ಪವಿತ್ರತೆಗಳು ಮಿಗಿಲಾಗಿದ್ದವು. ಪಾರಾಯಣ ನಡೆದಾಗ ಅವನು ತ್ರಿಕರಣಗಳಿಂದ ತದೇಕಮಗ್ನನಾಗಿರುತ್ತಿದ್ದನು. ಇಂಥ ತಲ್ಲೀನತೆಗೇ ಅರ್ಥಾತ್ ತತ್ಪರತೆಗೇ ಪಾರಾಯಣವೆಂಬ ಸಂಜ್ಞೆಯು; ಈಗಿನ ಕಾಲದಲ್ಲಿ ಇಂಥ ಪಾರಾಯಣ ಕ್ರಮವನ್ನು ಕಾಣುವದು ದುರ್ಲಭವಾಗಿದೆ. ವಾಣಿಯು ಶ್ಲೋಕಗಳನ್ನು ಉಚ್ಚರಿಸುತ್ತಿದ್ದರೆ ಮನಸ್ಸು

ಬೇರೊಂದು ಕಾರ್ಯವನ್ನು ಯೋಚಿಸುತ್ತಿರುವದು. ತ್ರಿಕರಣಗಳ ಸಮೀಕರಣವೇ ಆಗುವಹಾಗಿಲ್ಲ. ಇಂಥ ಪಾರಾಯಣ ಪದ್ಧತಿಯೇ ಬಹುತರ ನಮ್ಮನ್ನು ಆಶ್ರಯಿಸಿರುತ್ತದೆ. ಆದರೆ ಪ್ರಸ್ತುತದ ಆ ಬ್ರಾಹ್ಮಣನ ಪಾರಾಯಣವು ನಮ್ಮ ಕ್ರಮಕ್ಕೆ ವಿರುದ್ಧವಾಗಿತ್ತು. ಅಂತೇ ಆತನು ದೊಡ್ಡವರ ಕೃಪೆಗೆ ಪಾತ್ರನಾದನು.

ಬ್ರಾಹ್ಮಣನ ಪಾರಾಯಣವು ಮುಗಿಯುವದಿವಸ ಪ್ರಭುಗಳು ಆತನಲ್ಲಿಗೆ ದಯಮಾಡಿಸಿದರು. ಸ್ವಪ್ನದಲ್ಲಿ ಕಂಡ ಮೂರ್ತಿಯನ್ನೇ ಪ್ರತ್ಯಕ್ಷವಾಗಿ ನೋಡಲು ಆತನಿಗೆ ಅತ್ಯಂತ ಸಂಭ್ರಮವಾಯಿತು. ಆತನು ಕೈಯೊಳಗಿನ ಓಲೆಯನ್ನು ಕೆಳಗಿಟ್ಟು ಶ್ರೀ ಗುರುಚರಣಗಳನ್ನು ಗಟ್ಟಿಯಾಗಿ ಹಿಡಿದುಕೊಂಡನು. ಆತನಲ್ಲಿ ಧನ್ಯತೆಯ ಭಾವವು ಒಡೆದು ಕಾಣತೊಡಗಿತು. ಪ್ರಭುಗಳು ಅವನಿಗೆ ಜ್ಞಾನೋಪದೇಶವನ್ನು ಮಾಡಿದರು. ತತ್‌ಕ್ಷಣದಲ್ಲಿ ಆತನಿಗೆ ಸಮಾಧಿಯು ಪ್ರಾಪ್ತವಾಯಿತು. ಅವನು ಕರ್ಮಾಕರ್ಮಗಳ ಲೇಪವಿಲ್ಲದೆ ಜೀವನ್ಮುಕ್ತ ಸ್ಥಿತಿಯನ್ನು ಅನುಭವಿಸಹತ್ತಿದನು. ಅವನ ನಿಷ್ಠೆಯು ಅವನನ್ನು ಪರಬ್ರಹ್ಮನನ್ನಾಗಿ ಮಾಡಿಬಿಟ್ಟಿತು. ಮೊದಲು ಆತನು ದರ್ಶನಕ್ಕೆ ಬಂದಾಗ ಯಾಕೆ ಆತನ ಮೇಲೆ ಪ್ರಭುಗಳು ಉದಾಸೀನಮಾಡಿದರೆಂಬದು ಜನರ ನಿದರ್ಶನಕ್ಕೆ ಬಂದಿತು. ಅವನಲ್ಲಿದ್ದ ನಿಷ್ಠೆಯ ಜ್ಯೋತಿಯನ್ನು ಬೈಲಿಗೆಳೆದು ಅವನಿಗೆ ಮಹತ್ತರವಾದ ಲಾಭವನ್ನುಂಟು ಮಾಡಿದ್ದರ ಮರ್ಮವು ಜನರಿಗೆ ಹೊಳೆಯಿತು. ಸತ್ಪುರುಷರಾಗಲಿ, ದೇವರಾಗಲಿ ಅಧಿಕಾರದ ಪರೀಕ್ಷೆಯಿಲ್ಲದೆ ಸುಮ್ಮಸುಮ್ಮನೆ ಅನುಗ್ರಹವನ್ನು ಮಾಡುವದಿಲ್ಲ, ಬ್ರಾಹ್ಮಣನು ನಿಜವಾದ ಸತ್ವಸ್ಥನಿದ್ದದರಿಂದ ಪ್ರಭುಗಳ ಅನುಗ್ರಹಕ್ಕೆ ಪಾತ್ರನಾದನು.

---

## ೧೭ನೆಯ ಪ್ರಕರಣ.

### ಪಾತ್ರಾಪಾತ್ರ ಪರೀಕ್ಷಣ.

ಸಜ್ಜನರ ಬಳಿಯಲ್ಲಾಗಲಿ, ತೀರ್ಥ-ಕ್ಷೇತ್ರಗಳಲ್ಲಾಗಲಿ ಬಹು ಜನರು ಇರುವರು. ಆದರೆ ಅವರೆಲ್ಲರಲ್ಲಿ ಸದ್ಗುಣಗಳ ಹೆಚ್ಚಳದಿಂದ ಸಾಧುತ್ವದ ವಿಷಯವಾಗಿ ಪಾತ್ರತೆ ಇರುತ್ತದೆಂದು ಹೇಳಲಿಕ್ಕಾಗುವದಿಲ್ಲ. ಯಾಕಂದರೆ "ಆರ್ತೋ ಜಿಜ್ಞಾಸುರರ್ಥಾರ್ಥಿ ಜ್ಞಾನೀಚ ಭರತರ್ಷಭ" ಎಂದು ಶ್ರೀ ಭಗವಂತನು ಗೀತೆಯಲ್ಲಿ ಭಕ್ತರ ವರ್ಗೀಕರಣವನ್ನು ಮಾಡಿದಂತೆ ಆ ಬಗೆಯ ಚತುರ್ವಿಧ ಆಶ್ರಿತರು ಸಜ್ಜನ

ರಲ್ಲಿಯೂ ತೀರ್ಥಕ್ಷೇತ್ರಗಳಲ್ಲಿಯೂ ತಪ್ಪದೆ ಇದ್ದೇ ಇರುವರು. ಹೀಗಾಗಿ ಸಜ್ಜನರಲ್ಲಿ ಜನರ ಸಂದಣಿಯು ಹೆಚ್ಚಾಗುವದು. ಅವರ ಪವಿತ್ರಸ್ಥಳಕ್ಕೆ ಬಂದವರೆಲ್ಲರೂ ತಾವೂ ಶಿಷ್ಯರೆಂಬ ದುರಹಂಕಾರವನ್ನು ವಹಿಸಿ ನಿಜವಾದ ನಿವೃತ್ತಿ ಮಾರ್ಗವನ್ನು ಕಳಕೊಳ್ಳುವರು. ಈ ಕಾಲಕ್ಕೆ ಶ್ರೀಮಾಣಿಕಪ್ರಭುಗಳಲ್ಲಿ ಇಂಥ ಶಿಷ್ಯಸಂಪತ್ತು ವಿಶೇಷವಾಗಿ ಬೆಳೆದು ಹೋಗಿತ್ತು. ಅವರಲ್ಲಿ ಸಚ್ಛಿಷ್ಯರಾರು? ಉದರ ನಿಮಿತ್ತವಾಗಿ ಶಿಷ್ಯರಾದವರಾರು? ಪ್ರತಿಷ್ಠೆಗಾಗಿ ಶಿಷ್ಯರಾದವರಾರು? ಎಂಬದೇ ಜನರಿಗೆ ತಿಳಿಯದಾಗಿತ್ತು. ಎಲ್ಲರೂ ಭಸ್ಮ-ರುದ್ರಾಕ್ಷಿಗಳನ್ನು ಧರಿಸಿ ಸಾಧುತ್ವದ ಬಾಹ್ಯ ಚಿಹ್ನಗಳಿಂದ ಮೆರೆಯಲು ಹವಣಿಸುತ್ತಿದ್ದರು. ಅಜ್ಞಾನಿಗಳಾದವರಿಗೆ ಅವರ ಡಾಂಭಿಕ ವೃತ್ತಿಯ ನೆಲೆಯು ಹತ್ತದೆ ಹೋದರೂ ಪ್ರಭುಗಳಿಗೆ ತಮ್ಮ ಶಿಷ್ಯಪರಿವಾರದಗುಟ್ಟು ಚನ್ನಾಗಿ ಅವಗತವಿತ್ತು. ಸರ್ವಜ್ಞರಾದ ಅವರು ಹೀಗೆ ಮಿಥ್ಯಾಚಾರದ ಶಿಷ್ಯರಾರು, ಸಚ್ಛಿಷ್ಯರಾರು ಎಂಬದನ್ನು ಅರಿತದ್ದರಲ್ಲಿ ಆಶ್ಚರ್ಯವಿಲ್ಲ. ಇದಲ್ಲದೆ ತಮ್ಮ ಶಿಷ್ಯವೃಂದದ ಪಾತ್ರಾಪಾತ್ರತೆಯನ್ನು ಪ್ರಸಂಗವರಿತು ಪರೀಕ್ಷಿಸಬೇಕೆಂತಲೂ ಅವರು ಯೋಚಿಸಿದ್ದರು.

ಹೀಗಿರಲು, ಒಂದು ದಿನ ಆ ಶಿಷ್ಯ ಪರೀಕ್ಷೆಯ ಕಾರ್ಯಕ್ಕೆ ಸಾಧನೀಭೂತವಾದ ಒಂದು ಪ್ರಸಂಗವು ಒದಗಿತು. ಒಬ್ಬ ಗೃಹಸ್ಥನು ತನ್ನ ಉಪಾಸ್ಯದೈವತವಾದ ಶ್ರೀ ಮಾರುತಿಯ ವಿಗ್ರಹವನ್ನು ಹೊತ್ತುಕೊಂಡು ಪ್ರಭುಗಳ ಬಳಿಗೆ ಬಂದನು. ಮತ್ತು ಆತನು ಪ್ರಭುಗಳನ್ನು ಕುರಿತು ನುಡಿದನೇನಂದರೆ,—ಪ್ರಭುಗಳೇ, ನಾನು ದಕ್ಷಿಣದೇಶದ ಬ್ರಾಹ್ಮಣನು; ನನ್ನ ತಲೆಯ ಮೇಲಿರುವ ಶ್ರೀ ಮಾರುತಿಯ ಮೂರ್ತಿಯೇ ನನಗೆ ಉಪಾಸ್ಯ ದೈವತವು. ಈ ವಿಗ್ರಹವನ್ನು ನಾನು ಹನ್ನೆರಡು ವರುಷಗಳ ವರೆಗೆ ಅಖಂಡವಾಗಿ ತಲೆಯ ಮೇಲೆ ಹೊತ್ತುಕೊಂಡು ತಿರುಗಿದ್ದೇನೆ. ಈ ವಿಗ್ರಹವು ಅತ್ಯಂತ ಉಗ್ರವಿರುವದು. ಇದರ ಪೂಜಾ-ಪುನಸ್ಕಾರಗಳನ್ನು ಮಾಡಲಿಕ್ಕೆ ಸಚ್ಛೀಲಬ್ರಾಹ್ಮಣರೇ ಬೇಕು. ಭ್ರಷ್ಟಚಿತ್ತವುಳ್ಳವರಿಂದ ಈ ವಿಗ್ರಹದ ಪೂಜೆಯನ್ನು ಮಾಡಲಿಕ್ಕಾಗುವದಿಲ್ಲ. ನೀವು ದೊಡ್ಡ ಸತ್ಪುರುಷರಿದ್ದವರಿಂದ ನಿಮ್ಮ ಸ್ಥಾನದಲ್ಲಿ ನಿಮ್ಮ ಕೈಮುಟ್ಟ ಈ ದೇವರನ್ನು ಸ್ಥಾಪಿಸಿ ನಾನು ಕೃತಾರ್ಥನಾಗಬೇಕೆಂದು ಬಂದಿದ್ದೇನೆ. ಈ ಬಡವನ ಸೇವೆಯನ್ನು ಪೂರ್ಣಪಡಿಸುವದಾಗಬೇಕು.''

ಈ ರೀತಿಯಾಗಿ ಆ ಬ್ರಾಹ್ಮಣನು ಮಾತಾಡಲು, ಪ್ರಭುಗಳು ನಕ್ಕು— ''ಒಳ್ಳೇದು, ಬ್ರಾಹ್ಮಣನೇ! ನೀನು ಬಹು ಪುಣ್ಯವಂತನು; ನಿನ್ನ ಮಾತನ್ನು ನಾವು ಮೀರಲಾರೆವು. ನಮ್ಮ ಬಳಿಯಲ್ಲಿ ಸಚ್ಛೀಲರಾದ ಅಸಂಖ್ಯಜನ ಶಿಷ್ಯರಿರುವರು.

ಈ ವಿಗ್ರಹದ ಪೂಜೆಯ ಚಿಂತೆಯನ್ನು ಬಿಡು; ಎಂದು ನುಡಿದು ತಾವೇ ತಮ್ಮ ಕೈ ಮುಟ್ಟಿ ಆತನ ತಲೆಯ ಮೇಲಿನ ಮಾರುತಿಯನ್ನು ಕೆಳಗಿಳಿಸಿಕೊಂಡು "ದಯಾನಿಧೇ, ವಾಯುನಂದನಾ ಎಂದು ಅದಕ್ಕೆ ಪೊಡಮಟ್ಟರು. ಬಳಿಕ ಆ ಬ್ರಾಹ್ಮಣನಿಗೆ ಮಂಗಲಸ್ನಾನವನ್ನು ಮಾಡಿಸಿದರು. ಮಾರುತಿಗೆ ಪಂಚಾಮೃತ ಅಭಿಷೇಕವಾಯಿತು. ಆಗ ಪ್ರಭುಗಳು ತಮ್ಮ ಮನಸ್ಸಿನಲ್ಲಿ—"ನಮ್ಮ ಶಿಷ್ಯರುಗಳಲ್ಲಿ ನಿಜವಾದ ಸುಕೃತಶಾಲಿಗಳನ್ನು ಪರೀಕ್ಷಿಸಲಿಕ್ಕೆ ಇದೊಂದು ಒಳ್ಳೇ ಸಂಧಿಯು ದೊರಕಿದಂತಾಗಿರುವದು. ಅನಾಯಾಸವಾಗಿ ಬಂದ ಈ ಪ್ರಸಂಗದಲ್ಲಿ ಅಪಾತ್ರರಾದವರು ತಾವೇ ಬೈಲಿಗೆ ಬರುವರು. ಅವರ ಮಿಥ್ಯಾಚಾರವು ತಾನೇ ಹೊರಬೀಳುವದು." ಎಂದು ಯೋಚಿಸಿ, ಎಲ್ಲ ಶಿಷ್ಯರನ್ನು ಕರೆದು ನುಡಿದರೇನಂದರೆ,—ಅಪ್ಪಗಳಿರಾ, ಈ ಬ್ರಾಹ್ಮಣನು ಒಂದು ದೊಡ್ಡ ಸಂಕಟವನ್ನು ನಮ್ಮ ಕೊರಳಿಗೆ ಹಾಕಿರುವನು. ನಾವಂತೂ ಸಚ್ಛೀಲರಲ್ಲ; ಹಸಿ ತಿಂದು ಹುಸಿ ಮಾತಾಡತಕ್ಕವರು; ನಮ್ಮಲ್ಲಿ ಎಷ್ಟು ದುರ್ಗುಣಗಳಿರುವವೋ, ನಾವು ಎಷ್ಟು ಪಾಪಗಳನ್ನು ಮಾಡಿರುವೆವೋ ಯಾರಿಗೆ ಗೊತ್ತು? ಈ ಮಾರುತಿಯನ್ನು ಪೂಜಿಸಬೇಕಾದರೆ ಪುಣ್ಯವಂತರೇ ಬೇಕಂತೆ; ಅಂಥ ಪುಣ್ಯವು ನಮ್ಮಲ್ಲಿ ಎಲ್ಲಿರುವದು? ಅಜ್ಞಾನಿಗಳಾದ ಜನರಲ್ಲಿ ನಾವು ಪುಣ್ಯವಂತರೆಂದು ಜಂಭ ಬಡಿಯಬಹುದು; ಆದರೆ ಪ್ರತ್ಯಕ್ಷ ದೇವರ ಮುಂದೆ ನಮ್ಮ ಆಟವು ಏನು ಸಾಗುವದು? ಈ ಮಾರುತಿರಾಯನು ಅತ್ಯುಗ್ರನಾದ್ದರಿಂದ ಅರ್ಚಕನಾದವನು ಮನಸ್ಸಿನಿಂದ ಅಸ್ವಚ್ಛನಾಗಿದ್ದರೆ ಅವನಿಗೆ ಕ್ಷಿಪ್ರದಲ್ಲಿಯೇ ಉಚ್ಚಾಟನೆಯನ್ನುಂಟು ಮಾಡದೆ ಬಿಡನು; ಆದ್ದರಿಂದ ಇದು ಕಠಿಣ ಪ್ರಸಂಗವೇ ಎಂದು ನಮಗೆ ಭಯವುಂಟಾಗಿರುತ್ತದೆ. ನಿಮ್ಮಲ್ಲಿ ಯಾರಾದರೂ ಪುಣ್ಯವಂತರಿದ್ದರೆ, ಹೇಳಿರಿ. ಶ್ರೀ ಮಾರುತಿಯ ಪ್ರತಿಷ್ಠಾಪನೆಯನ್ನು ಮಾಡಿ ಅವರನ್ನು ಅರ್ಚಕರನ್ನಾಗಿ ಮಾಡುವೆವು."

ಈ ಮೇರೆಗೆ ಪ್ರಭುಗಳು ಮಾತನಾಡಲು ನಿಜವಾಗಿಯೂ ಸಜ್ಜನರಾದವರು ಒಂದು ತುಟಿ ಎರಡು ಮಾಡದೆ ಸುಮ್ಮನೆ ನಿಂತುಕೊಂಡರು. ಆದರೆ ಡಾಂಭಿಕರಿಗೆ ಸುಮ್ಮನಿರುವದಕ್ಕಾಗಲಿಲ್ಲ. ಅವರು ಈ ಹೊತ್ತಿನಲ್ಲಿ ಸುಮ್ಮನಿದ್ದರೆ ತಮ್ಮ ಪ್ರತಿಷ್ಠೆಗೆ ಭಂಗಬರುವದೆಂದು ಭಾವಿಸಿದರು. ಮತ್ತು ವಸ್ತುತಃ ಅವರಲ್ಲಿ ಆಸ್ತಿಕಬುದ್ಧಿಯೇ ಇರದ್ದರಿಂದ ಈ ಮಾರುತಿಯ ಪೂಜಾರಿಕೆಯನ್ನು ಕೈಕೊಳ್ಳುವದರಿಂದ ಪಾಪಿಷ್ಠರಿಗೆ ಉಚ್ಚಾಟನವಾಗುವದೆಂಬ ಸಂಗತಿಯು ಅವರಿಗೆ ಕೇವಲ ಅಸಂಭವವಾಗಿ ತೋರಿತು. ಆದ್ದರಿಂದ ಅವರು ತಟ್ಟನೆ ಪ್ರಭುಗಳನ್ನು ಕುರಿತು—"ಸ್ವಾಮಿ ಈ ಮಾತಿಗೆ ಇಷ್ಟೇಕೆ ಯೋಚನೆ? ನಾವು ನಿಮ್ಮ ಚರಣಗಳ ಸೇವೆಯನ್ನು

ಷ್ಟು ದಿವಸ ಮಾಡಿದ್ದರಿಂದ ನಮ್ಮಲ್ಲಿ ಪಾಪದ ಲೇಶವಿಲ್ಲ. ಹೀಗಿರಲು ನಾವು ಪೂಜೆಯನ್ನು ಮಾಡಿದರೆ ಈ ಮಾರುತಿಯು ನಮಗೆ ಉಚ್ಚಾಟನೆಯನ್ನುಂಟು ಮಾಡುವನೇ? ಎಂದಿಗೂ ಮಾಡಲಾರನು; ಇದಾವ ಕಠಿಣ ಕೆಲಸವು? ನಾವು ನಿರ್ಭಯರಾಗಿ ಈ ಕೆಲಸ ಮಾಡುವೆವು'' ಎಂದು ನುಡಿದರು. ಅವರ ಈ ಮಾತಿನಿಂದ ಪ್ರಭುಗಳು ಮನದಲ್ಲಿಯೇ ನಕ್ಕು—ಹಾಗಾದರೆ ಶ್ರೀ ಮಾರುತಿಯ ಪ್ರತಿಷ್ಠಾಪನೆಯನ್ನು ಮಾಡಿಕೊಂಡೇ ಎಂದು ಮತ್ತೊಮ್ಮೆ ಕೇಳಿದರು. ಅದಕ್ಕೆ ಅವರ ಒಪ್ಪಿಗೆಯು ಸಿಗಲು ಪ್ರಭುಗಳು ಕೂಡಲೆ ಒಂದು ಸುಂದರವಾದ ದೇವಾಲಯವನ್ನು ಕಟ್ಟಿಸಿ, ಯಥಾವಿಧಿಯಂತೆ ಮಾರುತಿಯನ್ನು ಪ್ರತಿಷ್ಠಿಸಿದರು.

ಮೊಟ್ಟಮೊದಲು ಪ್ರಭುಗಳ ಡಾಂಭಿಕ ಶಿಷ್ಯರಲ್ಲಿ ಒಬ್ಬನು ಶ್ರೀಮಾರುತಿಯ ಅರ್ಚಕನಾಗಿ ನೇಮಿಸಲ್ಪಟ್ಟನು. ಅವನು ಪ್ರತಿನಿತ್ಯ ತ್ರಿಕಾಲ ಪೂಜಾದಿಗಳನ್ನು ನಡಿಸಿ ಯಶಸ್ವಿಯಾಗಬೇಕೆಂದು ಸಾಹಸ ನಡಿಸಿದನು. ಆದರೆ ಮಾರುತಿಯ ಲೀಲೆಯಿಂದಲೋ, ಪ್ರಭುಗಳ ಕೌತುಕದಿಂದಲೋ ಆತನಿಗೆ ದಿನ ದಿನಕ್ಕೆ ದುರ್ಬುದ್ಧಿಯು ಹೆಚ್ಚುತ್ತ ನಡೆಯಿತು. ಮೊದಲೇ ಆತನು ತಮೋ ಮೂರ್ತಿಯು; ಸದ್ಭಾವದ ಗಂಧವನ್ನು ಕೂಡಾ ಅರಿಯನು. ಇಂದ್ರಿಯ ನಿಗ್ರಹವನ್ನಂತೂ ಮಾಡಿಯೇ ಗೊತ್ತಿರಲ್ಲ. ಇಂಥವನು ಪ್ರತಿಷ್ಠೆಗಾಗಿ ಪೂಜಾರಿಯಾಗಲು, ಅದರಿಂದ ಅವನಿಗೆ ಸುಮತಿ ಉತ್ಪನ್ನವಾಗುವದರ ಬದಲು ''ಮರ್ಕಟಸ್ಯ ಸುರಾಪಾನಂ'' ಎಂಬಂತೆ ಅವನಲ್ಲಿ ದುರ್ಬುದ್ಧಿಯೇ ಅಧಿಕವಾಗತೊಡಗಿತು. ಅವನ ಮನಸ್ಸು ಪಾದರಸದಂತೆ ಹರಿದಾಡಹತ್ತಿತು. ಈ ಮನಸ್ಸಿನ ಚಾಂಚಲ್ಯವು ಪಾಪದ ಫಲವೆಂಬದೂ, ಶ್ರೀಮಾರುತಿರಾಯನಿಂದ ತನಗೆ ಉಚ್ಚಾಟನೆಯು ಪ್ರಾಪ್ತವಾಯಿತೆಂಬದೂ ಅವನಿಗೆ ತಿಳಿಯದೆ ಹೋಯಿತು. ಹೀಗೆ ಕೆಲವು ದಿವಸಗಳು ಕ್ರಮಿಸಲು ಅವನ ಮನಸ್ಸು ಯಾವ ಕೆಟ್ಟ ಕೆಲಸಕ್ಕೂ ಹೇಸದಷ್ಟು ಬಲಿಷ್ಠವಾಯಿತು.

ಹೀಗಿರಲು ಒಂದು ದಿನ ಆ ಅರ್ಚಕನ ಪಾಪದೃಷ್ಟಿಯು ಮಾರುತಿಯ ದರ್ಶನಕ್ಕೆ ಬಂದ ಸ್ತ್ರೀಯರ ಕಡೆಗೆ ತೆರಳಿತು. ಆ ದಿನ ಗುಡಿಗೆ ಬಂದ ಆ ಹೆಂಗಳೆಯರು ಒಬ್ಬ ಶ್ರೀಮಂತನ ಮನೆತನದವರಾಗಿದ್ದರು. ಐಶ್ವರ್ಯದ ಸೊಬಗಿನಿಂದಲೂ ಗರ್ಭಶ್ರೀಮಂತಿಕೆಯ ಸೌಖ್ಯದಿಂದಲೂ ಆ ಸುಂದರಿಯರು ಸ್ವಾಭಾವಿಕವಾಗಿಯೇ ಕಾಂತಿವಿಶೇಷದಿಂದ ಒಪ್ಪುತ್ತಿದ್ದರು. ಅದರಲ್ಲಿಯೂ ಒಬ್ಬ ನವಯುವತಿಯು ಚೆಲ್ವಿಕೆಯಲ್ಲಿ ಅಪ್ಸರೆಗೆ ಸಮಾನಳಾಗಿ ತೋರುತ್ತಿದ್ದಳು. ಆ ನೂತನ ಪ್ರಾಯದ ತರುಣಿಯಮೇಲೆಯೇ ಅರ್ಚಕನ ಕೃಪಾದೃಷ್ಟಿಯು ಬಿದ್ದಿತು. ಹಾಯ್! ಹಾಯ್!

ವಿಷಯುಗಳಲ್ಲಿ ವಿರಕ್ತಿಯನ್ನು ತಾಳದ ಅಧಮರು ಅಥವಾ ವಿಷಯ ಲಾಲಸೆಯನ್ನು ಬಿಡುವಷ್ಟು ಮನಸ್ಸಿನ ಸ್ಥಿರತೆಯಿಲ್ಲದ ಮೂರ್ಖರು ದುರುಳವೇದಾಂತಿಗಳಾಗಿ ವ್ಯರ್ಥವಾಗಿ ನರತನುವನ್ನು ಕಳಕೊಳ್ಳುವರು, ಇಷ್ಟೇ ಅಲ್ಲ; ಸಮಾಜದಲ್ಲಿ ನೈತಿಕ ಬಂಧನಗಳನ್ನು ಸಡಿಲಿಸಿ ಬಹುದೊಡ್ಡ ಅನರ್ಥಗಳನ್ನುಂಟುಮಾಡುವರು. ಇದರಂತೆ ಪ್ರಸ್ತುತದ ಅರ್ಚಕನ ಸ್ಥಿತಿಯೂ ಆಯಿತು. ಅವನು ಆ ಸ್ತ್ರೀಯ ಹಂಬಲವನ್ನು ಹಚ್ಚಿಕೊಂಡು ತನ್ನ ಕಾರ್ಯಸಾಧನೆಗಾಗಿ ಯುಕ್ತಿ ಪ್ರಯುಕ್ತಿಗಳನ್ನು ಹಾಕತೊಡಗಿದನು. ಆ ಸ್ತ್ರೀಯರು ಪ್ರಭುದರ್ಶನಕ್ಕೆ ಬಂದವರಾದ್ದರಿಂದ ಕೆಲವು ದಿನ ಅವರ ಬಳಿಯಲ್ಲಿಯೇ ನಿಂತುಕೊಂಡರು. ಹೀಗೆ ಆ ಸ್ತ್ರೀಯರ ನಿಕಟಸಾನ್ನಿಧ್ಯವು ದೊರೆತರೂ ತನ್ನ ಮನೋರಥವು ಪೂರ್ಣವಾಗದ್ದರಿಂದ ಆ ಬ್ರಾಹ್ಮಣನು ಹಗಲಿರುಳೂ ತಲ್ಲಣಗೊಳ್ಳುತ್ತಿದ್ದನು. ಕಡೆಗೆ ಅವನು ಮಾರುತಿಯ ನಿಗ್ರಹದಿಂದ ಮತಿಭ್ರಷ್ಟನಾಗಿ ಒಂದು ದಿನ ದೇವಾಲಯಕ್ಕೆ ಏಕಾಂಗಿನಿಯಾಗಿ ಬಂದ ಆ ಸುಂದರಿಯನ್ನು ಬಲಾತ್ಕರಿಸಹೋದನು. ಶಿವ! ಶಿವ! ವಿವೇಕವಿಲ್ಲದ ಡಾಂಭಿಕರು ಯಾವ ಕಾಲಕ್ಕೆ ಏನು ಮಾಡುವರೆಂಬದರ ನಿಯಮವಿಲ್ಲ. ಆ ಸಾಧ್ವಿಯು ಆ ಮೂರ್ಖನನ್ನು ಅಂಜಿಸಿ ತಪ್ಪಿಸಿಕೊಂಡು ಹೊರಟುಹೋದಳು. ಈ ಸುದ್ದಿಯು ಹಾ ಹಾ ಅನ್ನುವಷ್ಟರಲ್ಲಿ ಊರತುಂಬ ಪ್ರಸರಿಸಲು ಅರ್ಚಕನು ಮುಂದುಗಾಣದೆ ಜೀವಬದುಕಿಸಿಕೊಳ್ಳಬೇಕೆಂಬ ಆಶೆಯಿಂದ ಪಲಾಯನಸೂಕ್ತವನ್ನು ಜಪಿಸಿದನು. ತಿರುಗಿ ಅವನು ಪ್ರಭುಗಳಿಗೆ ಎಂದೂ ಮೋರೆಯನ್ನು ತೋರಿಸಲಿಲ್ಲ.

ಈ ಪ್ರಕಾರ ದೊಡ್ಡಡಾಂಭಿಕ ಶಿಷ್ಯನು ಮಾರುತಿಯ ಅರ್ಚಕನಾದ ಸ್ವಲ್ಪ ದಿವಸಗಳಲ್ಲಿ ತನ್ನ ಕುಟಿಲ ಹೃದಯವನ್ನು ತೆರೆದಿಟ್ಟು ಓಡಿ ಹೋಗಲು ಅವನ ಸ್ಥಳಕ್ಕೆ ಮತ್ತೊಬ್ಬ ಡಾಂಭಿಕನ ಯೋಜನೆಯಾಯಿತು. ಅವನೂ ಶ್ರೀ ಮಾರುತಿಯ ಉಚ್ಚಾಟನಕ್ಕೆ ಗುರಿಯಾಗಿ ಕಳವಿನ ಪ್ರಕರಣದಲ್ಲಿ ಸಿಕ್ಕು ಮಾನ ಭಂಗಿತನಾಗಿ ಓಡಿಹೋದನು. ಹೀಗೆ ಒಬ್ಬರಹಿಂದೊಬ್ಬರು ಠಕ್ಕರು ಅರ್ಚಕರಾಗಿ ಮುಖಭಂಗಿತರಾಗುತ್ತ ನಡೆಯಲು ಉಳಿದವರು ಅಂಜಿದರು. ಆದರೂ ಮೊದಲು ದೊಡ್ಡ ಮಾತನ್ನು ಆಡಿದ್ದರಿಂದ ಅವರು ನಿರ್ವಾಹವಿಲ್ಲದೇ ಅರ್ಚಕತನವನ್ನು ವಹಿಸಲೇ ಬೇಕಾಯಿತು. ಈ ಹಾವಳಿಯಿಂದ ಒಂದೆರಡು ವರ್ಷಗಳಲ್ಲಿ ಪ್ರಭುಗಳ ಡಾಂಭಿಕ ಶಿಷ್ಯರೆಲ್ಲರೂ ನಾಮಶೇಷರಾದರು. ಬಳಿಕ ಪ್ರಭುಗಳು ಕುಟುಂಬವತ್ಸಲನಾದ ಒಬ್ಬ ಬಡ ಬ್ರಾಹ್ಮಣನನ್ನು ಹತ್ತರ ಕರೆದು. ಅಪ್ಪಾ, ನೀನು ಶ್ರೀ ಮಾರುತಿಯ ಅರ್ಚಕತ್ವವನ್ನು ವಹಿಸು, ಇದರಿಂದ ನಿನಗೆ ಕಲ್ಯಾಣವಾಗುವದು ಎಂದು ನುಡಿದರು.

ಅವರ ಮಾತನ್ನು ಕೇಳಿ ಬ್ರಾಹ್ಮಣನು ಗಡಗುಟ್ಟಿ ನಡುಗಿ—"ಸ್ವಾಮೀ, ನಾನು
ಬಡವನು, ಪಾಪಿಷ್ಠನು, ನನ್ನ ಪೂಜೆಯು ಶ್ರೀ ಮಾರುತಿರಾಯನ ಮನಸ್ಸಿಗೆ
ಬರಲಿಕ್ಕಿಲ್ಲ. ಈಗ ನೂರಾರು ಜನರು ಓಡಿಹೋದಂತೆ ನನ್ನ ಅವಸ್ಥೆಯೂ ಆದೀತು.
ದಯಮಾಡಿ ಆ ಕೆಲಸವನ್ನು ನನಗೆ ಹೇಳಬಾರದು ಎಂದು ಬೇಡಿಕೊಂಡನು.
ಆಗ ಪ್ರಭುಗಳು ಅವನ ನಿಮಿತ್ತವಾಗಿ ಲೋಕಕ್ಕೆಲ್ಲ ಸದ್ಬೋಧವಾಗುವಂತೆ ಅವ
ನಿಗೆ ಸದುಪದೇಶವನ್ನು ಮಾಡಿದರು. ಅವರು ಹೇಳಿದ್ದೇನಂದರೆ—"ಅಪ್ಪಾ,
ನೀನು ಯಾಕೆ ಹೆದರುತ್ತೀ; ಹಾಗಿದ್ದರೆ ನಿನಗೆ ನಾವು ಅಭಯವನ್ನು ಕೊಡು
ತ್ತಿರಲೇ ಇಲ್ಲ. ಹಿಂದೆ ಓಡಿಹೋದ ನೂರಾರು ಜನರು ಹೇಳಿಕೇಳಿ ಅವಿವೇಕರಾ
ದವರು. ಅವರು ತಮ್ಮ ಫಲವನ್ನು ತಾವೇ ಈಗ ಉಣ್ಣುತ್ತಿರುವರು, ಮನು
ಷ್ಯನಾದವನು ಬಹಳ ಎಚ್ಚರಿಕೆಯಿಂದ ಹೆಜ್ಜೆಯನ್ನಿಡಬೇಕು. "ಕರ್ಮೇಂದ್ರಿ
ಯಾಣಿ ಸಂಯಮ್ಯ ಯ ಆಸ್ತೆ ಮನಸಾಸ್ಮರನ್ || ಇಂದ್ರಿಯಾರ್ಥಾನ್ ವಿಮೂಢಾ
ತ್ಮಾ ಮಿಥ್ಯಾಚಾರಃಸಉಚ್ಯತೇ || ಎಂದು ಪರಮಾತ್ಮನು ಹೇಳಿದಂತೆ, ಮಿಥ್ಯಾ
ಚಾರವು ಯಾವ ಕಾಲದಲ್ಲಿಯೂ ಪ್ರಯೋಜನಕ್ಕೆ ಬರತಕ್ಕದ್ದಲ್ಲ. ಕೆಲವರು
ಲೌಕಿಕ ಪ್ರತಿಷ್ಠೆಗಾಗಿ ಕರ್ಮೇಂದ್ರಿಯಗಳ ಮಟ್ಟಿಗೆ ನಿಗ್ರಹಮಾಡಿ ಮನಸ್ಸಿ
ನಲ್ಲಿ ವಿಷಯ ಭೋಗಕ್ಕೆ ದೊಡ್ಡ ಹರಿಯನ್ನು ತೋಡಿ ಬಿಡುವರು. ಇಂಥ
ವರು ಇಹಪರಗಳೆರಡಕ್ಕೂ ಎರವಾಗುವರು. ಇದೇ ಆತ್ಮಘಾತವು. ಇಂಥ ಆತ್ಮ
ಘಾತವು ಮೋಕ್ಷಕ್ಕೆ ವಿಘ್ನಕಾರಿಯಾಗುವದೆಂದು ಒಡೆದು ಹೇಳುವ ಕಾರಣವಿಲ್ಲ.
ಆದ್ದರಿಂದ ತಿಳಿದವರು ಕರ್ಮೇಂದ್ರಿಯಗಳ ತೃಪ್ತಿಗೆ ಶಾಸ್ತ್ರ ಸಮ್ಮತವಾದ ಸಾಧ
ನಗಳನ್ನಿಟ್ಟುಕೊಂಡು ಮನಸ್ಸಿನ ಸುಪ್ರಸನ್ನತೆಯನ್ನು ಕಾಯ್ದುಕೊಳ್ಳುವರು.
ವಿವೇಕದಿಂದ ನಡೆಯುವ ಗೃಹಸ್ಥಾಶ್ರಮಿಯು ನಿಜವಾಗಿಯೂ ಧನ್ಯನಾಗಿರುತ್ತಾನೆ.
ಅವನಿಗೆ ಸೃಷ್ಟಿಯೊಳಗಿನ ಎಲ್ಲ ವಿಷಯಗಳ ಅನುಭವವೂ ಬಂದು ಹೋಗುತ್ತದೆ.
ಯಾವ ಯಾವ ವಿಷಯಗಳಲ್ಲಿ, ಯಾವ ಯಾವ ರಸಗಳಲ್ಲಿ ಎಷ್ಟೆಷ್ಟು ರುಚಿಯಿರುವ
ದೆಂಬದನ್ನು ಅವನು ಕಂಡು ಬಿಡುತ್ತಾನೆ. ಯೋಗ್ಯನಾದ ಗೃಹಸ್ಥಾಶ್ರಮಿಯು
ಒಂದು ಬಗೆಯಿಂದ ವಿಷಯ ವಿರಕ್ತನೆಂತಲೇ ಹೇಳಲಾಗುವದು. ಆದ್ದರಿಂದ
ಎಲವೋ ಬ್ರಾಹ್ಮಣನೇ, ನೀನು ಸಾತ್ತ್ವಿಕನೂ, ಗೃಹಸ್ಥಾಶ್ರಮಿಯೂ ಆದದ್ದರಿಂದ
ನಿನ್ನಿಂದ ಆದ ಅಲ್ಪಸ್ವಲ್ಪ ಅಪರಾಧಗಳು ಕ್ಷಮ್ಯವಿರಬಹುದು. ಮುಖ್ಯವಾಗಿ
ನಿನ್ನ ಮನಸ್ಸು ವಿಷಯವಾಸನೆಯಿಂದ ಕಲಂಕಿತವಾಗಲು, ಆಸ್ಪದವಿಲ್ಲದ್ದರಿಂದ
ನೀನು ಪುಣ್ಯವಂತನೇ ಆಗಿರುವಿ. ಆದ್ದರಿಂದ ನೀನು ಸಂದೇಹಕ್ಕೊಳಗಾಗದೆ

ಮಾರುತಿಯ ಅರ್ಚಕನಾಗು. ನಿನಗೆ ಮಾರುತಿಯಿಂದ ಹಿಂಸೆಯಾಗದು.''

ಪ್ರಭುಗಳ ಸದ್ಬೋಧದಿಂದ ಬ್ರಾಹ್ಮಣನು ಸಂತುಷ್ಟನಾದನು. ಅವನ ಮನಸ್ಸು ಸಂಶಯದಿಂದ ವಿಮುಕ್ತವಾಯಿತು. ದೇಹದಿಂದ ಮಾಡಿದ ಪಾಪವು ವಜ್ರಲೇಪವಾಗದೆ ಮನಸ್ಸಿನಿಂದ ಮಾಡಿದ ಪಾಪವೇ ವಜ್ರಲೇಪವಾಗುವದೆಂದು ಅವನು ಮನೋಮಯ ಪಾಪದ ವಿಷಯವಾಗಿ ಭಯಭೀತನಾದನು. ಬಳಿಕ ಆ ಬ್ರಾಹ್ಮಣನು ಶ್ರೀಮಾರುತಿಯ ಪೂಜೆಗೆ ಆರಂಭಿಸಿದನು. ಆತನಲ್ಲಿ ನಿಜವಾಗಿಯೂ ಪವಿತ್ರತೆಯಿದ್ದದರಿಂದ ಮಾರುತಿಯಿಂದ ಆತನಿಗೆ ಅಕಲ್ಯಾಣವಾಗದೆ ಕ್ರಮೇಣ ಅವನ ಸತ್ವವು ವೃದ್ಧಿಯಾಗತೊಡಗಿತು. ಪ್ರಭುಗಳು ಶ್ರೀಮಾರುತಿಯ ಅರ್ಚನದ ಖರ್ಚಿಗಾಗಿ ಕೆಲವು ಹೊಲಗಳನ್ನು ಆ ಅರ್ಚಕನ ವಶಕ್ಕೊಪ್ಪಿಸಿದರು. ನಿತ್ಯ ಸೇವೆಯು ಬಹು ವಿಜೃಂಭಣೆಯಿಂದ ಸಾಗತೊಡಗಿತು.

ಈ ಪ್ರಕಾರ ಮಾರುತಿಯ ಅರ್ಚನದ ನಿಮಿಷವಾಗಿ ಪ್ರಭುಗಳು ತಮ್ಮಲ್ಲಿದ್ದ ಜೊಳ್ಳು ಶಿಷ್ಯರನ್ನು ಬಡಬಡ ಹೊರಗಟ್ಟಿದರು. ಪ್ರಭುಗಳ ಸೇವಕರಾಗಿದ್ದವರಲ್ಲಿ ನಿಜವಾದ ಸೇವಕರಾರು? ಡಾಂಭಿಕರಾರು ಎಂಬದು ಜಗತ್ತಿಗೆ ಒಡೆದು ಕಂಡಿತು. ಈ ಮಾತಿಗೆ ಕೆಲವು ದಿವಸಗಳು ಕ್ರಮಿಸಲು ಆ ಮಾರುತಿಯ ದೇವಾಲಯದ ಬಳಿಯಲ್ಲಿ ಟೇಹಾಳದಾಸನೆಂಬ ಒಬ್ಬ ಸತ್ಪುರುಷನು ಒಂದು ಗುಡಿಸಲು ಕಟ್ಟಿಕೊಂಡು ವಾಸಮಾಡಿದನು. ಅವನು ''ನಮಾತುಃ ಪರದೈವತಂ'' ಎಂದು ತಿಳಿಯುವ ಒಳ್ಳೇ ಸತ್ಪುರುಷನಾಗಿದ್ದನು. ಆತನ ತಾಯಿಯು ವೃದ್ಧಳಿದ್ದು ಪಾರಮಾರ್ಥದಲ್ಲಿ ಅಧಿಕಾರಸಂಪನ್ನಳಿದ್ದಳು. ಹೀಗೆ ಆ ತಾಯಿ-ಮಕ್ಕಳು ಮಾರುತಿಯ ಸಾನ್ನಿಧ್ಯವನ್ನು ಹಿಡಿದು ಅಲ್ಲಿ ವಾಸಿಸುತ್ತಿರಲು, ಅವರನ್ನು ಕಂಡು ಬೇರೆ ಕೆಲವರು ಸಾಧುಗಳು ಅಲ್ಲಿಗೆ ಬಂದು ಒಂದೊಂದು ಗುಡಿಸಲವನ್ನು ಕಟ್ಟಿಕೊಂಡು ವಾಸಮಾಡಿದರು. ತನ್ನ ಸ್ಥಾನದಲ್ಲಿ ಇದ್ದವರ ಪಾತ್ರಾಪಾತ್ರತೆಯನ್ನು ಪರೀಕ್ಷಿಸುವದು ಮಾರುತಿಯ ಕೆಲಸವಾಗಿತ್ತು. ಆದ್ದರಿಂದ ಆತನು ಅಲ್ಲಿ ಕೂಡಿದ ಸಾಧುಗಳಲ್ಲಿ ಸಾಧುವೇಷದ ಡಾಂಭಿಕರನ್ನು ಹೊರಗೆಡವಲು, ಒಂದುದಿನ ತನ್ನ ಕರಾಮತಿಯನ್ನು ವ್ಯಕ್ತಗೊಳಿಸಿದನು. ಟೇಹಾಳದಾಸನೂ, ಆತನ ತಾಯಿಯೂ ಅಧಿಕಾರಸಂಪನ್ನರಾದ್ದರಿಂದ ಪ್ರಭುಗಳು ಅವರನ್ನು ಪ್ರೀತಿಸುತ್ತಿದ್ದರು. ಯಾವಾಗಲೂ ಆ ಮುದುಕೆಯೊಡನೆ ಸಂಭಾಷಣ ಮಾಡುವದರಲ್ಲಿ ಕಾಲ ಕಳೆಯುತ್ತಿದ್ದರು. ಒಂದು ದಿನ ಮಧ್ಯರಾತ್ರಿಯಲ್ಲಿ ಆ ಮಾರುತೀ ಕ್ಷೇತ್ರದಲ್ಲಿದ್ದ ಎಲ್ಲ ಗುಡಿಸಲುಗಳಿಗೆ ಒಮ್ಮಿಂದೊಮ್ಮೆ ಬೆಂಕಿಯು ಹತ್ತಿತು. ಒಳಗೆ ಸುಖದಿಂದ ನಿದ್ರೆಹೋಗುತ್ತಿದ್ದ ಜನರು

ಜಡಪಡಿಸಿ ಹೊರಗೆ ಬಂದರು. ಆವಿಷವ ಪ್ರಭುಗಳು ಟೀಹಾಳದಾಸನ ಗುಡಿಸಲದಲ್ಲಿಯೇ ಇದ್ದರು. ಆತನ ಗುಡಿಸಲಕ್ಕೆ ಬೆಂಕಿಯು ಹತ್ತಿತು. ಊರಲ್ಲಿದ್ದ ಜನರು ಗಾಬರಿಯಾಗಿ ಬಂದರು. ಪ್ರಭುಗಳು ಒಳಸಿಕ್ಕಿರುವರೆಂದು ಎಷ್ಟೋ ಜನರು ಆಕ್ರೋಶ ಮಾಡತೊಡಗಿದರು. ಯಾರಿಗೂ ಉರಿಯುತ್ತಿರುವ ಗುಡಿಸಲೊಳಗೆ ಹೊಕ್ಕು ಪ್ರಭುಗಳನ್ನು ಹೊರಗೆ ತೆಗೆಯುವ ಧೈರ್ಯವಾಗಲಿಲ್ಲ. ಉಳಿದ ಸಾಧುವೇಷದ ಜನರಂತೂ ತಮ್ಮ ಸಾಮಾನುಗಳನ್ನು ಅಗ್ನಿನಾರಾಯಣನಿಗೆ ಸಮರ್ಪಿಸಿ ಜೀವ ಉಳಿದರೆ ಸಾಕೆಂದು ಹೊರಹಾರಿ ನಿಂತುಕೊಂಡರು. ಮುಂದೆ ನಾಲ್ಕಾರು ತಾಸುಗಳಲ್ಲಿ ಎಲ್ಲ ಗುಡಿಸಲುಗಳು ಸುಟ್ಟು ಬೂದಿಯಾದವು. ಪ್ರಭುಗಳಿದ್ದ ಟೀಹಾಳದಾಸನ ಗುಡಿಸಲವೂ ಸುಟ್ಟು ಬೂದಿಯಾಯಿತು. ಪ್ರಭುಗಳು ಟೀಹಾಳದಾಸನೊಡನೆ ಸುಟ್ಟುಹೋದರೆಂದು ಜನರು ದುಃಖಿಸಲಾರಂಭಿಸಿದರು. ಆದರೆ ಬೆಳ್ಳಗೆ ಬೆಳಗಾಗಲು ಪ್ರಭುಗಳು, ಟೀಹಾಳದಾಸ, ಆತನ ತಾಯಿ ಹೀಗೆ ಮೂವರೂ ಸುರಕ್ಷಿತವಾಗಿ ಆ ಗುಡಿಸಲದ ಬೂದಿಯ ಮೇಲೆ ಸ್ವಸ್ಥವಾಗಿ ಕುಳಿತುಕೊಂಡಿದ್ದರು. ಆ ತ್ರಿವರ್ಗರ ಕೂದಲಿಕ್ಕೆ ಕೂಡಾ ಬೆಂಕಿ ಹತ್ತಿದ್ದಿಲ್ಲ; ಈ ಚಮತ್ಕಾರದಿಂದ ಜನರು ದಂಗುಬಡೆದು ಹೋದರು. ಮತ್ತು ಪ್ರಭುಗಳು ಬದುಕಿ ಉಳಿದದ್ದಕ್ಕಾಗಿ ತುಂಬಾ ಸಂತೋಷಪಟ್ಟು ಅವರ ಬಳಿಗೆ ಧಾವಿಸಿದರು. ಹೀಗೆ ಬೆಳಗಾದಮೇಲೆ ಜನರ ಸಂದಣಿಯು ಹೆಚ್ಚಾಗಲು ಪ್ರಭುಗಳು ಅವರನ್ನು ಕುರಿತು—ಅಪ್ಪಗಳಿರಾ, ನೋಡಿದಿರಾ, ಶ್ರೀ ಮಾರುತಿಯ ಕರಾಮತಿಯನ್ನು! ಆತನು ಡಾಂಭಿಕರನ್ನು ತನ್ನ ಹತ್ತರ ಇರಗೊಡಲಾರನು; ಇಲ್ಲಿ ನಿಂತವರು ಬಹಳ ಸಾಧುಗಳಿದ್ದರು. ಅವರೆಲ್ಲರು ಭಕ್ತರೆಂದು ಶ್ರೀ ಮಾರುತಿಯು ನಿರ್ಣಯಿಸಿದ್ದನು. ಈ ಟೀಹಾಳದಾಸನೂ ಈತನ ತಾಯಿಯೂ ಪಾತ್ರ ಯೋಗ್ಯರಿರುವರು. ಇವರ ಪುಣ್ಯದಿಂದಲೇ ನಾನು ಈ ದಿವಸ ಅಗ್ನಿ ನಾರಾಯಣನ ಕೈಯೊಳಗಿಂದ ಪಾರಾದೆನು, ಬಹಳ ಹೇಳುವದೇನು? ಇದು ಪಾತ್ರಾಪಾತ್ರ ಪರೀಕ್ಷಣದ ಪ್ರಸಂಗವಿರುವದು ಜೋಕೆ! ಜೋಕೆ!!

# ೧೮ನೆಯ ಪ್ರಕರಣ.

## ಗರ್ವನಿರಸನ

ಸತ್ಪುರುಷರೆಂದರೆ ಎಷ್ಟೋ ಜನರಿಗೆ ತಲೆಶೂಲಿಯೇ ಏಳುತ್ತಿರುತ್ತದೆ. ಸೂರ್ಯನನ್ನು ಕಂಡು ಗೂಗೆಯು ನಿಂದಿಸುವಂತೆಯೂ, ಭಾಗೀರಥಿಯನ್ನು ಮಡಿವಾಳರ ಬಾನಿಯು ಜರೆಯುವಂತೆಯೂ ಅವರು ಸಜ್ಜನರನ್ನು ಸರ್ವದಾ ನಿಂದಿಸುತ್ತಿರುತ್ತಾರೆ. ಅಂಥ ಜನರಿಗೆ ವಿದ್ಯಾಗರ್ವವೊಂದು ಕೂಡಿದ್ದರಂತೂ ಅವರ ಸತ್ಪುರುಷನಿಂದೆಗೆ ಸೀಮೆಯೇ ಉಳಿಯುವದಿಲ್ಲ. ಈ ಸಾಮಾನ್ಯ ನಿಯಮಕ್ಕೆ ಒಳಗಾದ ಜನರು ಪ್ರಭುಗಳ ಕಾಲದಲ್ಲಿಯೂ ಹೇರಳವಾಗಿದ್ದರು. ಅಪವಿತ್ರ ಜನರು ಪವಿತ್ರಜನರನ್ನು ದ್ವೇಷಿಸುವದು ಸ್ವಾಭಾವಿಕವಾಗಿದೆ. ಯಾರಿಗೆ ಸತ್ವಗುಣದ ಅಂಶವು ಕೂಡಾ ಕೈವಶವಾಗಿಲ್ಲವೋ, ಯಾರು ಸರ್ವದಾ ರಜತಮಗಳಲ್ಲಿಯೇ ಹೊರಳಾಡುವರೋ ಅಂಥವರಿಗೆ ಕೇವಲ ಸತ್ವಗುಣದ ಸತ್ಪುರುಷರ ಹೃದಯವು ತಿಳಿಯದಿದ್ದರೆ ಆಶ್ಚರ್ಯವಲ್ಲ!

ನಾಂದೇಡದಲ್ಲಿ ಒಬ್ಬ ಬ್ರಾಹ್ಮಣನು ವೇದ ಶಾಸ್ತ್ರಗಳಲ್ಲಿ ಪಾರಂಗತನಾಗಿ ಬಹು ಮತ್ತನಾಗಿದ್ದನು. ಇಂಥ ಉನ್ಮತ್ತಾವಸ್ಥೆಯಿಂದ ಆತನು ಎಷ್ಟು ವಿದ್ಯಾವಂತನಾಗಿದ್ದರೂ ಸಕ್ಕರೆಯಿಂದ ತುಂಬಿದ ಚೀಲಗಳು ಎಷ್ಟರ ಮಟ್ಟಿಗೆ ಅದರ ಆಸ್ವಾದವನ್ನು ತಕ್ಕೊಂಡಿರುವವೋ ಅಷ್ಟರಮಟ್ಟಿಗೆ ಆ ಬ್ರಾಹ್ಮಣನು ಆ ವೇದ ಶಾಸ್ತ್ರಗಳ ಧರ್ಮವನ್ನು ಬಲ್ಲವನಾಗಿ, ಕೇವಲ ಶಬ್ದ ಸಮೂಹಗಳನ್ನು ಹೊಟ್ಟೆಯಲ್ಲಿ ತುಂಬಿಕೊಂಡು ಫೋನೋಗ್ರಾಫ (ಮಾತಾಡುವ ಪೆಟ್ಟಿಗೆ) ವನ್ನು ಹೋಲುತ್ತಿದ್ದನೆಂದು ಹೇಳಬಹುದು. ಅವನು ಸದ್ವೃತ್ತಿಯ ಗಂಧವನ್ನು ಕೂಡಾ ಅರಿಯದೆ ತನ್ನ ವಿದ್ಯೆಯಮದದಲ್ಲಿಯೇ ಕಣ್ಣು ಮುಚ್ಚಿ ಬಾಯಿ ತೆರೆಯುತ್ತಿದ್ದನು. ದ್ರವ್ಯವನ್ನು ಸಂಪಾದಿಸಿದ ಮನುಷ್ಯನು ನಾನಾತರದ ಭೋಗಗಳನ್ನು ಭೋಗಿಸುವದರಲ್ಲಿಯೂ ದಾನಾದಿಗಳಿಂದ ಬಡಬಗ್ಗರ ಯೋಗಕ್ಷೇಮ ತಕ್ಕೊಳ್ಳುವದರಲ್ಲಿಯೂ ತನ್ನ ದ್ರವ್ಯವನ್ನು ವ್ಯಯಗೊಳಿಸದಿದ್ದರೆ ವ್ಯರ್ಥವಾಗಿ ದ್ರವ್ಯ ಸಂಪಾದಿಸಿದನೆಂದು ಹ್ಯಾಗೆ ಜನರಿಂದ ಅನ್ನಿಸಿಕೊಳ್ಳುವನೋ ಹಾಗೆ ವಿದ್ಯಾವಂತನಾದವನು, ವಿನಯಾದಿ ಸದ್ಗುಣಗಳಿಂದ ಯುಕ್ತನಾಗಿ ತನ್ನ ಪಾಂಡಿತ್ಯದ ಉಪಯೋಗವು ಜನ ಹಿತದಕಡೆಗೆ ಆಗುವಂತೆ ಮಾಡದಿದ್ದರೆ ಜನರಿಂದ ಅನ್ನಿಸಿಕೊಳ್ಳುವನು,

ಆದ್ದರಿಂದ ವಿದ್ಯಾವಂತರಾದವರು ಸರ್ವದಾ ಜಾಗರೂಕರಾಗಿಯೇ ಇರಬೇಕು. ಅಂದರೇ ಅವರು ಪಾನಮಾಡಿದ ವಿದ್ಯೆಯು ವಿದ್ಯಾಮೃತವಾಗುವದು. ಇಲ್ಲದಿದ್ದರೆ ·········ಸೇವಿಸಿದಂತಾಗುವದು. ಇರಲಿ.

ನಾಂದೇಡಶಾಸ್ತ್ರಿಯು ಅತಿಶಯವಾಗಿ ಕೊಬ್ಬಿದ್ದನು. ಅವನಿಗೆ ಪರದುಃಖವೆಂಬದು ಕನಸಿನಲ್ಲಿ ಕೂಡ ಗೊತ್ತಿರಲಿಲ್ಲ. ಅವನು ಹೋದ ಹೋದಲ್ಲಿ ಪಂಡಿತರಾದ ಬ್ರಾಹ್ಮಣರನ್ನು ವಾದದಲ್ಲಿ ಸೋಲಿಸುವದು, ಸಭೆಯಲ್ಲಿ ಅವರ ಮಾನಖಂಡನ ಮಾಡುವದು ಅವರಿಂದ ಜಯಪತ್ರವನ್ನು ಸಂಪಾದಿಸುವದು ಇವೇ ಮೊದಲಾದ ಕಾರ್ಯಗಳನ್ನು ಮಾಡುತ್ತಿದ್ದನು. ಆತನ ಈ ಕೃತಿಯಿಂದ ಮಾನವಂತರಾದ ಎಷ್ಟೋ ಜನ ಬ್ರಾಹ್ಮಣರು ನೊಂದುಕೊಂಡಿದ್ದರು. ಇವನ ಅಬ್ಬರಕ್ಕೆ ವೈದಿಕ ಪಂಡಿತರು ಬೆದರಿ ಹೋಗಿದ್ದರು. ಒಬ್ಬರನ್ನು ಅಪಮಾನಗೊಳಿಸುವದೆಂದರೆ ಅವರನ್ನು ಕೊಂದಹಾಗೆಯೇ ಆಗುವದೆಂಬದು ಆ ಶಾಸ್ತ್ರಿಗೆ ತಿಳಿದೇ ಇರಲಿಲ್ಲ. ತಿಳಿದಿದ್ದರೂ ಅವನ ಮನಸ್ಸು ಆ ರೀತಿಯಾದ ಹಿಂಸೆಯನ್ನು ಬಿಡದಾಗಿತ್ತು. ಹೀಗೆ ಆತನು ಬಹುಜನ ಬ್ರಾಹ್ಮಣರನ್ನು ಅವಮಾನಗೊಳಿಸಿ ಅವರ ನಿಟ್ಟುಸಿರನ್ನು ಉಡಿಯಲ್ಲಿ ಕಟ್ಟಿಕೊಂಡು ಮಾಣಿಕಪುರಿಗೆ ಬಂದನು. ಇಷ್ಟು ತಾಮಸಿಯಾದ ಈ ಪುರುಷನಲ್ಲಿ ಪಾತಾಳಗರುಡವನ್ನು ಹಾಕಿ ಹುಡುಕಿದರೂ ಸತ್ವಗುಣದ ಕಣವು ಸಿಗಲಾರದೆಂಬದು ಸಹಜವಷ್ಟೇ: ಅವನು ತನ್ನ ತಮೋಮಯ ವೃತ್ತಿಗನುಸರಿಸಿ ಪ್ರಭುಗಳನ್ನು ಜರೆಯುತ್ತಿದ್ದನು. ಪ್ರಭುಗಳಿಗೆ ಏನು ಬರುತ್ತದೆ? ಅವರೇನು ವಿದ್ವಾಂಸರೇ? ತರ್ಕ, ಮೀಮಾಂಸೆಗಳನ್ನು ಬಲ್ಲವರೇ? ವ್ಯಾಕರಣಾದಿಗಳನ್ನು ನೋಡಿದವರೇ? ಏನೂ ಇಲ್ಲದೆ ಪೊಳ್ಳು ಪ್ರತಿಷ್ಠೆಯನ್ನು! ಜನರಲ್ಲಿ ಹಬ್ಬಿಸಿರುವರು. ಓನಾಮದ ಮರಿಯು ಹೊಟ್ಟೆಯಲ್ಲಿಲ್ಲದ ಇವರು ಎಂಥ ಸಾಧುಗಳು? ಎಂದು ಜನರಿಗೆ ಪ್ರಶ್ನಮಾಡಿ ಆತನು ಪ್ರಭುಗಳನ್ನು ನಿಂದಿಸುತ್ತಿದ್ದನು. ದೊಡ್ಡ ವಿದ್ವತ್ತೆಯಲ್ಲಿಯೇ-ಅಧ್ಯಯನದಲ್ಲಿಯೇ ಸಾಧುತ್ವವಿದೆಯೆಂದು ಆ ವೈದಿಕ ಶಾಸ್ತ್ರಿಯು ತಿಳಿಯುತ್ತಿದ್ದನು. ಅವನು ತನ್ನ ಈ ತಿಳುವಳಿಕೆಗೆ ಅನುಸರಿಸಿ ಪ್ರಭುಗಳ ಸಾಧುತ್ವದ ವಿಷಯವಾಗಿ ಟೀಕೆಯನ್ನು ನಡಿಸಿದ್ದನು. ಅವನ ಈ ನಿಂದಾಪರವಾಕ್ಯಗಳು ದಿನಾಲು ಪ್ರಭುಗಳ ಕಿವಿಯವರೆಗೆ ಬರುತ್ತಿದ್ದವು. ಆದರೆ ಆ ಮಹಾತ್ಮರು ಅವುಗಳ ಶ್ರವಣದಿಂದ ಸ್ವಲ್ಪವೂ ಖಿನ್ನವಾಗದೆ ಮುಗುಳುನಗೆ ನಕ್ಕು ಹೇಳ ಬಂದವರನ್ನೇ ಸಮಾಧಾನಗೊಳಿಸುತ್ತಿದ್ದರು. ಹೀಗಿರಲು ಒಂದು ದಿನ ಒಂದು ಚಮತ್ಕಾರವಾಯಿತು. ಅದೇನಂದರೆ:—

ಶಾಸ್ತ್ರಿಯು ನಗರಿಯಲ್ಲಿ ಕೆಲವು ಜನ ಬ್ರಾಹ್ಮಣರೊಡನೆ ವಾದಮಾಡುತ್ತ ಕುಳಿತುಕೊಂಡಿದ್ದನು. ಆಗ ಪ್ರಾತಃಕಾಲದ ಎಂಟುಗಂಟೆಯಾಗಿರಬಹುದು. ಅಷ್ಟರಲ್ಲಿ ಒಬ್ಬ ನಾಪಿಕ ಪುತ್ರನು ಅಲ್ಲಿಗೆ ಬಂದನು. ಆ ಹುಡುಗನು ಚಿಕ್ಕ ವಯಸ್ಸಿನವನಾಗಿದ್ದನು. ಆದರೂ ಅವನ ತಂದೆಯು ಅವನಿಗೆ ತಮ್ಮ ಕುಲಕಸಬಿನಲ್ಲಿ ಚನ್ನಾಗಿ ವ್ಯವಸಾಯಮಾಡಿಸಿದ್ದನು. ಇದಲ್ಲದೆ ಆ ಹುಡುಗನು ತನ್ನ ತಂದೆಯಂತೆ ಪ್ರಭುವಿನ ಭಕ್ತನಾಗಿದ್ದನು. ಪ್ರಭುಗಳಲ್ಲಿ ಅವನ ನಿಷ್ಠೆಯು ವಿಶೇಷವಾಗಿತ್ತು. ಭಕ್ತಿಯೋಗದಲ್ಲಿ ಆ ಬಾಲಕನು ಪ್ರಖ್ಯಾತನಾಗಿದ್ದನೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಎಳೆಯ ಮಕ್ಕಳಲ್ಲಿ ಭಕ್ತಿಯೋಗದ ಅಥವಾ ನಿಷ್ಠೆಯ ಬೆಳವಣಿಗೆಯು ಬಹು ಬೇಗ ಆಗುತ್ತದೆ. ಹೀಗೆ ಸದ್ಭಕ್ತನಾದ ಅರ್ಥಾತ್ ಮುಮುಕ್ಷುಕೋಟಿಯಲ್ಲಿ ಪರಿಗಣಿಸಲ್ಪಡುವ ಆ ಬಾಲಕನು ಬಗಲಲ್ಲಿ ಹಡಪವನ್ನು (ಕ್ಷೌರದ ಸಾಮಗ್ರಿಗಳನ್ನು) ಹಾಕಿಕೊಂಡು ಬಾಗಿಲಕ್ಕೆ ಬರಲು, ಬ್ರಾಹ್ಮಣರ ಸಂಗಡ ವಾದನಡೆಸಿದ್ದ ಶಾಸ್ತ್ರಿಯು ಕ್ಷೌರದ ಸ್ಮರಣೆಯಾಗಿ ಕೂಡಲೆ ಆ ಬಾಲಕನನ್ನು ಕರೆದು "ನಮ್ಮ ಕ್ಷೌರಮಾಡುತ್ತೀಯಾ" ಎಂದು ಕೇಳಿದನು. ಅದಕ್ಕೆ ಆ ಹುಡುಗನು "ನಿಮ್ಮ ಕ್ಷೌರಮಾಡಬೇಕೆಂತಲೇ ಇಲ್ಲಿಗೆ ಬಂದಿರುತ್ತೇನೆ" ಎಂದು ಪ್ರತ್ಯುತ್ತರ ಕೊಟ್ಟನು. ಕೂಡಲೆ ಶಾಸ್ತ್ರಿಯು ವಾದವನ್ನು ಅಲ್ಲಿಗೇ ನಿಲ್ಲಿಸಿ ಹೊತ್ತ ಪಂಜಿಯನ್ನು ನೆಲಕ್ಕೆ ಹಾಸಿ ಕ್ಷೌರದವನ ಮುಂದೆ ಕುಳಿತುಕೊಂಡನು. ಶಾಸ್ತ್ರಿಯು ರೂಢಿಗೆ ವಿರುದ್ಧವಾಗಿ ಕ್ಷೌರಕ್ಕಾಗಿ ತಣ್ಣೀರನ್ನು ತರಲು, ನಾಪಿಕನು ಸುಮ್ಮನಿರದೆ, ಶಾಸ್ತ್ರಿಗಳನ್ನು ಕುರಿತು "ನೀವು ಶಾಸ್ತ್ರಿಗಳೆನಿಸಿಕೊಳ್ಳುವಿರಿ? ಹೀಗೆ ತಣ್ಣೀರನ್ನು ತಂದಿರುವಿರಿ; ಇದೇನು? ಇದೂ ಹೋಗಲಿ, ಈಗ ಚಳಿಬಿಟ್ಟಿದೆ ಈ ಆಣೆಕಲ್ಲಿನಂಥ ನೀರನ್ನು ತಲೆಗೆ ತಿಕ್ಕಿದರೆ ನಡುಗ ಹೋದೀರಿ; ಆದ್ದರಿಂದ ಬಿಸಿನೀರನ್ನು ತಕ್ಕೊಂಡು ಬರ್ರಿ, ಎಂದು ನುಡಿದನು. ಅವನ ಮಾತು ಕೇಳಿ—

ಶಾಸ್ತ್ರಿಯು—ಏನೋ ಹುಡುಗಾ ಸುಮ್ಮನೆ ಕ್ಷೌರಮಾಡಿ ಹೋಗಬಾರದೇ? ಇಲ್ಲಿ ಬೆಂಕಿ-ಬಿಸಿನೀರುಗಳು ಎಲ್ಲಿ ಬೇಕು? ಈಗ ಒಳಿಯಲ್ಲಿ ಶಿಷ್ಯರು ಕೂಡಾ ಯಾರೂ ಇರುವದಿಲ್ಲ.

ನಾಪಿಕ—ಏನು; ಬೆಂಕಿಯಿಲ್ಲವೆಂದು ನುಡಿಯುತ್ತೀರಾ? ನಿಮ್ಮ ಹೃದಯದಲ್ಲಿ ಯಾವಾಗಲೂ ಜಠರಾಗ್ನಿಯು ಸಿದ್ಧವಿರುತ್ತಿರಲು ಬೆಂಕಿಯಿಲ್ಲವೆಂದು ಹೇಳಬಹುದೇ?

ಶಾಸ್ತ್ರಿಯು—ಜಠರಾಗ್ನಿಯಿಂದ ಬಹಿರಂಗದಲ್ಲೇನು ಪ್ರಯೋಜನವು?

ನಾಪಿಕ—ನಿಮ್ಮಂಥ ಯೋಗ್ಯತಾಸಂಪನ್ನರಾದ ಬ್ರಾಹ್ಮಣರಿಗೆ ಬಹಿರಂಗ ದಲ್ಲಿ ಜಠರಾಗ್ನಿಯಿಂದ ಪ್ರಯೋಜನವಾಗುವದಿಲ್ಲವೇ? ಹಾಗಾದರೆ ನೀವು ಬರಿಯ ಬಾಯ್ಬಡಕರೇ ಸರಿ? ನಿಮ್ಮ ವಿದ್ಯೆಯು ನಿಷ್ಪ್ರಯೋಜಕವೆಂದು ತೋರುತ್ತದೆ. ಶಾಸ್ತ್ರಿಗಳವರೇ ಅನುಭವವಿಲ್ಲ- ಹಾಗು ಕಾರ್ಯದಲ್ಲಿ ಉಪಯೋಗವಿಲ್ಲದ ನಿಮ್ಮ ವಿದ್ಯೆಯನ್ನು ತಕ್ಕೊಂಡು ಮಾಡುವದೇನು?

ಶಾಸ್ತ್ರಿಯು—(ಅತ್ಯಂತ ಕ್ರುದ್ಧನಾಗಿ) ಮೂರ್ಖಾ, ಸಣ್ಣ ಹುಡುಗ ನೆಂದು ಸುಮ್ಮನಿದ್ದರೆ ಇಷ್ಟುದ್ದ ಬಾಯಿಹರಿಬಿಟ್ಟೆಯಾ? ಹಾಗಾದರೆ ನೀನು ನಿನ್ನ ಜಠರಾಗ್ನಿಯ ಮೇಲೆ ಈ ನೀರನ್ನು ಕಾಯಿಸು ನೋಡೋಣ;

ಈ ಮೇರೆಗೆ ಶಾಸ್ತ್ರಿಯು ಮಾತನಾಡಲು ನಾಪಿಕ ಬಾಲಕನು ತಡವಿಲ್ಲದೆ ಅಂಗಾತವಾಗಿ ಮಲಗಿ ತನ್ನ ಹೊಟ್ಟೆಯಮೇಲೆ ಬಟ್ಟಲವನ್ನು ಇಟ್ಟುಕೊಂಡು ಒಂದುಕಾಲುಗಂಟೆಯಲ್ಲಿ ನೀರು ಸಳಮಳ ಕುದಿಯುವ ಹಾಗೆ ಮಾಡಿದನು. ನಾಪಿಕ ಪುತ್ರನ ಈ ಅದ್ಭುತ ಕೃತಿಯನ್ನು ನೋಡಿ ಶಾಸ್ತ್ರಿಯು ಬೆದರಿದನು. ಸಾಮಾನ್ಯನಾದ ಈ ಬಾಲಕನು ಹೀಗೆ ಇಷ್ಟು ಅದ್ಭುತಕೃತಿಯನ್ನು ಮಾಡಲು ನಿಮಿತ್ತವೇನ? ಈತನಿಗೆ ಈ ಯೋಗ್ಯತೆಯು ಎಲ್ಲಿಂದ ಪ್ರಾಪ್ತವಾಗಿರಬಹುದು? ಎಂದು ಯೋಚಿಸಿದನು. ಆಗ ಅವನಿಗೆ ಅಲ್ಲಿ ಇದ್ದ ಬ್ರಾಹ್ಮಣರ ಮುಖಾಂತರ ವಾಗಿ ಈ ಬಾಲಕನು ಪ್ರಭುಗಳ ಸೇವೆಯಲ್ಲಿದ್ದ ಒಬ್ಬ ನಾಪಿಕನ ಮಗನೆಂದೂ ಈತನಾದರೂ ಪ್ರಭುಗಳ ಭಕ್ತನೆಂದೂ ಗೊತ್ತಾಯಿತು. ಶಾಸ್ತ್ರಿಯ ಎದೆಯು ಧಸ್ಸೆಂದಿತು. ಪ್ರಭುಗಳ ಸೇವೆಮಾಡಿದ ಸಾಮಾನ್ಯರೂ ಕೂಡಾ ಇಂಥ ಯೋಗ್ಯ ತೆಯನ್ನು ಪಡೆ[illegible]ಗ ಸಾಕ್ಷಾತ್ ಪ್ರಭುಗಳ ಯೋಗ್ಯತೆಯನ್ನು ಬಣ್ಣಿಸಲೇ ಅಸದಳವಾ[illegible]. ನಾನು ಪಾಪಿಯು; ಕುಬುದ್ಧಿಯು; ಪ್ರಭುಗಳನ್ನು ಬಹಳವಾಗಿ ಹಳಿದೆನು ಎಂದೆಂದುಕೊಂಡು ಥಟ್ಟನೆ ಆ ನಾಪಿಕ ಬಾಲಕನ ಚರಣ ಕ್ಕೆರಗಿದನು. ಆಗ ಶಾಸ್ತ್ರಿಯ ಕಣ್ಣುತುಂಬಾ ನೀರುಹೋಗುತ್ತಿದ್ದವು ಅವನ ಕಂಠವು ಬಿಗಿದು ಬಂದಿತ್ತು. ಮಾತಾಡಲಿಕ್ಕೆ ಒದಲೊಲ್ಲದು.

ಈ ರೀತಿ ಶಾಸ್ತ್ರಿಯು ಆವಸ್ಥೆಯಾಗಿ ಅವನು ಚರಣಕ್ಕೆರಗಲು ನಾಪಿಕನು ದೂರಸರಿದು, ಸ್ವಾಮಿ, ತಾವು ಬ್ರಾಹ್ಮಣರು; ತಮ್ಮಿಂದ ನಮಸ್ಕರಿ ಸಿಕೊಳ್ಳುವಷ್ಟು ಅಧಿಕಾರವು ನನ್ನಲ್ಲಿಲ್ಲ; ಎಂದು ವಿನಯದಿಂದ ನುಡಿದನು. ಅದಕ್ಕೆ ಶಾಸ್ತ್ರಿಯು ತಮ್ಮಾ, ನೀನು ಜಾತಿಯಿಂದ-ವಯಸ್ಸಿನಿಂದ ಸಣ್ಣವನಿದ್ದರೂ ಯೋಗ್ಯತೆಯಲ್ಲಿ ದೊಡ್ಡವನಿರುತ್ತೀ, ನಿನ್ನ ಸಹವಾಸಂಗಕ್ಕೆ ಸಹ ನಮ್ಮಂಥ ಶಾಸ್ತ್ರ

ಜ್ಞರು ಹತ್ತಲಾರರು. ನೀನು ನನ್ನ ಮೇಲೆ ದಯ ತೋರಿ ಪ್ರಭುಗಳ ದರುಶನ ಮಾಡಿಸು; ಮತ್ತು ಪಾಪಿಯಾದ ನನ್ನನ್ನು ಉದ್ಧರಿಸುವ ಹಾಗೆ ಅವರನ್ನು ಪ್ರಸನ್ನೀಕರಿಸು ಎಂದು ಬಹು ವಿಧವಾಗಿ ಪ್ರಾರ್ಥಿಸಿದನು. ಶಾಸ್ತ್ರಿಯು ಗರ್ವ ರಹಿತನಾಗಿ ಹೀಗೆ ನಾಪಿಕನನ್ನು ಪ್ರಾರ್ಥಿಸಲು, ಅಲ್ಲಿದ್ದ ಬ್ರಾಹ್ಮಣರಿಗೆ ಸಮಾಧಾನವಾಯಿತು. ಅವರು ಆ ಶಾಸ್ತ್ರಿಯನ್ನೂ ನಾಪಿಕನನ್ನೂ ಕರಕೊಂಡು ಪ್ರಭುಗಳ ಬಳಿಗೆ ಹೋದರು. ಪರಮ ಉದ್ಧಟನಾದ ಶಾಸ್ತ್ರಿಯು ಗರ್ವಭಂಗಿತನಾಗಿ ತಮ್ಮೆಡೆಗೆ ಬಂದದ್ದನ್ನು ಜ್ಞಾನಿಗಳಾದ ಆ ಮಹಾತ್ಮರು ತಿಳಿದಿದ್ದರೂ ರಸಭಂಗವಾಗಬಾರದೆಂದು ಆ ಶಾಸ್ತ್ರಿಯನ್ನು ಕುರಿತು—ಶಾಸ್ತ್ರಿಗಳೇ ಇತ್ತ ಬನ್ನಿರಿ; ತಾವು ದೊಡ್ಡವರು; ಚತುರ್ವೇದ ಷಟ್‌ಶಾಸ್ತ್ರಗಳನ್ನು ಬಲ್ಲವರು; ನಮಗೇನು ಬರುತ್ತದೆ? ಎದೆಶೀಳಿದರೆ ಮೂರು ಅಕ್ಷರಗಳು ಶಿಕ್ಕಲಾರವು; ಎಂದು ಅನ್ನಲು ಹತಬುದ್ಧನಾದ ಶಾಸ್ತ್ರಿಯು ಪ್ರಭುಗಳ ಚರಣಗಳಲ್ಲಿ ಹೊರಳಾಡುತ್ತ ಕೃತಾಪರಾಧಕ್ಕೆ ಕ್ಷಮೆಯನ್ನು ಯಾಚಿಸತೊಡಗಿದನು. ಪ್ರಭುಗಳು ಏನೂ ತಿಳಿಯದವರಂತೆ ಸುಮ್ಮನೆ ಕುಳಿತರು. ಅವನ ಸಂಗಡ ಬಂದಿದ್ದ ಬ್ರಾಹ್ಮಣರು ಆತನ ಸಮಗ್ರ ವೃತ್ತಾಂತವನ್ನು ಹೇಳಿದರು. ಅದನ್ನು ಕೇಳಿ ಪ್ರಭುಗಳು ನಕ್ಕು ನುಡಿದರೇನಂದರೆ:—

ಪಂಡಿತರೇ, ನಿಮ್ಮಂಥವರ ಸ್ಥಿತಿಯು ಹೀಗೆ ಆಗಬೇಕೆ? ನಾನೇ ಪಂಡಿತನೆಂದು ಮೆರೆಯುವದು ಆತ್ಮ ಪೌರುಷವಲ್ಲವೆ? ಆತ್ಮಪೌರುಷವು ಆತ್ಮಘಾತವೆಂಬದನ್ನು ಅರಿಯಿರಾ? ಇದಕ್ಕೊಂದು ಮಹಾ ಭಾರತದೊಳಗಿನ ಉದಾಹರಣೆಯನ್ನು ಹೇಳುವೆನು ಕೇಳಿರಿ—"ಗಾಂಡೀವಧನುಸ್ಸಿನ ನಿಂದೆಯನ್ನು ಮಾಡಿದವರ ಶಿರವನ್ನು ಧರೆಗಿಳಿಸುವೆನೆಂದು ಅರ್ಜುನನು ಸಂಕಲ್ಪ ಮಾಡಿದ್ದನು. ಒಂದು ಪ್ರಸಂಗದಲ್ಲಿ ಧರ್ಮರಾಜನಿಗೇ ಗಾಂಡೀವದ ತಿರಸ್ಕಾರವನ್ನು ಮಾಡಬೇಕಾದ ಸಮಯವು ಬಂದಿತು. ಆಗ ತನ್ನ ಸಂಕಲ್ಪಕ್ಕೆ ಸರಿಯಾಗಿ ಅರ್ಜುನನು ಧರ್ಮರಾಜನ ಶಿರಚ್ಛೇದ ಮಾಡಬೇಕಾಯಿತು. ಕೂಡಲೆ ಅವನು ಗಾಂಡೀವನ್ನು ಟಣತ್ಕರಿಸಿ ಅದಕ್ಕೆ ಬಾಣವನ್ನು ಹೂಡಿದನು. ಈ ಸಂಗತಿಯು ಶ್ರೀ ಕೃಷ್ಣಪರಮಾತ್ಮನಿಗೆ ತಿಳಿಯಿತು; ಪಾಂಡವರನ್ನೇ ತನ್ನ ಪಂಚಪ್ರಾಣವೆಂದು ತಿಳಿಯುತ್ತಿದ್ದ ಆ ಪರಮಾತ್ಮನು ಎಲ್ಲಿ ಅನರ್ಥವಾಗುವದೋ ಎಂದು ತಟ್ಟನೆ ಅಲ್ಲಿಗೆ ಬಂದನು. ಅರ್ಜುನನು ಬಾಣ ಬಿಡು-ಬಿಡುವಷ್ಟರಲ್ಲಿ ಪರಮಾತ್ಮನು ಅಲ್ಲಿಗೆ ಬಂದದ್ದರಿಂದ ಮುಂದಿನ ಅನರ್ಥವು ತಪ್ಪಿತು. ಆಗ ಪರಮಾತ್ಮನು ಅರ್ಜುನನನ್ನು ಕುರಿತು ನುಡಿದ

ನೇನಂದರೆ—:"ಅರ್ಜುನಾ, ಎಂಥವನೋ ನೀನು; ಪ್ರತ್ಯಕ್ಷ ಅಣ್ಣನಮೇಲೆ ಧನುಸ್ಸನ್ನೆತ್ತಿದೆಯಾ? ನಿನಗೆ ಧಿಕ್ಕಾರವಿರಲಿ. ಧರ್ಮರಾಯನು ನಿನಗೆ ಜೇಷ್ಠ ಭ್ರಾತೃವಾದ್ದರಿಂದ ಪಿತೃ ಸಮಾನನಲ್ಲವೆ? ನೀನು ಈಗ ಅವನನ್ನು ಕೊಲ್ಲದಿದ್ದರೂ ಅವನ ಮೇಲೆ ಧನುಸ್ಸನ್ನೆತ್ತಿ ಅವನ ಅಪಮಾನಮಾಡಿದ್ದರಿಂದ ನೀನು ಅವನನ್ನು ಮನಸಾ ಕೊಂದಹಾಗಾಯಿತು. ಆದ್ದರಿಂದ ನಿನಗೆ ಈಗ ಪಿತೃ ಹತ್ಯೆ-ಭ್ರಾತೃಹತ್ಯೆ ಪ್ರಾಪ್ತವಾಗಿರುವವು. ಇದಕ್ಕೆ ಹೇಗೆ ಮಾಡುವೆ? ನಿನ್ನಂಥ ತಿಳಿದವರಿಂದಲೂ ಹೀಗೆ ಪ್ರಮಾದವಾಗಬೇಕೆಂದರೆ ಆಶ್ಚರ್ಯವೇ ಸರಿ!

ಈ ಮೇರೆಗೆ ಶ್ರೀ ಪರಮಾತ್ಮನು ಮಾತನಾಡಲು ಅರ್ಜುನನು ಪಶ್ಚಾತ್ತಾಪಪಟ್ಟು ತೊಟ್ಟ ಬಾಣವನ್ನು ಎತ್ತೋ ಬಿಟ್ಟು ಕೃಷ್ಣಾ, ನನ್ನಿಂದ ಮಹದಪರಾಧವಾಯಿತು. ನಾನು ಈ ದೋಷನಿವೃತ್ತಿಗೆ ಯಾವ ತಪಸ್ಸನ್ನಾಚರಿಸಲಿ? ಎಂದು ಕೇಳಿದನು. ಆಗ ಶ್ರೀ ಕೃಷ್ಣಪರಮಾತ್ಮನು ಈ ಪಾಪದ ಪ್ರಾಯಶ್ಚಿತ್ತಕ್ಕಾಗಿ ಒಂದು ಹಂಚಿಕೆಯನ್ನು ಹೇಳಿದನು. ಅದು ಬಹು ಮಹತ್ವದ್ದಿರುತ್ತದೆ, ಅದೇನಂದರೆ–ಅರ್ಜುನಾ, ಈಗ ನೀನು ನಿನ್ನ ಅಣ್ಣನ ಘಾತ ಮಾಡಿದ್ದರಿಂದ ಈ ದೋಷ ನಿವಾರಣಕ್ಕಾಗಿ ನೀನು ಮನಸಾ ಆತ್ಮಘಾತಮಾಡಿಕೋ; ಮನಸಾ ಆತ್ಮಘಾತವೆಂದರೆ ಆತ್ಮ ಪೌರುಷವು; ಈಗ ನೀನು ಮನಸೋಕ್ತ ಆತ್ಮ ಪೌರುಷವನ್ನು ಮಾಡಿಕೋ; ಅಂದರೆ ನೀನು ಆತ್ಮ ಘಾತಮಾಡಿಕೊಂಡತಾಗುವದು. ಈ ಆತ್ಮಘಾತದಿಂದ ನಿನಗೊದಗಿದ ಈ ದೋಷವು ನಿವೃತ್ತಿಯಾಗುವದು." ಅದರಂತೆ ಆಚರಿಸಿ ಅರ್ಜುನನು ನಿರ್ದೋಷಿಯಾದನು. ಈ ಕಥೆಯನ್ನು ಹೇಳುವದಕ್ಕೆ ಮುಖ್ಯ ಕಾರಣವಿಷ್ಟೇ; ಆತ್ಮ ಪೌರುಷ ಮಾಡಿಕೊಳ್ಳುವವನು ಆತ್ಮ ಘಾತಕಿಯೆಂದೇ ಭಾವಿಸಬೇಕು. ಪರ ನಿಂದೆಯು ಎಷ್ಟು ಭಯಂಕರವಾಗಿರುವದೋ ಅಷ್ಟೇ ಆತ್ಮ ಪೌರುಷವು ಭಯಂಕರವಾಗಿರುವದು. ಬಲ್ಲವರು ಇವೆರಡರಿಂದಲೂ ಅಲಿಪ್ತರಾಗಿರುವರು. ಶಾಸ್ತ್ರಿಗಳೇ, ನೀವು ಸರ್ವ ಶಾಸ್ತ್ರ-ಪುರಾಣಗಳ ರಹಸ್ಯವನ್ನು ಬಲ್ಲವರಿದ್ದು ಹೀಗೆ ಅಡ್ಡ ದಾರಿಯನ್ನು ತುಳಿಯಬಹುದೆ? ಇತಃಪರ ಧರ್ಮವನ್ನು ಬಿಟ್ಟು ನಡೆಯಬೇಡಿರಿ.

ಪ್ರಭುಗಳ ಈ ಸದುಪದೇಶದಿಂದ ಶಾಸ್ತ್ರಿಯು ಪರಿಶುದ್ಧನಾಗಿ ಪ್ರಭುಗಳ ಭಕ್ತಕೋಟಿಯಲ್ಲಿ ಸೇರಿದನು, ಅವನಿಗೆ ಪ್ರಭುಗಳು ಶಾಲುಜೋಡಿಯನ್ನು ಕೊಟ್ಟು ಅವನನ್ನು ಗೌರವಿಸಿದರು, ಪಾರಮಾರ್ಥಿಕ ದೃಷ್ಟಿಯಿಂದಲೂ, ಲೌಕಿಕ ದೃಷ್ಟಿಯಿಂದಲೂ, ಜನರನ್ನು ಸಮಾಧಾನಗೊಳಿಸುವದೇ ಪ್ರಭುಗಳ ಕರ್ತವ್ಯವಾಗಿತ್ತು.

ಅಂತೇ ಆವರು ಅಡ್ಡದಾರಿಯನ್ನು ತುಳಿಯುತ್ತಿದ್ದ ಶಾಸ್ತ್ರಿಯ ಗರ್ವಹರಣಮಾಡಿಸಿ ಆವನಿಗೆ ಕಲ್ಯಾಣದ ದಾರಿಯನ್ನು ತೋರಿಸಿಕೊಟ್ಟರು. ಪ್ರಾಣಿಗಳು ಯಾವರೀತಿ ಯಿಂದಾದರೂ ದೊಡ್ಡವರ ಬಳಿಗೆಬಂದರೆ ಉದ್ಧಾರದ ಮಾರ್ಗವನ್ನು ಕಂಡುಕೊಳ್ಳು ವರೆಂದು ನಿರ್ವಿವಾದವಾಗಿ ಹೇಳಲಾಗುವದು.

---

## ೧೯ನೆಯ ಪ್ರಕರಣ.

### ನಿ ಯಾ ರ್ ಣ.

ಪ್ರಿಯವಾಚಕರೇ, ಇಲ್ಲಿಯವರೆಗೆ ಪ್ರಭುಗಳ ಬೆಲ್ಲದಚ್ಚಿನಕಿಂತಲೂ ರುಚಿ ಯಾದ ಚರಿತ್ರಾಂಶವನ್ನು ಶ್ರವಣಮಾಡಿದಿರಷ್ಟೇ; ಆದರೆ ಆ ಮಹಾಮಹಿಮರ ನಿರ್ಯಾಣವನ್ನು ಬರೆದು ಅವರ ಈ ದಿವ್ಯವಾದ ಚರಿತ್ರನನ್ನು ಮುಗಿಸುವ ಪ್ರಸಂ ಗವು ಪ್ರಸ್ತುತದಲ್ಲಿ ಒದಗಿದ್ದರಿಂದ ನಮ್ಮ ಲೆಕ್ಕಣಿಕೆಯು ಮುಂದಗತಿಯನ್ನು ತಾಳ ಲಾರಂಭಿಸತೊಡಗಿದೆ. ಚರಿತ್ರವು ಮುಗಿಯಿತೆಂದು ನಿಮಗೂ ವಿಷಾದವೆನಿಸಬಹುದು. ಆದರೆ ಪ್ರಿಯವಾಚಕರೇ, ಹಾಗೆ ವಿಷಾದನನ್ನು ತಿಳಿದುಕೊಳ್ಳಬೇಡಿರಿ, ನಾವೂನೀವೂ ಕೂಡಿಯೇ ಧೈರ್ಯವನ್ನು ತಾಳೋಣ; ಮಹಾತ್ಮರಿಗೆ ನಿರ್ಯಾಣವೆಂಬದು ಮೂ ಲತಃ ಇರುವದೇ ಇಲ್ಲ. ''ಯದೃಷ್ಟಂ ತನ್ನಷ್ಟಂ'' ಎಂದು ಶ್ರುತಿಯಿರುವದರಿಂದ ಕಣ್ಣಿಗೆ ಕಾಣುವದೆಲ್ಲ ನಾಶವಾಗುವದಷ್ಟೇ; ಮಹಾತ್ಮರ ಜಡಶರೀರವಾದರೂ ನಾಶವಂತವೇ ಎಂಬುದನ್ನು ಒಡೆದು ಹೇಳುವ ಕಾರಣವಿಲ್ಲ. ಆದರೆ ನಾವು ಮಾ ಯಾಧೀನರಾಗಿ ಮಹಾತ್ಮರ ಜಡಶರೀರದಲ್ಲಿಯೇ ದೃಷ್ಟಿಯನ್ನಿಟ್ಟು ಕೆಟ್ಟು ಹೋಗು ವೆವು. ಅಂತೇ ಮಹಾತ್ಮರ ವಿಯೋಗವಾಯಿತೆಂಬ ಭ್ರಾಂತಿಯಿಂದ ವ್ಯಸನಾಕ್ರಾಂ ತರಾಗುವೆವು. ಹೀಗೆ ನಮಗೆ ಎಲ್ಲಿಯ ವರೆಗೆ ವ್ಯಸನವಾಗುವದೋ ಅಲ್ಲಿಯವರೆ ಗೆ ನಾವು ಸತ್ಪುರುಷರನ್ನು ಕಂಡಿಲ್ಲವೆಂತಲೇ ತಿಳಿಯಬೇಕು. ಸತ್ಸಮಾಗಮದಿಂದ ಜಡ ಸೃಷ್ಟಿಯ ವಿಷಯಕ್ಕೆ ನಿರ್ಮೋಹರಾಗುವದನ್ನು ಬಿಟ್ಟು ಮತ್ತಷ್ಟು ಮೋಹ ಗ್ರಸ್ತರಾದರೆ ನಮ್ಮಂಥ ಮೂರ್ಖರು ಇನ್ನಾರಿರುವರು? ''ಗಂಗಾಪಾಪಂ, ಶಶೀ ತಾಪಂ, ದೈನ್ಯಂ ಕಲ್ಪತರುಸ್ತಥಾ|| ಪಾಪಂ, ತಾಪಂ, ಚ ದೈನ್ಯಂಚ ಸದ್ಯ ಸಾಧು ಸಮಾಗಮಃ|| ಎಂದು ಸಾಧು ಸಮಾಗಮದ ಮಹತಿಯುಂಟು: ಇದರ ತಾತ್ಪರ್ಯ ವಿಷ್ಟೇ; ಗಂಗಾನದಿಯು ಮನುಷ್ಯನ ಪಾಪವನ್ನು ಪರಿಹರಿಸುವದು. ಚಂದ್ರನು

ತಾಪವನ್ನು ನಿವಾರಿಸುವನು. ದೈನ್ಯವನ್ನು ಅಂದರೆ ಬಡತನವನ್ನು ಕಲ್ಪತರುವು ಹೋಗಲಾಡಿಸುವದು. ಆದರೆ ಈ ತ್ರಿತಾಪಗಳನ್ನೂ ಸಾಧು ಸಮಾಗಮವು ಹೊಯ್ದೋಡಿಸುವದು. ಹೀಗೆ ಇಷ್ಟು ಪ್ರಾಶಸ್ತ್ಯವನ್ನು ಸಜ್ಜನರ ಸಮಾಗಮಕ್ಕೆ ಕೊಡಬೇಕಾದರೆ ಅವರಲ್ಲಿ ಎಷ್ಟು ಮಹತ್ವವಿರಬೇಕೆಂಬುದು ಸ್ಪಷ್ಟವಾಗುತ್ತದೆ, ವಸ್ತುಸ್ಥಿತಿಯು ಹೀಗಿದ್ದು ಸಾಧು ಸಮಾಗಮವನ್ನು ತಪಗಟ್ಟಲೆ ಮಾಡಿ ಈ ಮೇಲಿನ ತ್ರಿತಾಪಗಳಿಂದ ಸರ್ವದಾ ನರಳುತ್ತ ಆ ಪ್ರಾಶಸ್ತ್ಯ ಶ್ಲೋಕಕ್ಕೆ ಅರದಾಳ ಹಚ್ಚುವ ಜನರು ಹೇರಳವಾಗಿ ಸಿಕ್ಕುವರು. ಆದರೆ ಇದರ ಕಾರಣವನ್ನು ಸಮ್ಮ ವಾಚಕರು ಕಂಡು ಹಿಡಿಯ ಬೇಕಾಗಲಾರದು. ಸಾಧು ಸಮಾಗಮದಿಂದ ಜಗತ್ತಿನಲ್ಲಿಯ ಮೋಹಾಸಕ್ತಿಯು ಕಳೆದು ಹೋಗುವದರಿಂದ ಅದನ್ನನುಸರಿಸುವನು ನಾನು ಪಾಪಿಯೆಂದೂ, ಬಡವನೆಂದೂ, ದುಃಖಿತನಾಗುವನೆಂದು ಚಿಂತಿಸುವನು? ಎಂಥ ಪರಿಸ್ಥಿತಿಯು ಒದಗಿದರೂ ಅವನು ಚಿಂತಾರಹಿತನಾಗಿ ಸರ್ವದಾ ಆನಂದ ಮಯನಾಗಿ ಕಾಲ ಕಳೆಯುವನು. ಯಾವನಿಗೆ ಸತ್ಸಮಾಗಮದಿಂದ ನಿರ್ಮೋಹತ್ವ ವುಂಟಾಗಿಲ್ಲವೋ ಅವನು ಮಾತ್ರ ಜಡ ಸೃಷ್ಟಿಯ ಮೇಲಿಯೇ ಕೈಯೂರಿ ಗೋಳಾಡುವನು. ಇಂಥ ಜನರ ಸಂಖ್ಯೆಯೇ ಹೆಚ್ಚು; ಸತ್ಪುರುಷರ ಸನ್ನಿಧಿಯಲ್ಲಿದ್ದ ಎಲ್ಲ ಜನರಿಗೂ ನಿರ್ಮೋಹ ಸ್ಥಿತಿಯು ಪ್ರಾಪ್ತವಾಗುವದಿಲ್ಲ. ಅದನ್ನು ಕೈವಶ ಮಾಡಿಕೊಳ್ಳಬೇಕೆಂದು ಇಚ್ಛಿಸುವವನು ಮಾತ್ರ ಅದಕ್ಕೆ ಅಧಿಕಾರಿಯಾಗುವನು.

ಶ್ರೀ ಮಾಣಿಕ ಪ್ರಭುಗಳ ಬಳಿಯಲ್ಲಾದರೂ ಇಂಥ ಜನರು ಅಸಂಖ್ಯವಾಗಿದ್ದರು. ಕೇವಲ ಅಜ್ಞಾನರು; ಸುಜ್ಞಾನರು ಕೇವಲ ಹದಿನೆಂಟು ಪಂಗಡದ ಜನರು ಅವರ ಭಕ್ತ ಕೋಟಿಯಲ್ಲಿ ಸೇರಿಕೊಂಡದ್ದರಿಂದ ಪ್ರಭುಗಳು ತಮ್ಮ ನಿರ್ಯಾಣದ ವಿಷಯವಾಗಿ ಬಹು ಯೋಚನೆ ಮಾಡಬೇಕಾಯಿತು. ಅವರು ಒಂದು ದಿವಸ ತಮ್ಮ ವಿಶ್ವಾಸಿಕ ಶಿಷ್ಯರಲ್ಲಿ ಒಬ್ಬನನ್ನು ಕರೆದು—"ಅಪ್ಪಾ, ಶಿಷ್ಯೋತ್ತಮಾ, ನಾನು, ಈದಿವಸ ನಿನಗೆ ಕೆಲವು ಗೌಪ್ಯ ಸಂಗತಿಗಳನ್ನು ಹೇಳುತ್ತೇನೆ ಅವನ್ನು ನೀನು ಸದ್ಯಕ್ಕೆ ಎಲ್ಲಿಯೂ ಪ್ರಕಟ ಮಾಡಲಾಗದು. ನಾನು ಸಮಾಧಿಯನ್ನು ಆಶ್ರಯಿಸತಕ್ಕವನಿದ್ದೇನೆ. ಇವೊತ್ತಿನಿಂದ ಆರು ತಿಂಗಳಲ್ಲಿ ನೀನು ಗುಪ್ತವಾಗಿ ಸಮಾಧಿಯನ್ನು ಸಿದ್ಧಪಡಿಸಬೇಕು. ಸಹಾಯಕ್ಕಾಗಿ ವಿಶ್ವಾಸಿಕ ಜನರನ್ನೇ ಕರೆದುಕೊ; ಯಾಕಂದರೆ ನಾವು ಸಮಾಧಿಯನ್ನು ತಕ್ಕೊಳ್ಳುವೆನೆಂಬ ಸುದ್ದಿಯು ಜನರಲ್ಲಿ ಪ್ರಸಾರವಾದರೆ ಬಹು ಅನರ್ಥವಾದೀತು! ನಮ್ಮ ಭಕ್ತ ಕೋಟಿಯಲ್ಲಿ ಸೇರಿದ ಜನರು ಹುಂಬರಿರುವರು. ಅವರಲ್ಲಿ ನಮ್ಮ ವಿಷಯಕವಾಗಿ ನಿಷ್ಠೆಯಿರುವದು ಮಾತ್ರ; ಆದರೆ ಅವರು ಮಾಯಾ

ವ್ಯವಹಾರಗಳನ್ನು ನಿಷೇಧಿರುವದಿಲ್ಲ. ಇದ್ದರಿಂದ ಅವರಲ್ಲಿ ನಮ್ಮ ಜಡದೇಹದ ವಿಷಯವಾಗಿ ಮೋಹವು ನಿಂತಿರುವದು. ಈ ಮೋಹದ ವ್ಯಾಪಾರದಿಂದ ಅವರು ನಮ್ಮ ನಿರ್ಯಾಣಕಾಲದಲ್ಲಿ ವಿವೇಕಶೂನ್ಯರಾಗಿ ನಮ್ಮ ದೇಹವನ್ನೇ ತಕ್ಕೊಂಡು ಹೋಗಲು ನಿಮ್ಮಗೂಡ ಗುದ್ದ್ಯಾಡಬಹುದು. ಬ್ರಾಹ್ಮಣ ದೇಹವನ್ನು ಮ್ಲೇಂಛರಿಗೆ ಮುಟ್ಟಸಬಾರದೆಂದು ನೀವು ಅವರೊಡನೆ ಪ್ರತಿ ಕ್ರಿಯೆಗೆ ನಿಲ್ಲಬಹುದು; ಹೀಗಾಗಿ ನಮ್ಮ ನಿರ್ಯಾಣ ನಿಮಿತ್ತದಿಂದ ರಕ್ತ ಕಾಲುವೆಯು ಹರಿಯುವ ಪ್ರಸಂಗ ಬರಬಹುದು. ಆದ್ದರಿಂದ ಈ ವಿಚಾರವನ್ನು ಮೊದಲೇ ತಿಳಿದು ಅದಕ್ಕೆ ತಕ್ಕಂತೆ ಆಚರಿಸುವದು ವಿಹಿತವಾಗಿರುವದು ಎಂದ ನುಡಿದರು. ಅವರ ಈ ಅಪ್ಪಣೆಯಂತೆ ಗುಪ್ತವಾಗಿಯೇ ಸಮಾಧಿಯ ಕಾರ್ಯವು ನಡೆಯಿತು.

ಬಳಿಕ ಪ್ರಭುಗಳ [illegible] ಕರ್ಮ ಭೋಗವನ್ನು ಭೋಗಿಸಿಯೆ ತೀರಬೇಕೆಂಬದನ್ನು ಜಗತ್ತಿ[illegible] ರೋಗಗ್ರಸ್ತವಾಯಿತು. ಅವರಿಗೆ ಅಸಾಧ್ಯ [illegible] ಗಂಟು ಬಿದ್ದಿತು. ಎಂಟೆಂಟು ದಿವಸಗಳಾದರೂ ಅವರಿ[illegible] ಯಾಗುತ್ತಿರಲಿಲ್ಲ. ಹೀಗೆ ಕೆಲವು ಕಾಲ ಕಳೆದ ಬಳಿಕ [illegible]ವರಿಗೆ ಬೆನ್ನಿಗೊಂದು ರಾಜಯಕ್ಷ್ಮ ಹುಟ್ಟಿತು. ಅದು ಮೊದಲು ಗುಳ್ಳೆಯ ಹಾಗೆ ಇದ್ದು. ಬರಬರುತ್ತ ಅಲ್ಪಕಾಲದಲ್ಲಿಯೇ ಬೆಳೆದು ಒಂದುಮೊಳ ಉದ್ದ ಒಂದು [illegible] ಅಗಲ ವಿರ[illegible] ಸ್ಥಳವನ್ನು ವ್ಯಾಪಿಸಿತು; ಈ ಪ್ರಚಂಡ ಹುಣ್ಣಿನಿಂದ ಪ್ರಭುಗಳ ದೇಹವು ಜರ್ಜರವಾಯಿತು; ಏಳಲಿಕ್ಕೆ ಕೂಡ್ರಲಿಕ್ಕೆ ಕೂಡ ಬರದಂತಾಯಿತು ಭಕ್ತ ಮಂಡಲಿಗೆ ದರ್ಶನವಿಲ್ಲದಾಯಿತು. ಒಂದೊಂದು ದಿನ ಪ್ರಭುಗಳು ನಿರಲಂಬಯರಾಗಿ ಕುಳಿತುಕೊಂಡು ಸಮಸ್ತ ಭಕ್ತರನ್ನೂ ಕರೆಯಿಸಿ ಕೊಂಡು ಅಪಂಗ ದರ್ಶನ ಕೊಡುತ್ತಲಿದ್ದರು. ಆಗ ಅವರಿಗೆ ಬೇನೆಯ ವ್ಯಥೆಯು ಸ್ವಲ್ಪವೂ ಇರುತ್ತಿದ್ದಿಲ್ಲ. ಮಹಾತ್ಮರ ಬೇನೆಯು ಅವರ ಇಚ್ಛಾನುವರ್ತಿಯಾಗಿರುವದೆಂಬದು ಜನರ ನಿದರ್ಶನಕ್ಕೆ ಬಂದಿತು. ಸಮಾಧಿಯು ಸಿದ್ಧವಾಯಿತು. ಮುಂದೆ ಒಂದು ದಿನ ಪ್ರಭುಗಳು ತಮ್ಮ ಮಹಿಮೆಯಿಂದ ಬೆನ್ನಮೇಲಿದ್ದ ಹುಣ್ಣನ್ನು ಹೊಟ್ಟೆಯಲ್ಲಿ ತಂದುಕೊಂಡರು. ಬೆನ್ನಮೇಲೆ ಅದರ ಗುರುತು ಕೂಡ ಉಳಿಯಲಿಲ್ಲ ಭಕ್ತರಿಗೆ ಸಂತೋಷವಾಯಿತು. ಆದರೆ ಒಳಗಿನ ಬೇನೆಯನ್ನು ಅವರೇನು ಬಲ್ಲರು? ಈ ಮಾತಿಗೆ ಕೆಲವುದಿನಗಳು ಗತಿಸಿದವು. ಮಾರ್ಗಶೀರ್ಷ ಶುದ್ಧ ದಶಮಿಯ ತಿಥಿಯು ಪ್ರಾಪ್ತವಾಯಿತು; ಅಂದು ಅವರಿಗೆ ೪೫ ವರುಷಗಳು ತುಂಬಿದವು. ಆಗ ಅವರು ತಮ್ಮ ಶಿಷ್ಯರನ್ನು ಹತ್ತಿರ ಕರೆದು ನುಡಿದರೇನಂದರೆ. ಅಪ್ಪಗಳಿರಾ

ನಾಳಿಗೆ ಬೆಳಿಗ್ಗೆ ನಾವು ಸಮಾಧಿಯಲ್ಲಿ ಕುಳಿತು ಕೊಳ್ಳತಕ್ಕವನಿದ್ದೇನೆ. ಇನ್ನು ಮುಂದೆ ನಮ್ಮ ನಿಮ್ಮ ವ್ಯವಹಾರ ಸಂಬಂಧವು ತಪ್ಪುವದು, ನಾನು ಸಮಾಧಿಯನ್ನು ಸೇರಿದ ಹದಿನಾರನೇ ದಿವಸ ಅಪ್ಪಾಸಾಹೇಬನನ್ನು ಗಾದಿಯಮೇಲೆ ಕುಳ್ಳಿರಿಸಿ ಮುಂದೆ ಕಾರ್ಯವನ್ನು ಜರುಗಿಸಿರಿ. ಈ ವಿಷಯದಲ್ಲಿ ಯಾರೂ ಸಂಕೋಚ ತಕ್ಕೊಳ್ಳಲಾಗದು. ನಾನು ಸಮಾಧಿಯನ್ನು ಸೇರಿದಬಳಿಕ ನಾಲ್ಕು ದಿವಸಗಳವರೆಗೆ ಹೊರಗೆ ಯಾರ ಮುಂದೂ ಈ ಸುದ್ದಿಯನ್ನು ಒಡಸುಡಿಯ ಬಾರದು. ಈ ಸಾರೆಯ ದತ್ತೋತ್ಸವವನ್ನು ಯಥಾಸಾಂಗವಾಗಿ ನೆರವೇರಿಸಿರಿ.

ಈ ಮೇರೆಗೆ ನುಡಿದು ಸಶಾಸ್ತ್ರವಾಗಿ ಸಂನ್ಯಾಸ ಗ್ರಹಣ ಮಾಡಿದರು. ಅಪ್ಪಾಸಾಹೇಬನು ಪ್ರಭುಗಳನ್ನು ಪೂಜಿಸಿ ಭಿಕ್ಷೆಯನ್ನು ಸಮರ್ಪಿಸಿದನು. ಆ ದಿವಸ ಏಕಾಂತವಾಸದಲ್ಲಿ ಎಲ್ಲ ಭಕ್ತಜನರು ಉದಾಸೀನರಾಗಿ ಕುಳಿತರು. ಪ್ರಭುಗಳ ವಿಯೋಗವು ಅವರಿಗೆ ಅಸಹ್ಯ ವಾಗಿದ್ದು ಉಪಾಯವಿಲ್ಲದೆ ಅದನ್ನು ಅವರು ಸಹನ ಮಾಡಬೇಕಾಯಿತು. ಸಂಜೆಯ ವರೆಗೆ ಯಾರೂ ಊಟಮಾಡಲಿಲ್ಲ; ದಶಮಿಯ ರಾತ್ರಿಯೂ ಕಳೆದು ಹೋಯಿತು. ಮರುದಿನ ಏಕಾದಶಿಯು. ಅಂದೇ ಪ್ರಭುಗಳು ಸಮಾಧಿಯನ್ನು ಪ್ರವೇಶ ಮಾಡತಕ್ಕವರು. ಅವರು ನಸುಕಿನಲ್ಲಿ ಸ್ನಾನ ಮಾಡಿ ಅಪ್ಪಾಸಾಹೇಬನಿಂದಲೂ ಬೇರೆ ಭಕ್ತರಿಂದಲೂ ಪೂಜೆ ಮಾಡಿಸಿಕೊಂಡು ಮೈಗೆಲ್ಲ ರಕ್ತಚಂದನವನ್ನು ಲೇಪನ ಮಾಡಿಸಿಕೊಂಡರು. ಹತ್ತರ ನಿಂತಿದ್ದ ಭಕ್ತರಿಗೆ ಹೇಳತಕ್ಕದ್ದನ್ನು ಹೇಳಿದರು. ಅಷ್ಟರಲ್ಲಿ ಪೈಠಣದಿಂದ ಒಬ್ಬ ಸಾಧುಗಳು ದರ್ಶನಕ್ಕೆ ಬಂದರು. ಅವರು ಏಕನಾಥಮಹಾರಾಜರ ವಂಶದವರಾಗಿದ್ದರು; ಪ್ರಭುಗಳು ಅವರನ್ನು ಒಳಗೆ ಕರೆಯಿಸಿಕೊಂಡು ದರ್ಶನಕೊಟ್ಟರು; ಮತ್ತು ದ್ವಾರಪಾಲಕನನ್ನು ಕರೆಯಿಸಿ ಅವನಿಗೆ ತಮ್ಮ ನಿರ್ಮಾಲ್ಯ ಪುಷ್ಪಮಾಲಿಕೆಯಪ್ರಸಾದವನ್ನು ಕೊಟ್ಟರು. ಬಳಿಕ ಅವರು ಸಮಸ್ತರ ಅಪ್ಪಣೆಯನ್ನು ತಕ್ಕೊಂಡು ಸಮಾಧಿಯನ್ನು ಹೊಕ್ಕು ಕುಳಿತುಕೊಂಡರು; ಸಮಾಧಿಯರಚನೆಯು ಬಹುಉತ್ಕೃಷ್ಟ ವಾಗಿತ್ತು. ಒಳಗೆ ಎರಡು ಸಮೆಗಳನ್ನು ಹಚ್ಚಿದ್ದರು ಸುಗಂಧದ್ರವ್ಯಗಳ ಧೂಪ ದೀಪಗಳ ಸುವಾಸವಂತೂ ದಶದಿಕ್ಕುಗಳನ್ನು ವ್ಯಾಪಿಸುತ್ತಿತ್ತು. ಸಮಾಧಿಯಲ್ಲಿ ಕುಳಿತಾಗ ಪ್ರಭುಗಳದಿವ್ಯ ಕಾಂತಿಯು ನೋಡುವವರ ನೇತ್ರ ಸಾಫಲ್ಯವನ್ನೂ ಜನ್ಮ ಸಾಫಲ್ಯವನ್ನೂ ಮಾಡಿತು; ಸಮಸ್ತರೂ ಹೊರಗೆ ನಿಂತುಕೊಂಡು ಪ್ರಭುಗಳ ಜಯ ಜಯ ಕಾರವನ್ನು ಮಾಡಿದರು.

ಜನರು ನಿಮಿತ್ತಕ್ಕಾಗಿ ಉತ್ಸುಕತೆಯನ್ನು ತೋರಿಸುತ್ತಿದ್ದರೇ ಹೊರತು ನಿಜವಾಗಿ ನೋಡಿದರೆ ಅವರಲ್ಲಿ ಸಮಾಧಾನ ಎದ್ದಿಲ್ಲ. ಮುಂದೆ ಪ್ರಭುಗಳ ಅಪ್ಪಣೆಯಂತೆ

ಸಮಾಧಿಯು ಮುಚ್ಚಲ್ಪಟಿತು. ಆಗಂತೂ ಭಕ್ತಮಂಡಲಿಗಾದ ಅಸಮಾಧಾನವನ್ನು ಹೇಳಲಾಸಲ್ಲ. ನಾಲ್ಕು ದಿನಗಳವರೆಗೆ ಯಾರೂ ಬಿಟ್ಟೆಂದು ಮಾತಾಡುವ ಹಾಗಿದ್ದಿಲ್ಲ. ಪ್ರಭುಗಳು ಸಮಾಧಿಸ್ಥರಾದರೆಂದು ಸುದ್ದಿಯನ್ನು ಬೀಳುವಹಾಗಿದ್ದಿಲ್ಲ. ಆದ್ದರಿಂದ ಅವರೆಲ್ಲರೂ ಮೂಕಭಾವದಿಂದ ತಮ್ಮ ಮನೋದುಃಖವನ್ನು ತಾವೇ ನುಂಗಿಕೊಳ್ಳಬೇಕಾಯಿತು. ಒಂದು ದಿನವಾಯಿತು, ಎರಡು ದಿನಗಳಾದವು, ಮೂರನೆಯ ದಿನ ಜನರಲ್ಲಿ ಪ್ರಭುಗಳ ನಿರ್ಯಾಣದ ಸುದ್ದಿಯು ಮೆಲ್ಲಡಿ ಇಟ್ಟಿತು. ನಾಲ್ಕನೆಯ ದಿನವಂತೂ ಗ್ರಾಮ್ಯ [illegible] ಸಾರತೇ ಉಳಿಯುತ್ತಿಲ್ಲ; ಆಗ ರೋಹಿಲರಿಗೂ ಮುಸಲ್ಮಾನರಿಗೂ ಈ ಸುದ್ದಿಯು ಮುಟ್ಟಿತು. ಅವರು ಸಂಕಟಪಡುತ್ತ ಪ್ರಭುವಿನ ಬಾಗಿಲಕ್ಕೆ ಬಂದು [illegible] ಬಂದರು ಹೇಳಿ ಕೇಳಿ ಅಜ್ಞಾನಿಗಳಿದ್ದರು. ಪ್ರಭುಗಳ ವಿಷಯವಾಗಿ ಅವರಲ್ಲಿ ಸಂಪೂರ್ಣ ಶ್ರದ್ಧೆಯಿತ್ತು; ಆದ್ದರಿಂದ ಅವರಿಗೆ ಪ್ರಭುಗಳ ವಿಯೋಗವು [illegible] ಪರಿಶ್ರೇಶವನ್ನೆಬ್ಬಿಸಿದರು. ಹಲವರು ಹೊಸ್ತಿಲಕ್ಕೆ ಹಾಯ್ದರು, ಬೇರೆ ಕೆಲ [illegible] ಹಚ್ಚಿಸಿದರು, ಬೇರೆ ಕೆಲವರು ಹೊಟ್ಟೆಯಲ್ಲಿ ಚೂರಿಯನ್ನು [illegible] ಪ್ರಾಂತರಾದ ಅನೇಕರು ಪ್ರಭುಗಳ ಮನೆಯನ್ನು ಒಳಸುಗ್ಗಿ [illegible] ಯನ್ನು ಕಿತ್ತೊಗೆದು ಪ್ರಭುಗಳನ್ನು ನೋಡುತ್ತೇವೆಂದು [illegible] ಹೀಗೆ ಗೊಂದಲವು ನಡೆಯಲು, ಈ ಸುದ್ದಿಯು [illegible] ಎಷ್ಟೋ ಜನ ಸರಕಾರೀ ಅಧಿಕಾರಿಗಳಿಗೆ ಗೊತ್ತಾಯಿತು. ಅವರು [illegible] ಬಂದು ಮುಸಲ್ಮಾನ ಭಕ್ತರಿಗೆ ಸಮಾಧಾನವನ್ನು ಹೇಳಿ ಅವರ [illegible] ಕೆಡಿಸುವ ವಿಚಾರವನ್ನು ತಿರುಗಿಸಿದರು. ಮುಂದೆ ಒಂದೆರಡು ದಿನಗಳಲ್ಲಿ ಎಲ್ಲರಿಗೂ ಪ್ರಭುಗಳ ವಿಯೋಗವು ಮೈಯುಂಡು ಹೋಯಿತು: ಸಮುತ್ತರ [illegible] ಪ್ರಭುಗಳ ಸಮಾಧಿಗೆ ಸಲಾಮು ಮಾಡಿ ಹೊರಟು ಹೋದರು. ಪ್ರಭುಗಳ ಪ್ರೀತ್ಯರ್ಥ ದಾನಧರ್ಮಗಳು ಮಾಡಲ್ಪಟ್ಟವು. ಹದಿನಾರನೆಯ ದಿನ [illegible] ಬಾಪೂರಾಯರನ್ನು ಯಥಾವಿಧಿಯಿಂದ ಗಾದಿಯಮೇಲೆ ಕುಳ್ಳಿರಿಸಿದರು. ಪ್ರಭುಗಳ ಆಶೀರ್ವಾದದಿಂದ ಅವರ ಪೀಠಕ್ಕೆ ಬಂದ ಆ ಬಾಲಕನಿಂದ ಪ್ರಭುಗಳು ಆರಂಭಿಸಿದ ಕಾರ್ಯಗಳು ಸುರಳೀತವಾಗಿ ಜರುಗತೊಡಗಿದವು. ಪ್ರಭುಗಳು ವಿದೇಹ ಸ್ಥಿತಿಯಲ್ಲಿದ್ದುಕೊಂಡು ಭಕ್ತರ ಕಲ್ಯಾಣವನ್ನು ಮಾಡ ತೊಡಗಿದರು.—ಓಂ, ಶಾಂತಿ, ಶ್ಯಾಂತಿಃ||

ಸಂಪೂರ್ಣ.